ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜೂನ್ 2025

ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:04, Issue:11, Pages:56
June - 2025,Price Rs.20/-



ತಿರುಪತಿ,

## ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

02-06-2025 ರಿಂದ 10-06-2025 ರ ವರೆಗೆ

ಒಂಟಿಮಿಟ್ಟ ಶ್ರೀ ಸೀತಾರಾಮಚಂದ್ರರ ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ. 11-04-2025 ರಂದು ಒಂಟಿಮಿಟ್ಟದಲ್ಲಿ ನಡೆದ ಶ್ರೀ ಸೀತಾರಾಮರ ಕಲ್ಯಾಣೋತ್ಸವ ಸಂದರ್ಭವಾಗಿ ಆಂಧ್ರಪ್ರದೇಶ ರಾಜ್ಯದ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸತೀಸಮೇತವಾಗಿ ಸಮರ್ಪಿಸುತ್ತಿರುವ ಆಂಧ್ರಪ್ರದೇಶ ರಾಜ್ಯದ ಮುಖ್ಯ ಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು.

















# ಭಗವ ಗೀತೆ

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -28)

ಅರ್ಜುನ, ಪ್ರಾ ಗಳೆಲ್ಲ ಕಾಣದ ಕಡೆ ಿಂದ ಬಂದಿದೆ. ನಡುವೆ ಒಂದಿಷ್ಟು ಕಾಲ ಕಾ ಸುತ್ತವೆ, ಮತ್ತೆ ಪುನಃ ಕಾಣದ ಕಡೆಗೇ ತೆರಳುತ್ತವೆ. ಈ ವಿಷಯದಲ್ಲಿ ದುಃಖವೇಕೆ?



ಬಾರೋ ವೆಂಕಟರಮ । ಬಾರೋ ಶುಭಚರ ॥ಪ॥
ಬಾ ಲಕ್ಷ ಭರತಾಗಜ ಲಕುಮೀರಮಣಾ ॥ಅ.ಪ.॥
ದೇವರದೇವಾ ಮಹಾನುಭಾವ।
ಭಾವಜನಯ್ಯನೇ ಮಾಧವಾ॥
ಕಾವದೇವ ೀನಲ್ಲದೆ ಕಾವರ ದಾವನ ನಾಕಾಣೆ ॥1॥
ಮಚ್ಚಕೂರ್ಮ ವರಹಾ ಂಹನೆ।
ಸುಶವಾಮನ ಭಾರ್ಗವರಾಮ॥
ಸುಚ್ಚರಿತ ರಾಮ ಕ ಷ್ಣ ಬುದನೆ।
ಅಚ್ಚ ತುರಗನೇರಿ ಮೆರೆವ ಕಲ್ಕಿಯೆ ॥2॥
ಶೀಶಾ ಶೀ ಪಸನೂಕಟನಾಯಕ
ವ್ಯಾಸಕರಾರ್ಚಿತ ವಾಸುದೇವನೆ ॥
ಸಾ ರನಾಮದ ಶೀ ಹ ಕೇಶನೆ ಘನ।
ದಾಸರಿಗೊಲಿದಾ ಶೇಷಾ ವಾಸನೆ ॥3॥

- ಶ್ರೀ ವಿದ್ಯೇಶ ವಿ ್ಠಲ

# ದಯಾ ಶತಕಮ್



**ಪ್ರಾಯೋ ದಯೇ ತ್ವದನುಭಾವಮಹಾಂಬುರಾಶೌ ಪ್ರಾಚೇತಸಪ್ರಭೃತಯೋಽ ಪಿ ಪರಂ ತಟಸ್ಥಾಃ**
**ತತ್ರಾವತೀರ್ಣಮತಲಸ್ಪೃಶಮಾಪ್ಲುತಂ ಮಾಂ ಪದ್ಮಾಪತೇಃ ಪ್ರಹಸನೋಚಿತಮಾದ್ರಿಯೇಥಾಃ॥103॥**

ಹಿಂದಿನ ಪದ್ಯದಲ್ಲಿಯೂ ದಯಾದೇವಿಯ ಮಹಿಮೆಯನ್ನೂ ವೈಶಿಷ್ಟ್ಯವನ್ನೂ ಸ್ತುತಿಸಿ, ಆಕೆಯನ್ನು ಸ್ತುತಿಸುವುದಕ್ಕೆ ಇದು ಮೊದಲ ಪ್ರಯತ್ನವೆಂದೂ, ಆದ್ದರಿಂದ ಇದರಲ್ಲಿರಬಹುದಾದ ದೋಷಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಹಿಸಿಕೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ. ಅದೇ ವಿಚಾರವನ್ನು ಮತ್ತೊಂದು ರೀತಿಯಿಂದ ಈ ಪದ್ಯದಲ್ಲಿ ದಯಾದೇವಿಯನ್ನು ಸ್ತುತಿಸಿದ್ದಾರೆ.

ದಯಾದೇವಿಯ ಪ್ರಭಾವವನ್ನು ಮಹಾಸಮುದ್ರಕ್ಕೆ ಹೋಲಿಸಿ ಆಕೆಯ ಮಹಿಮೆಯನ್ನು ಬಹಳ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಮಹಾಸಮುದ್ರವು ಬಹಳ ವಿಸ್ತಾರವಾದದ್ದು, ಆಳವಾದದ್ದು ಮತ್ತು ಗಹನವಾದದ್ದು. ಅದನ್ನು ರತ್ನಾಕರವೆಂದು ಕರೆಯುತ್ತೇವೆ. ಅದರ ಗರ್ಭದಲ್ಲಿ ಅಡಗಿರುವ ರತ್ನಗಳನ್ನು ಕಂಡಕೊಂಡು ಪಡೆಯಬೇಕಾದರೇ ವಿಶೇಷವಾದ ಪರಿಶ್ರಮವುಳ್ಳವರಾಗಬೇಕು. ಅಂತಹವರು ಕೂಡ ಅನೇಕ ವೇಳೆ ಆ ಕೆಲಸದಲ್ಲಿ ಅಸಫಲರಾಗುತ್ತಾರೆ. ಅಂತಹುದರಲ್ಲಿ ಅಲ್ಪ ಪರಿಶ್ರಮವುಳ್ಳವರಾಗಲಿ ಪರಿಶ್ರಮವಿಲ್ಲದವರಾಗಲಿ ಪ್ರಯತ್ನಿಸಿದರೆ ಆ ಕೆಲಸದಲ್ಲಿ ಸ್ವಲ್ಪವೂ ಮುಂದುವರಿಯಲಾರದವರಾಗುತ್ತಾರೆ. ಹಾಗೆಯೇ ದಯಾದೇವಿಯ ಪ್ರಭಾವವೂ ಕೂಡ ಅತ್ಯಂತ ವ್ಯಾಪಕವಾದದ್ದೂ, ಗಹನವಾದದ್ದೂ ಆಗಿದೆ. ಅದರ ವ್ಯಾಪ್ತಿಯನ್ನು ಅರಿತು ಕೊಳ್ಳುವುದು ಬಹಳ ಕಷ್ಟ, ವಾಲ್ಮೀಕಿ ಮಹರ್ಷಿಗಳು ಆದಿಕವಿಗಳೆಂದು ಪ್ರಸಿದ್ಧರಾಗಿದ್ದಾರೆ. ಅವರಿಗೆ ಕವಿತಾಶಕ್ತಿ ದೈವದತ್ತವಾಗಿ ಬಂದದ್ದು. ಆದಿಕಾವ್ಯವೆಂದು ಪ್ರಸಿದ್ಧವಾಗಿರುವ ರಾಮಾಯಣವನ್ನು ದೈವದತ್ತವಾದ ದಿವ್ಯಜ್ಞಾನದಿಂದ ಕಂಡುಕೊಂಡು ರಚಿಸಿರುವರು. ಅವರು ಅದರಲ್ಲಿ ಅತ್ಯಂತ ಸೂಕ್ಷ್ಮವಾದ ಲೌಕಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಕೂಡ ವಿವರಿಸಿ ಬರೆದಿದ್ದಾರೆ. ಅಂತಹ ವಾಲ್ಮೀಕಿಯೇ ಮೊದಲಾದ ಪ್ರತಿಭಾವಂತರು ಕೂಡ ಅತ್ಯಂತ ಗಹನವಾದ ದಯಾದೇವಿಯ ಪ್ರಭಾವದ ವ್ಯಾಪ್ತಿಯನ್ನು ತಿಳಿದುಕೊಳ್ಳಲಾರದವರಾಗಿದ್ದಾರೆ. ಹೀಗಿರುವಲ್ಲಿ ಅದನ್ನು ತಿಳಿದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವ ತಾನು ಹಾಸ್ಯಕ್ಕೆಡೆಯಾಗುವೆನೆಂದೂ ಆ ಪ್ರಯತ್ನದಲ್ಲಿ ಸಂಪೂರ್ಣವಾಗಿ ಅಸಫಲನಾಗುವೆನೆಂದೂ ಹೇಳಿಕೊಳ್ಳುತ್ತಾರೆ. ಇಂತಹವನಾದರೂ ಕೂಡ ತನ್ನನ್ನು ಅದಕ್ಕೆ ಪಾತ್ರನನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಅಂದರೆ ದಯಾದೇವಿಯ ಮಹಿಮೆ ಅಗಾಧವಾದುದೆಂದೂ ಎಂತಹವರಿಂದಲೂ ತಿಳಿಯಲು ಶಕ್ಯವಾದುದೆಂದೂ ಆದರೂ ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ ಈ ಸ್ತೋತ್ರದ ಮೂಲಕ ಸ್ತುತಿಸುತ್ತಿರುವ ತನ್ನನ್ನು ತಿರಸ್ಕರಿಸಬಾರದೆಂದು ಅಭಿಪ್ರಾಯ. ದಯಾದೇವಿಯ ಪ್ರಭಾವವು ಹೇಗೆ ಅಗಾಧವಾದುದೆಂದರೆ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ ಹೇಗೆ ವ್ಯಾಪಕವೆಂದರೆ ತನ್ನ ಪ್ರಭಾವದಿಂದ ಅಪರಾಧಿ ಚೇತನರನ್ನೂ ಉದ್ಧರಿಸುವಂತೆ ಭಗವಂತನನ್ನು ಒತ್ತಾಯ ಪಡಿಸುವವಳು. ಆದ್ದರಿಂದ ಭಗವಂತನ ಕೆಲಸಗಳಿಗೆಲ್ಲ ಆಕೆಯೇ ಮೂಲ. ಹೀಗೆ ದಯಾದೇವಿಯ ಪ್ರಭಾವವನ್ನು ಆಕೆಯ ಮಹಿಮೆಯನ್ನು ಸ್ತುತಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಜ್ಯೇಷ್ಠ - ಆಷಾಢಮಾಸ ಸಂಚಿಕೆ

ಸಂಪುಟ : 04 ಜೂನ್ - 2025 ಸಂಚಿಕೆ : 11



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ.ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,
ಪಿ.ಜಿ. ಡಿಪ್ಲೊಮಾದಲ್ಲಿ ಎಫಿಗ್ರಫಿ, ಡಿಪ್ಲೊಮಾ ಇನ್ ಯೋಗ

**ಸಂಪಾದಕರು**
ಡಾ॥ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್, ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ., ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಮಾಸದ ಮಹಿಮೆ | - ಶ್ರೀಮತಿ. ವಾರುಣಿ ಹೊನ್ನಾಳಿ | 07 |
| ಪ್ರದೋಷ ಪೂಜೆಯ ಪ್ರಾಮುಖ್ಯತೆ | - ಎಸ್. ಗೋಪಾಲ್ | 11 |
| "ತ್ರಿ" ಲೋಕಪಾವನೆ "ಗಂಗಾಮಾತೆ" | - ಬೆಳವಾಡಿ ಅಶ್ವತ್ಥನಾರಾಯಣ | 12 |
| ಮಾರ್ಕಂಡೇಯರ ಪ್ರಸಂಗ | - ಪದ್ಮನಾಭರಾವ್ | 15 |
| ಮನಸ್ಸಿನ ಭಾವನ ತರಂಗಗಳು | - ವಿ. ನಾಗೇಂದ್ರ ಪ್ರಸಾದ್ | 16 |
| ತಪ್ತ ಚಕ್ರಾಂಕನ ಪ್ರಮಾಣ | - ರಾ.ನ.ನ. ಮೂರ್ತಿ | 19 |
| ಸುಂಕಾತೊಣ್ಣೂರು ಚನ್ನಕೇಶವ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಲೋಕವೆಲ್ಲಾ ನಾದಮಯ | - ಡಾ॥ ಗುರುರಾಜಪೋಶೆಟ್ಟಿಹಳ್ಳಿ | 23 |
| ತಿರುಪ್ಪಾರ್ಥನ್ ಪ್ಪಳ್ಳಿ | - ಶ್ರೀಮತಿ. ಸೂರ್ಯವಂಶಿ | 26 |
| ಪರಮಯೋಗಿನಿ ಶ್ರೀತರಿಗೊಂಡ ವೆಂಗಮಾಂಬ ವಿವರಿಸಿದ ಅಷ್ಟಾಂಗ ಯೋಗ | - ಎಸ್.ವಾದಿರಾಜ | 27 |
| ಶ್ರೀ ಪಾದರಾಜರು | - ರಾಘವೇಂದ್ರನ್ ಹೆಚ್.ಎನ್ | 31 |
| ಯೋಗ-ಸ್ವಸ್ಥ ವಿಶ್ವಕ್ಕೆ ಭಾರತದ ಕೊಡುಗೆ | - ಶ್ರೀಮತಿ. ಕೆ.ವಿ. ಪದ್ಮಾವತಿ | 34 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 37 |
| ಶ್ರೀರಘುನಾಥತೀರ್ಥರ ಆರಾಧನೆ | - ಕಿರಣಜೋಶಿ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 41 |
| ಶ್ರೀ ಪ್ರದ್ಯುಮ್ನ ತೀರ್ಥ ಕೃತಿ ಸಂಪದ | - ಡಾ॥ ಸುಮನ ಬದರೀನಾಥ್ | 43 |
| ರಾಶಿಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ-ಪುತ್ರ ವ್ಯಾಮೋಹಕ್ಕಿಂತ ರಾಜ್ಯದ ಹಿತ ಮುಖ್ಯ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಬಾಲ ಗೋಪಾಲನ ಲೀಲೆಗಳು | - ಶ್ರೀಮತಿ. ಜೆ. ಪದ್ಮಿನಿ ಪ್ರಿಯದರ್ಶಿನಿ | 52 |


**ಮುಖಚಿತ್ರ** - ಉಭಯದೇವಿಯರೊಂದಿಗೆ ಶ್ರೀಗೋವಿಂದರಾಜ ಸ್ವಾಮಿಯವರು, ತಿರುಪತಿ

**ಹಿಂಬದಿಚಿತ್ರ** - ಉಭಯದೇವಿಯರೊಂದಿಗೆ ಶ್ರೀಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು, ಅಪ್ಪಲಾಯಗುಂಟ

# ಯೋಗ ಒಂದು ರೋಗ್ಯ ಮಾರ್ಗ

ನಮ್ಮ ಪುರಾತನ ಸಂಸ್ಕೃತಿಯಲ್ಲಿ ಒಂದು ಪದತಿ "ಯೋಗ"! ಭಾರತೀಯರ ಋಷಿಗಳ ತಪಃಫಲವಾದ ಯೋಗಶಾಸ್ತ್ರ ಸಮಸ್ತ ಜಗತ್ತಿಗೆ ಶಾಂತಿ, ಆರೋಗ್ಯ, ಆತ್ಮಶುದಿಯನ್ನು ಒದಗಿಸುವ ಮಾರ್ಗದರ್ಶಕವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಯೋಗ ಎನ್ನುವುದು ಕೇವಲ ಶಾರೀರ ವ್ಯಾಯಾಮ ಮಾತ್ರಾ ಅಲ್ಲ! ಅದು ಮನಸ್ಸು, ಶರೀರ ಮತ್ತು ಆತ್ಮಗಳ ಹೊಂದಾ ಕೆಯ ದಾರಿ!

ಯೋಗ ಎಂಬ ಪದವು ಸಂಸ್ಕೃತ ಭಾಷೆಯಲ್ಲಿ ಯುಜ್ ಎನ್ನುವ ಧಾತುವಿನಿಂದ ಜನಿ ದೆ. ಇದರ ಅರ್ಥ ಏಕತೆಯನ್ನು ಸಾಧಿಸುವುದು ಎಂದರ್ಥ! ಯುಜ್ಯತೇ ಅನೇನ ಇತಿ ಯೋಗಃ' 'ಯುಜ್ಯತೇ ಏ ತದಿತಿ ಯೋಗಃ- ಎನ್ನುವ ವ್ಯುತ್ಪತ್ತಿಯನ್ನು ಗಮನಿ ದರೆ ಇಂದ್ರಿಯವನ್ನು ನಮ್ಮ ಹಿಡಿತದಲ್ಲಿಟ್ಟುಕೊಂಡು ಮನಸ್ಸನ್ನು ಭಗವಂತ ಅಥವಾ ಪರಮಾತ್ಮನಲ್ಲಿ ಕೇಂದ್ರೀಕರಿಸುವುದು ಎಂದರ್ಥ.

ಆದಿಶೇಷಾಂಶನ ಸಂಭೂತನಾದ 'ಪತಂಜಲಿ' ಮಹರ್ಷಿ ಯೋಗಶಾಸ್ತ್ರದ ಕರ್ತನಾಗಿದ್ದಾನೆ. ತನ್ನ ಯೋಗ ಶಾಸ್ತ್ರದಲ್ಲಿ 'ಯೋಗಃ ಚಿತ್ತವೃತ್ತಿನಿರೋಧಃ' ಮನ ್ಸನ ಚಂಚಲತೆಯನ್ನು ನಿಯಂತ್ರಿಸುವುದೇ ಯೋಗದ ಪ್ರಧಾನವಾದ ಲಕ್ಷಣವೆನ್ನುತ್ತಾರೆ. ಯೋಗ ಒಂದು ಸಮಗ್ರ ಜೀವನ ವಿಧಾನ. ಆಧುನಿಕ ಮಾನವ ಜೀವನಕ್ಕೆ ದಿವ್ಯವಾದ ಔಷಧವಾಗಿದೆ. ಇಂದಿನ ವೇಗವಾದ ಜೀವನ ಶೈಲಿ, ಮಾನ ಕ ಉದ್ವೇಗಗಳು, ಶಾರೀರಕ ಅಸಂಪ ರ್ಣತೆಯು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಯೋಗದ ಪ್ರಾಮುಖ್ಯತೆ ಬಹಳಷ್ಟೇ ಹೆಚ್ಚಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಪ್ರಾಣಾಯಾಮ, ಧ್ಯಾನದಂತಹವು ಮನ ್ಸಗೆ ಸಮತೋಲನವನ್ನು ್ಥರತೆಯನ್ನು ನೀಡುತ್ತವೆ.

ಯೋಗಶಾಸ್ತ್ರವನ್ನು ಪುಸ್ತಕದ ರೂಪದಲ್ಲಿ ನೀಡುವ ನ್ವಿ ್ಟನಲ್ಲಿ ತಿರುಮಲೆ ತಿರುಪತಿ ದೇವಸ್ಥಾನದವರು 'ಯೋಗಸರ್ವಸ್ವ' ಮಾತೃಶ್ರೀ ತರಿಗೊಂಡ ವೇಂಗಮಾಂಬ ರಚಿ ರುವ 'ಅಷ್ಟಾಂಗ ಯೋಗಸಾರ' ಎಂಬ ಗ್ರಂಥವನ್ನು ಭಕ್ತರಿಗಾಗಿ ನೀಡಿದೆ. ಇದರ ಮೂಲಕ ಯೋಗದ ಬಗೆಗೆ ಆಸಕ್ತಿಯನ್ನು ಆಸೆಯನ್ನು ಹೆಚ್ಚಿಸುವಂತೆ ಮಾಡಿದೆ.

ಈ ಅದ್ಭುತವಾದ ಧಾರ್ಮಿಕ ಪರಿಜ್ಞಾನವನ್ನು ಪರಿಚ ಯಿಸುವ ಪ್ರಯತ್ನದ ಅಂಗವಾಗಿ 2015 ನೇ ವರ್ಷದಲ್ಲಿ ಮೊದಲಬಾರಿಗೆ ಜೂನ್ 21 ರಂದು ಅಂತರಾಷ್ಟ್ರೀಯ ಯೋಗಾ ದಿನೋತ್ಸವವಾಗಿ ಆಚರಿಸುವ ಪದತಿ ಪ್ರಾರಂಭವಾಗಿದೆ. ಇದರ ಮೂಲಕ ಯೋಗದ ಪ್ರಾಮುಖ್ಯತೆಯನ್ನು ಗುರುತಿ ಪ್ರಪಂಚದಾದ್ಯಂತ ಆರೋಗ್ಯ, ಮಾನ ಕ ಸಂಸ್ಕೃತಿಯನ್ನು ಬೆಳೆಸಬೇಕೆಂಬ ಸಂಕಲ್ಪ ಕಂಡು ಬರುತ್ತಿದೆ.

ಯೋಗ ಎನ್ನುವುದು ಒಂದು ಸತ್ಯದ ಪಯಣ, ಜೀವನದ ಮೌಲ್ಯಗಳನ್ನು ತಿಳಿದುಕೊಳ್ಳುವ ಮಾರ್ಗದರ್ಶಕವಾಗಿದೆ. 'ಲೋಕಾಃ ಸಮಸ್ತಾಃ ಸುಖಿನೋ ಭವಂತು' ಎಂಬ ಆಧ್ಯಾತ್ಮಿಕ ಸಂಕಲ್ಪಕ್ಕೆ ಯೋಗವು ಮೂಲ ಮಂತ್ರವಾಗಿದೆ. ಈ ಯೋಗಾ ದಿನೋತ್ಸವದ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ದಿನಚರಿಯಲ್ಲಿ ಭಾಗವಾಗಿ ಕೊನೇ ಪಕ್ಷ ಸ್ವಲ್ಪ ಸಮಯವನ್ನು ಮೀಸಲಿರಿ ಆತ್ಮಶುದಿಯನ್ನು ಆರೋಗ್ಯವೃದಿಯನ್ನು ಪಡೆಯಬೇಕಾಗಿದೆ. ಇನ್ನು ಅಖಿಲಾಂಡ ಕೋಟ್ವಿ ಬ್ರಹ್ಮಾಂಡ ನಾಯಕನಿಗೆ ಪ್ರತಿ ವರ್ಷ ನಡೆಯುವ ಜ್ಯೇಷ್ಠಾಭಿಷೇಕ ಈ ತಿಂಗಳ ಜ್ಯೇಷ್ಠ ಶುಕ್ಲತ್ರಯೋದಶಿ ಯಿಂದ ಹು ಮೆಯವರೆಗೂ ವೈಖಾನಸ ಭಗವಚಾಸ್ತ್ರದ ಪ್ರಕಾರ ನೆರವೇರಿಸಲಾಗುತ್ತದೆ. ಈ ಅಭಿಷೇಕವನ್ನು ವೀಕ್ಷ್ಣಿ ಶ್ರೀನಿವಾಸನ ಕರುಣೆಯನ್ನು ಕೃಪೆಯನ್ನು ಪಡೆಯೋಣ. ಈ ಜ್ಯೇಷ್ಠಮಾಸದಲ್ಲೇ ವೈಷ್ಣವ ಭಕ್ತಾಗ್ರೇಸರರಾದ, ಪನ್ನಿದ್ದರಾಳ್ವಾರರಲ್ಲಿ ಹೆಸರುವಾ ಯಾಗಿರುವ ನಮ್ಮಾಳ್ವಾರರ ಶಾತ್ತುಮೊರೆ, ಪೆರಿಯಾಳ್ವಾರರ ಉತ್ಸವವು ಬರುತ್ತಿರುವುದು ವಿಶೇಷವಾಗಿದೆ, ಅವರನ್ನು ಸ್ಮರಿಸುವುದು ನಮ್ಮ ಧರ್ಮ!

ಇದೇ ತಿಂಗಳಲ್ಲಿ ಪುರೀಕ್ಷೇತ್ರದಲ್ಲಿ ಜಗನ್ನಾಥನ ರಥಯಾತ್ರೆಯನ್ನು ಕ ಗೆ ಹಬ್ಬವನ್ನುಂಟು ಮಾಡುವಂತೆ ನಡೆಸುವುದು ವಿಶೇಷವಾಗಿದೆ. ಸಮೈಕ್ಯತೆ ಸಮಗ್ರತೆಗೆ ಈ ಪುರೀಕ್ಷೇತ್ರವು ಪ್ರತೀಕವಾಗಿದೆ. ಆದ್ದರಿಂದಲೇ ಸರ್ವಂ ಜಗನ್ನಾಥಮಯಂ ಎನ್ನುತ್ತಾ ಆ ಸ್ವಾಮಿಯನ್ನು ಸ್ಮರಿಸುವುದು ಮೋಕ್ಷದಾಯಕವಾಗಿದೆ.

# ಮಾಸದ ಮಹಿಮೆ



**ಜಲಸಂರಕ್ಷಣೆ ಅರಿವು ಮೂಡಿಸುವ ಜ್ಯೇಷ್ಠಮಾಸ**
**ನೀರಿನ ದಾನ, ನದೀ ಸ್ನಾನಕ್ಕೆ ಪ್ರಥಮಾದ್ಯತೆ**
**ಭಗವಾನ್ ವಿಷ್ಣುವಿಗೆ ಬಹು ಪ್ರಿಯವಾದ ತಿಂಗಳು**
**ತಪಸ್ಸು ಮತ್ತು ಧ್ಯಾನಕ್ಕೆ ವಿಹಿತವಾದ ಶ್ರೇಷ್ಠ ಮಾಸ ಜ್ಯೇಷ್ಠ**

– ಶ್ರೀಮತಿ. ವಾರುಣಿ ಹೊನ್ನಾಳಿ
99160 22982

ಸನಾತನ ಹಿಂದೂ ಧರ್ಮದ ಚಾಂದ್ರಮಾನ ಪಂಚಾಂಗದ ತೃತೀಯ ಮಾಸವೇ ಜ್ಯೇಷ್ಠಮಾಸ. ಈ ಮಾಸದ ಹುಣ್ಣಿಮೆಯ ದಿನ ಜ್ಯೇಷ್ಠಾ ನಕ್ಷತ್ರ ಸೇರುವುದರಿಂದ ಈ ತಿಂಗಳಿಗೆ ಜ್ಯೇಷ್ಠ ಎಂಬ ನಾಮ ಧೇಯ ದೊರಕಿದೆ. ಸಂಸ್ಕೃತದಲ್ಲಿ ಜ್ಯೇಷ್ಠ,ಬೆಂಗಾಲಿಯಲ್ಲಿ ಜೋಯಿಷ್ಠೋ ಮತ್ತು ತಮಿಳಿನಲ್ಲಿ ಆನಿ ಮಾಸ ಎಂದೂ ಇದನ್ನು ಕರೆಯಲಾಗುತ್ತದೆ.

ಸಾಮಾನ್ಯವಾಗಿ ಸುಡು ಬೇಸಿಗೆ ವಿಜೃಂಭಿಸುವ, ನಡು ನಡುವೆ ಗುಡುಗು-ಸಿಡಿಲು ಸಹಿತ ಮಳೆ ಅಬ್ಬರಿಸುವ ಮಾಸವಿದು. (ಮೇ 28-ಜೂನ್ 25) ಸೂರ್ಯನು ವೃಷಭ ರಾಶಿಗೆ ಪ್ರವೇಶಿಸುವುದರೊಂದಿಗೆ ಗ್ರೀಷ್ಮ ಋತುವಿನ ಆರಂಭವೂ ಇಲ್ಲಿಂದಲೇ ಆಗುತ್ತದೆ. ಈ ಮಾಸದಲ್ಲಿ ಸೂರ್ಯನ ಪ್ರಖರತೆ ಅತಿಯಾಗಿರುತ್ತದೆ. ಸೂರ್ಯನ ಹಿರಿತನದಿಂದಾಗಿಯೇ ಈ ಮಾಸವನ್ನು ಜ್ಯೇಷ್ಠ ಎಂದು ಕರೆಯುತ್ತಾರೆ. ಮಾಸದ ಮಧ್ಯೆ ಮತ್ತು ಅಂತ್ಯದಲ್ಲಿ ಜಡಿ ಮಳೆಯೂ ಧಾರಾಕಾರವಾಗಿ ಸುರಿಯುತ್ತದೆ.

ಈ ಕಾಲಘಟ್ಟದಲ್ಲಿ ನೀರಿನ ಪ್ರಾಮುಖ್ಯತೆಯನ್ನೇ ಸಾರಿ ಹೇಳುವ ಆಚರಣೆ, ಹಬ್ಬ-ಹುಣ್ಣಿಮೆ ಮಾಡುವುದು ಸಂಪ್ರದಾಯದಲ್ಲಿ ಹಾಸು ಹೊಕ್ಕಾಗಿದೆ. ಉಷ್ಣ ಮಾಸವೆಂದೇ ಹಿರಿಯರು ಜ್ಯೇಷ್ಠವನ್ನು ಸಂಬೋಧಿಸಿದ್ದಾರೆ. ಹಾಗಾಗಿ ಈ ತಿಂಗಳಲ್ಲಿ ಜಲಪೂಜೆ, ಭಕ್ತಿಭಾವದಿಂದ ಜಲ ಸಂರಕ್ಷಣೆ ಅರಿವು ಮೂಡಿಸುವ ಗಂಗಾ ದಶಹರಾ ಮತ್ತು ನಿರ್ಜಲ ಏಕಾದಶಿ ವ್ರತಕ್ಕೆ ಪ್ರಾಧಾನ್ಯತೆ ದೊರಕಿದೆ. ಜ್ಯೋತಿಷ್ಯ ಶಾಸ್ತ್ರದ ಅನ್ವಯ ಈ ಮಾಸದ ಅಧಿಪತಿ ಮಂಗಳ (ಕುಜ). ಎಲ್ಲ ಮಾಸಗಳಲ್ಲಿ ಜ್ಯೇಷ್ಠವನ್ನು ಬಹಳ ವಿಶೇಷವೆಂದು ಅಧ್ಯಾತ್ಮ ಸಾಧಕರು ಪರಿಗಣಿಸುತ್ತಾರೆ.

ಜ್ಯೋತಿರ್ ವಿಜ್ಞಾನದ ಪ್ರಕಾರ ಈ ತಿಂಗಳಲ್ಲಿ ಗ್ರಹಗಳ ಚಲನೆಯು ವ್ಯಕ್ತಿಯ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ದಾನ, ಪೂಜೆ, ಉಪವಾಸ ಮಾಡುವುದರಿಂದ ಗ್ರಹಗಳ ದುಷ್ಪರಿಣಾಮಗಳು ಕ್ಷೀಣಿಸುತ್ತದೆ. ಹಾಗಾಗಿ ಧಾರ್ಮಿಕವಾಗಿಯೂ ಈ ಮಾಸ ತನ್ನದೇ ಆದ ಪ್ರಾಧಾನ್ಯತೆಯನ್ನು ಹೊಂದಿದೆ ಎಂಬುದು ಬಹು ವಿಶೇಷ.

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಈ ಮಾಸದ ಅಧಿಪತಿ ಮಂಗಳ. ಜ್ಯೇಷ್ಠ ಮಾಸವು ಭಗವಾನ್ ವಿಷ್ಣುವಿಗೆ ಬಹು ಪ್ರಿಯವಾದ ತಿಂಗಳು ಎನ್ನುತ್ತಾರೆ ವೈದಿಕ ಶಾಸ್ತ್ರಜ್ಞರು. ವಿಷ್ಣು ಆರಾಧನೆಯು ಮೋಕ್ಷಪ್ರಾಪ್ತಿಗೆ ಬಹುದೊಡ್ಡ ಸಾಧನವಾಗಿದೆ. ಜ್ಯೇಷ್ಠ ಮಾಸವು ಹಲವು ವಿಧದ ತಪಸ್ಸುಗಳ ಸಂಕೇತವಾಗಿದೆ. ಧ್ಯಾನ, ಆರಾಧನೆಗಳ ಪ್ರತಿಮೆಯಾಗಿದೆ. ಆಧ್ಯಾತ್ಮಿಕ ಗುರಿಗಳನ್ನು ಸಾಧಿಸುವ ಪ್ರತೀಕವಾಗಿ ಆಗಮಿಸುತ್ತದೆ ಎಂದರೆ ಅದರಲ್ಲಿ ಸತ್ಯ ಮತ್ತು ಸತ್ವ ಎರಡೂ ಅಡಕವಾಗಿದೆ ಎಂದೇ ಅರ್ಥ ಅದನ್ನು ಅರಿತು ನಾವು ಆಚರಣೆ ಮಾಡಬೇಕು.

### ಜಲದಾನದ ಮಹತ್ವ :

ಜ್ಯೇಷ್ಠಮಾಸದಲ್ಲಿ ನೀರನ್ನು ದಾನ ಮಾಡುವುದು ಅತ್ಯಂತ ಶ್ರೇಷ್ಠ ದಾನ ಎಂದೇ ಪರಿಗಣಿಸಲಾಗಿದೆ. ಇದನ್ನು ಇನ್ನೊಂದು ಅರ್ಥದಲ್ಲಿ ಉದಕುಂಭದಾನ ಎಂದೂ ಕರೆಯುತ್ತಾರೆ, ಮತ್ತು ಪುಣ್ಯವೆಂದು ಪರಿಗಣಿಸಲಾಗಿದೆ. ಪಕ್ಷಿಗಳು ಮತ್ತು ಪ್ರಾಣಿಗಳಿಗೆ ನೀರಿನ ವ್ಯವಸ್ಥೆ ಮಾಡುವುದು, ಬಡವರಿಗೆ ನೀರು ಒದಗಿಸುವುದು ಮತ್ತು ಅಗತ್ಯವಿರುವವರಿಗೆ ಜಲಸಹಾಯ ಮಾಡುವುದು ಈ ತಿಂಗಳಲ್ಲಿ ವಿಶೇಷವಾಗಿದೆ.

### ಆಚರಿಸುವ ವ್ರತಗಳು

ಈ ಮಾಸದ ಶುಕ್ಲ ಪ್ರತಿಪದೆ ತಿಥಿ ಸೂರ್ಯೋದಯ ಕಾಲದಲ್ಲಿರುವ ದಿವಸ ಪುನ್ನಾಗ ಗೌರೀ ವ್ರತವನ್ನೂ, ಶುಕ್ಲ ತದಿಗೆ ತಿಥಿ ಮುಂಜಾನೆ ಕದಳೀ ಗೌರೀವ್ರತವನ್ನೂ ಆಚರಣೆ ಮಾಡಲಾಗುತ್ತದೆ.



(ಜ್ಯೇಷ್ಠ ಅಧಿಕ ಮಾಸ ಬಂದ ವರ್ಷದಲ್ಲಿ)ನಿಜ ಜ್ಯೇಷ್ಠದಲ್ಲೇ ಈ ವ್ರತಗಳನ್ನು ಆಚರಿಸಬೇಕು ಎಂಬುದು ಪಂಚಾಂಗ ಕರ್ತೃಗಳ ನಿರ್ಣಯವಾಗಿದೆ. ಜ್ಯೇಷ್ಠ ಮಾಸದ ಶುಕ್ಲ ದಶಮೀ ದಿನ ದಶಹರ ದಶಮೀ ವ್ರತ ಆಚರಿಸುವ ಪದ್ಧತಿ ಇದೆ.

**ಜ್ಯೇಷ್ಠಮಾಸೇ ಸಿತೇ ಪಕ್ಷೇ ದಶಮ್ಯಾಂ**
**ಬುಧಹಸ್ತಯೋ : ವ್ಯತೀಪಾತೇ ಗರಾನಂದೇ**
**ಕನ್ಯಾ ಚಂದ್ರೇ ವೃಷೇರವಾ...**

ಎಂಬ ಈ ಹತ್ತು ಯೋಗಗಳೂ ಸಂಗಮಿಸುವುದನ್ನು ದಶಹರ ಯೋಗ ಎನ್ನಲಾಗುತ್ತದೆ. ಈ ಸಂದರ್ಭದಲ್ಲಿ ವ್ರತಾಚರಣೆ ಮಾಡುವುದರಿಂದ ಕಾಮಿತ, ವಾಚಿಕ, ಮಾನಸ ರೂಪದ 10 ವಿಧದ ಪಾಪಗಳು ಸಂಪೂರ್ಣನಾಶವಾಗುತ್ತವೆ ಎಂದು ಪ್ರಾಚೀನರು ನಂಬಿ ಅನುಷ್ಠಾನಗೊಳಿಸಿದ್ದಾರೆ.

## ಗಂಗಾಸ್ನಾನ ಅತ್ಯಂತ ಶ್ರೇಷ್ಠ :

ಜ್ಯೇಷ್ಠ ಮಾಸ ಶುಕ್ಲ ದಶಮೀ ದಿನ ಹಸ್ತಾ ನಕ್ಷತ್ರದಲ್ಲಿ ಸ್ವರ್ಗದಿಂದ ಗಂಗೆ ಭೂಮಂಡಲಕ್ಕೆ ಇಳಿದು ಬಂದಳು ಎನ್ನಲಾಗಿದೆ.

ಈ ದಿನವನ್ನು ಗಂಗಾದಸರಾ ಎಂದೇ ಆಚರಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಯಾವುದೇ ನದಿಯಲ್ಲಿ ಸ್ನಾನ, ಜಪಗಳನ್ನು ಮಾಡಿ, ತಿಲೋದಕ ಅರ್ಘ್ಯವನ್ನು ಪ್ರದಾನ ಮಾಡಿದರೆ ಮಹಾಪಾತಕಗಳು ಓಡಿ ಹೋಗುತ್ತವೆ ಗಂಗಾ ದಶಹರ. (ದಶ ಎಂದರೆ ಹತ್ತು. ಹರ ಎಂದರೆ ನಾಶವಾಗುವುದು) ಹತ್ತು ಜನ್ಮಗಳ ಹತ್ತಾರು ಪಾಪಗಳು ಕೇವಲ ನದೀಸ್ನಾನದಿಂದ ನಿವಾರಣೆಯಾಗುತ್ತವೆ ಎಂದು ಹೇಳಲಾಗುತ್ತದೆ. ಈ ದಿನ ಗಂಗಾದೇವಿಯ ಪ್ರತಿಮೆಯನ್ನು ಸತ್ಪಾತ್ರರಿಗೆ ದಾನ ಮಾಡುವುದು ಮತ್ತು ಸಾಧ್ಯವಾದರೆ ಸಾಕ್ಷಾತ್ ಗಂಗಾನದಿಯಲ್ಲೇ ಸ್ನಾನ ಮಾಡುವುದರಿಂದ ಅನಂತ ಫಲ ಲಭ್ಯವಾಗಲಿದೆ.

## ವಟ ಸಾವಿತ್ರೀ ವ್ರತ:

ವಟ ಸಾವಿತ್ರಿಯು ಹೇಗೆ ಕಠಿಣ ವ್ರತವನ್ನು ಮಾಡಿ ಯಮರಾಜನನ್ನೇ ಒಲಿಸಿಕೊಂಡು, ಆತನಿಂದಲೇ ವರವನ್ನು ಪಡೆದು ಪತಿ ಸತ್ಯವಾನನನ್ನು ಬದುಕಿಸಿಕೊಂಡಳು ಎಂಬ ಕಥೆ  ಬಹುತೇಕರಿಗೆ ಗೊತ್ತಿದೆ. ಆಕೆಯಂತೆ ಪಾತಿವ್ರತ್ಯವನ್ನು,ಪತಿಭಕ್ತಿಯನ್ನು, ಸತ್ ಸಂತಾನವನ್ನೂ ಪಡೆಯಲಿಕ್ಕಾಗಿ ಸುಮಂಗಲಿಯರು ಜ್ಯೇಷ್ಠ ಶುಕ್ಲ ಪೂರ್ಣಿಮೆ (ವಟ ಪೂರ್ಣಿಮೆ) ದಿನದಂದು ವಟವೃಕ್ಷದ ಕೆಳಗೆ ಸಾವಿತ್ರೀ ವ್ರತವನ್ನು ಆಚರಣೆ ಮಾಡುತ್ತಾರೆ. ಇದರ ಫಲವಾಗಿ ವನಿತೆಯರಿಗೆ ದೀರ್ಘ ಸುಮಂಗಲೀ ಭಾಗ್ಯ ದೊರಕುತ್ತದೆ. (ಎಂದಿಗೂ ವೈಧವ್ಯ ಹತ್ತಿರ ಸುಳಿಯದು)ಈ ದಿನ ಉದಕುಂಭ, ಪಾನಕ, ಬೀಸಣಿಗೆ ದಾನ ಬಹು ಶ್ರೇಷ್ಠ ಎನ್ನಲಾಗಿದೆ. ಈ ವ್ರತವನ್ನು ಹೆಚ್ಚಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಮಹಿಳೆಯರು ಆಚರಣೆ ಮಾಡುತ್ತಾರೆ. ಆಲದ ಮರದ ಸುತ್ತಲೂ ದಾರಗಳನ್ನು ಕಟ್ಟುವ ಮೂಲಕ ಗಂಡನ ಆಯುವೃದ್ಧಿಗೆ ಪ್ರಾರ್ಥಿಸುತ್ತಾರೆ. ಸಾವಿನಿಂದ ಗಂಡ ಸತ್ಯವಾನನನ್ನು ಪಾರು ಮಾಡಿದ ಪೌರಾಣಿಕವಾದ ಸಾವಿತ್ರಿ ಕಥೆ ಓದುತ್ತಾರೆ.

ಜ್ಯೇಷ್ಠ ಹುಣ್ಣಿಮೆ ಸಂದರ್ಭ ಭೌತ್ಯಮನು ಪ್ರಾರಂಭವಾದ ದಿನ. ಹಾಗಾಗಿ ಇಂದು ಪಿಂಡರಹಿತ ಶ್ರಾದ್ಧ ಮಾಡುವ ಪದ್ಧತಿಯೂ ಹಲವೆಡೆ ಇದೆ. ಹುಣ್ಣಿಮೆ ಸಂದರ್ಭ ಜ್ಯೇಷ್ಠಾ ನಕ್ಷತ್ರದಲ್ಲಿ ಚಂದ್ರ ಗುರು ಮತ್ತು ರೋಹಿಣಿ ನಕ್ಷತ್ರದಲ್ಲಿ ಸೂರ್ಯ ಏನಾದರೂ ಇದ್ದರೆ ಅದನ್ನೇ ಮಹಾ ಜ್ಯೇಷ್ಠ ಯೋಗ ಎನ್ನಲಾಗುತ್ತದೆ. ಇದು ಬಹು ಅಪರೂಪಕ್ಕೆ ಸಂಭವಿಸುತ್ತದೆ. ಇಂಥಾ ಕಾಲ ಘಟ್ಟದಲ್ಲಿ ನದೀಸ್ನಾನ, ಜಲದಾನಗಳು ಬಹು ಪುಣ್ಯದಾಯಕ ಎಂದು ಶಾಸ್ತ್ರಕಾರರು ತಿಳಿಸಿದ್ದಾರೆ.

## ಪುರಿ ಜಗನ್ನಾಥನಿಗೂ ಬಹಿರಂಗಸ್ನಾನ:

ಹುಣ್ಣಿಮೆಯಂದು ಸ್ನಾನೋತ್ಸವ ಮಾಡುವ ಸಂಪ್ರದಾಯ ಒಡಿಶಾದಲ್ಲಿದೆ. ಇದು ಜಗನ್ನಾಥ ಪಂಥದ ಪ್ರಮುಖ ಹಬ್ಬವಾಗಿದೆ. ಜಗನ್ನಾಥ, ಬಲಭದ್ರ, ಸುಭದ್ರ, ಸುದರ್ಶನ ಮತ್ತು ಮದನಮೋಹನ ದೇವರುಗಳನ್ನು ಪುರಿಯ ಜಗನ್ನಾಥ ದೇಗುಲದಿಂದ ಹೊರ ತಂದು ಸ್ನಾನ ಬೇಡಿವರೆಗೆ ಮೆರವಣಿಗೆ ಮಾಡುತ್ತಾರೆ. ಸಾವಿರಾರು ಭಕ್ತರು ನೋಡುವ ಸ್ಥಳದಲ್ಲಿ ದೇವರುಗಳಿಗೆ ಶಾಸ್ತ್ರೋಕ್ತವಾಗಿ ಜಲಾಭಿಷೇಕ ಮಾಡಿಸಿ



ಅಲಂಕಾರ ಮಾಡುತ್ತಾರೆ. ಸಾವಿರಾರು ಭಕ್ತರು ನೋಡುವ ಸ್ಥಳದಲ್ಲಿ ದೇವರುಗಳಿಗೆ ಶಾಸ್ತ್ರೋಕ್ತವಾಗಿ ಜಲಾಭಿಷೇಕ ಮಾಡಿಸಿ ಅಲಂಕಾರ ಮಾಡುತ್ತಾರೆ. ಇದನ್ನು ಕಣ್ತುಂಬಿ ಕೊಳ್ಳುವುದೇ ಒಂದು ಮಹಾಯೋಗವಾಗಿದೆ. ಒಡಿಶಾದಲ್ಲಿ ಜ್ಯೇಷ್ಠ ಶುದ್ಧ ಷಷ್ಠಿಯಂದು ಸೀತಾಲಷಷ್ಠಿ ಎಂಬ ಉತ್ಸವ ಆಚರಿಸುತ್ತಾರೆ. ಇದಕ್ಕೆ ಶತಶತಮಾನಗಳ ಇತಿಹಾಸ ಇದೆ. ಪಶ್ಚಿಮ ಬಂಗಾಳದಲ್ಲಿ ಶುಕ್ಲಪಕ್ಷದ ಷಷ್ಠಿಯಂದು ಜಮಾಯಿ ಶಾಸ್ತಿ ಎಂಬ ಆಚರಣೆ ನಡೆಸುವ ಪದ್ಧತಿ ಇದೆ.

**ನಿರ್ಜಲ ಏಕಾದಶಿ :**

ಜ್ಯೇಷ್ಠ ಮಾಸದ ಶುಕ್ಲ ಪಕ್ಷದ (ವೃದ್ಧಿ ಚಂದ್ರ) ಏಕಾದಶಿ ಯನ್ನು ನಿರ್ಜಲ ಏಕಾದಶಿ ಎಂದೇ ಆಚರಿಸಲಾಗುತ್ತದೆ. ಒಂದು ವರ್ಷದ 24 ಏಕಾದಶಿಗಳಲ್ಲಿ ಇದು ಅತ್ಯಂತ ಪಾವನ ಮತ್ತು ಶುಭಕರ ಎನ್ನುತ್ತಾರೆ. ಈ ಒಂದು ದಿನ ಉಪ ವಾಸ ಮಾಡುವುದು ವರ್ಷದ ಉಳಿದ 23 ಏಕಾದಶಿಗಳನ್ನು ಅನುಷ್ಠಾನ ಮಾಡಿದ ಪುಣ್ಯ ಲಭಿಸುವುದಂತೆ.

**ಜನನ ಯೋಗ :**

ಜ್ಯೇಷ್ಠ ಮಾಸದಲ್ಲಿ ಜನಿಸಿದವರು ಅತ್ಯಂತ ಕ್ಷಮೆ ಯುಳ್ಳವರಾಗಿರುತ್ತಾರೆ. ವಿದೇಶ ಪ್ರವಾಸದ ಆಸಕ್ತಿ ಬಹಳ ಇರುತ್ತದೆ. ಇವರು ಸದಭಿರುಚಿ ಉಳ್ಳ ವ್ಯಕ್ತಿಗಳಾಗಿರುತ್ತಾರೆ. ವಿಶೇಷ ಬುದ್ಧಿವಂತಿಕೆ ಮತ್ತು ತೀವ್ರಗಾಮಿ ಸ್ವಭಾವ ಇರುತ್ತದೆ ಎಂದು ಜ್ಯೋತಿಷ್ಯ ಶಾಸ್ತ್ರ ಹೇಳುತ್ತದೆ.



**ನಮ್ಮೆಲ್ಲರ ದಿನಚರಿ ಹೇಗಿರಬೇಕು?**

ಈ ಮಾಸದಲ್ಲಿ ಹಗಲು ನಿದ್ರೆ ಸಲ್ಲದು. ಹಗಲು ನಿದ್ರೆ ಮಾಡಿದರೆ ವ್ಯಕ್ತಿ ರೋಗಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು ಎನ್ನುತ್ತದೆ ಆಯುರ್ವೇದ ಶಾಸ್ತ್ರ, ಮಧ್ಯಾಹ್ನದ ಸಮಯದಲ್ಲಿ ಹೊರಗೆ ಸಂಚರಿಸುವುದೂ ಸಲ್ಲದು ಎನ್ನುತ್ತದೆ ಮಾಸ ಧರ್ಮ.

ಸಂತಾನ ಅಪೇಕ್ಷಿಗಳು ಈ ತಿಂಗಳಲ್ಲಿ ಬದನೆಕಾಯಿ ಸೇವಿಸಬಾರದು. ಈ ಮಾಸದಲ್ಲಿ ಎಳ್ಳು ಅಥವಾ ಎಳ್ಳಿನಿಂದ ಸಿದ್ಧಪಡಿಸಿದ ಆಹಾರಗಳನ್ನು ಸೇವಿ ಸುವುದು ಉತ್ತಮವಂತೆ. ಇದರಿಂದ ಉತ್ತಮ ಆರೋಗ್ಯ ಪ್ರಾಪ್ತವಾಗಿ ದೀರ್ಘ ಆಯುಸ್ಸು ಲಭಿಸುತ್ತದೆ ಎಂದು ಶಿವಪುರಾಣವೂ ತಿಳಿಸಿದೆ.


ಜ್ಯೇಷ್ಠ ಮಾಸದಲ್ಲಿ ಜೇಷ್ಠ ಪುತ್ರ ಮತ್ತು ಪುತ್ರಿಯ ವಿವಾಹ ಮಾಡುವುದು ಶುಭಕರವಲ್ಲ. ಈ ತಿಂಗಳಲ್ಲಿ ಒಂದೇ ಹೊತ್ತು ಭೋಜನ ಸೇವಿಸಬೇಕು ಎನ್ನುತ್ತದೆ ಅಥರ್ವಣವೇದ. ಮಹಾಭಾರತದ ಅನುಶಾಸನ ಪರ್ವದಲ್ಲೂ ಇದರ ಉಲ್ಲೇಖ ವಿದೆ. ಏಕ ಭುಕ್ತದಿಂದ ವ್ಯಕ್ತಿ ಧನವಂತ ಮತ್ತು ಆರೋಗ್ಯವಂತನಾಗುತ್ತಾನೆ ಸಮಗ್ರ ಕುಟುಂಬ ಸೌಖ್ಯ ಪ್ರಾಪ್ತಿ ಆಗುತ್ತದೆ ಎನ್ನಲಾಗಿದೆ.

**ಯಾವ ಯಾವ ಪದಾರ್ಥಗಳನ್ನು ತಿನ್ನಬಾರದು?**

ಜ್ಯೇಷ್ಠ ಮಾಸದಲ್ಲಿ ಸೂರ್ಯನ ಶಾಖವು ತುಂಬಾ ಹೆಚ್ಚಿರುವುದರಿಂದ ಮಸಾಲೆಯುಕ್ತ ಆಹಾರ, ಬಿಸಿ ಪದಾರ್ಥಗಳನ್ನು ಸೇವಿಸುವುದು ಸಲ್ಲದು. ನೀರು ಮಾನವ ಜೀವನಕ್ಕೆ ಬಹಳ ಮುಖ್ಯ. ಬಾಯಾರಿದ ಯಾರಾದರೂ ನಿಮ್ಮ ಮನೆ ಬಾಗಿಲಿಗೆ ಬಂದರೆ, ಖಂಡಿತವಾಗಿಯೂ ಅವರಿಗೆ ಮೊದಲು ಕುಡಿಯಲು ನೀರು, ಸ್ವಲ್ಪ ಬೆಲ್ಲ ಕೊಡಬೇಕು. ಬಾಯಾರಿದವರಿಗೆ ನೀರು ಕೊಡುವುದು ಬಹಳ ಪುಣ್ಯದ ಕೆಲಸ. ಇದು ವಿಷ್ಣುವಿನ ಪ್ರೀತಿಗೂ ಪಾತ್ರವಾಗುವ ಸೇವೆ.

**ತಪಸ್ಸು ಮತ್ತು ಧ್ಯಾನದ ತಿಂಗಳು**

ಜ್ಯೇಷ್ಠ ಮಾಸವು ತಪಸ್ಸು ಮತ್ತು ಧ್ಯಾನದ ಸಂಕೇತವಾಗಿದೆ. ಸೂರ್ಯನ ಸುಡುವ ಶಾಖದಲ್ಲಿ, ಭಕ್ತರು ಕಠಿಣ ಧ್ಯಾನವನ್ನು ಮಾಡುತ್ತಾರೆ ಮತ್ತು ತಮ್ಮ ಆಧ್ಯಾತ್ಮಿಕ ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ರಾಮಾಯಣದ ವನವಾಸ ಕಾಲದಲ್ಲಿ ರಾಮನು ಹನುಮಂತನನ್ನು ಭೇಟಿ ಮಾಡಿದ್ದು ಇದೇ ಮಾಸದಲ್ಲಿ. ಹಾಗಾಗಿ ಪ್ರಾಣದೇವರಿಗೆ ಜ್ಯೇಷ್ಠಮಾಸವೆಂದರೆ ಬಲು ಪ್ರಿಯ. ಈ ಸಂದರ್ಭ ರಾಮ ಮತ್ತು ಆಂಜನೇಯನ ಪೂಜೆ ಮಾಡುವುದು ಅನೇಕ ಸಾಧನೆಗಳಿಗೆ ಪ್ರೇರಣೆ ನೀಡುತ್ತದೆ.



### ನೀರುದಾನ ಮಾಡಿದರೆ ಪುಣ್ಯ

ಈ ತಿಂಗಳಲ್ಲಿ ನೀರನ್ನು ದಾನ ಮಾಡುವುದು ಅತ್ಯಂತ ಶ್ರೇಷ್ಠಕರ ಮತ್ತು ಪುಣ್ಯಕರ ಎಂದಿವೆ ಶಾಸ್ತ್ರ, ಪುರಾಣಗಳು. ಬಾಯಾರಿ ಬಂದವರಿಗೆ ಮಾತ್ರವಲ್ಲ, ಪ್ರಾಣಿ, ಪಶು ಮತ್ತು ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡುವುದು, ಅಗತ್ಯ ಇದ್ದವರಿಗೆ ಜಲಸಹಾಯ ಮಾಡುವುದೂ ತಿಂಗಳ ಮಹತ್ವ ಸಾರುತ್ತವೆ. ಕಾಲಮಾನಕ್ಕೆ ತಕ್ಕಂತೆ ಶಾಲೆ,ಕಾಲೇಜು, ಅನಾಥಾಶ್ರಮ, ವೃದ್ಧಾಶ್ರಮ, ಮಠ ಮಾನ್ಯಗಳಿಗೆ ಜಲ ಶುದ್ಧೀಕರಣ ಯಂತ್ರ, ನೀರಿನ ಫಿಲ್ಟರ್‌ಗಳನ್ನು ಕೊಡುವುದೂ ಫಲಪ್ರದವೇ ಆಗಿದೆ. ದನ-ಕರುಗಳು ಇದ್ದ ತಾಣಗಳಿಗೆ ಶುದ್ಧ ಜಲ ಒದಗಿಸುವುದೂ ಪುಣ್ಯದ ಕೆಲಸ. ಈ ಮಾಸದಲ್ಲಿ ಸೂರ್ಯನ ಆರಾಧನೆಯಿಂದ ಆರೋಗ್ಯ , ಶಕ್ತಿ ಮತ್ತು ಯಶಸ್ಸು ವೃದ್ಧಿಯಾಗುತ್ತದೆ. ವರುಣನ ಪೂಜೆಯಿಂದ (ಬಿಸಿಲಿನಿಂದ ಬೆಂಡಾದ ಇಳೆಗೆ) ನೀರಿನ ದಾಹ ನೀಗಿ ಜೀವಚೈತನ್ಯ ದೊರಕುತ್ತದೆ.

ಈ ಕೆಲಸವನ್ನು ಮಾಡಿ ಜ್ಯೇಷ್ಠ ಮಾಸದಲ್ಲಿ ದಾನ ಮಾಡುವುದು ಅತ್ಯಂತ ಮಂಗಳಕರವೆಂದು ಪರಿಗಣಿಸಲಾಗಿದೆ. ದಾನ ಮಾಡುವುದರಿಂದ ಪೂರ್ವಜರ ಆಶೀರ್ವಾದ ದೊರಕುತ್ತದೆ. ಜ್ಯೇಷ್ಠಮಾಸದಲ್ಲಿ ಅಧಿಕ ತಾಪವಿರುತ್ತದೆ. ಆದ್ದರಿಂದ ನಾವು ಪ್ರಾಣಿಗಳು ಮತ್ತು ಪಕ್ಷಿಗಳಿಗೆ ನೀರು, ಆಹಾರದ ವ್ಯವಸ್ಥೆಯನ್ನು ಮಾಡಬೇಕು.

### ಶತ್ರುಗಳನ್ನು ಜಯಿಸಲು ಸಮರ್ಥರಾಗಿರಿ

ಈ ಮಾಸದಲ್ಲಿ ಶ್ರೀಹರಿಯ ಅವತಾರವೇ ಆದ ತ್ರಿವಿಕ್ರಮನನ್ನು ಪೂಜಿಸುವ ಸಂಪ್ರದಾಯವಿದೆ. ತ್ರಿವಿಕ್ರಮನನ್ನು ಆರಾಧನೆಯಿಂದ ಪಾಪಗಳು ಕ್ಷಯಿಸುತ್ತವೆ. ಜೀವನದಲ್ಲಿ ಎದುರಾದ ತಂಟೆ, ತಕರಾರು, ಅಡೆತಡೆಗಳು ದೂರವಾಗುತ್ತವೆ. ಶತ್ರುಗಳ ಮೇಲೆ ಜಯ ಸಾಧನೆಯಾಗುತ್ತದೆ. ವಾಮನನು ತ್ರಿವಿಕ್ರಮನಾಗಿ ಬೆಳೆದು ಬಲಿ ಚಕ್ರವರ್ತಿಯನ್ನು ಹೇಗೆ ಭೂಮಿಯೊಳಗೆ ಮೆಟ್ಟಿದನೋ ಹಾಗೆ ನಮ್ಮೆಲ್ಲರ ಸಂಕಷ್ಟಗಳೂ ತ್ರಿವಿಕ್ರಮನ ಆರಾಧನೆಯಿಂದ ನೆಲ ಕಚ್ಚಿ ಹೋಗುತ್ತವೆ. ಶುಕ್ಲಪಕ್ಷದ ದ್ವಾದಶಿ ತ್ರಿವಿಕ್ರಮನನ್ನು ಪೂಜಿಸಿದವರು ಅಶ್ವಮೇಧಯಾಗ ಮಾಡಿದಷ್ಟು ಪುಣ್ಯ ಸಂಪಾದಿಸುತ್ತಾರೆ ಎನ್ನುತ್ತದೆ ವಿಷ್ಣು ಪುರಾಣ.

### ನಿಸರ್ಗದಿಂದ ಬದುಕಿಗೆ ದೊಡ್ಡ ಸಂದೇಶವಿದೆ

ಉತ್ತುಂಗದಲ್ಲಿದ್ದ ಸೂರ್ಯನ ಪ್ರಖರತೆಯಿಂದ ಧಗದಹಿಸಿದ್ದ ಉಷ್ಣವಲಯ ಪ್ರದೇಶವು ಮೆಡಿಟರೇನಿಯನ್ ವಾಯುಗುಣದ ಪರಿಣಾಮವಾಗಿ ಬೇಸಿಗೆ ಉತ್ತುಂಗದಲ್ಲೇ ಮಳೆಯನ್ನು ಇಳೆಗೆ ಪಡೆದು, ಜೀವಜಾಲವು ಮತ್ತೊಮ್ಮೆ ಭಾವ ಪಲ್ಲಟಗೊಂಡು, ಗಿಡ, ಮರ, ಬಳ್ಳಿಗಳು ಮರು ಹುಟ್ಟು ಪಡೆಯುವ ಮಾಸವೇ ಜ್ಯೇಷ್ಠ. ಹಾಗಾಗಿ ಇದು ಎರಡು ಪರ್ವಗಳ ಸಂಗಮವಾಗಿ ಮುಖ್ಯವೆನಿಸಿದೆ. ತಾಪಮಾನವು ಉತ್ತುಂಗದಿಂದ ಭೂಮಿವರೆಗೆ ಕ್ಷೀಣಿಸುತ್ತಾ ಸಾಗುವ (ವಾಮನ-ಬಲಿ), ಕೆರೆ, ಹಳ್ಳ, ಕೊಳ್ಳ, ನದಿ ಮತ್ತು ಜಲಪಾತಗಳು ಬತ್ತಿ ಹೋಗಿರುವ ಸ್ಥಿತಿ ಯಿಂದ ಜೀವ-ಭಾವ ಪಡೆಯುವ ಪ್ರಕ್ರಿಯೆಯನ್ನು ನೋಡುವುದೇ ಇಲ್ಲಿ ಒಂದು ಸೊಗಸು.

ಬದುಕಿನ ಹಲವು ಘಟ್ಟದಲ್ಲಿ ಬಳಲಿ, ಬೆಂಡಾದ ನಾವುಗಳೂ ಈ ಮಾಸದ ಪ್ರಕೃತಿಯಂತೆ ಹೊಸ ಚೈತನ್ಯ ಪಡೆದು, ತನುವನ್ನು ಸಂತೈಸಿಕೊಂಡು ಮತ್ತೆ ಮೇಲಕ್ಕೆ ಏಳುವ,ಟೊಂಗೆ,ಟಿಸಿಲುಗಳನ್ನು ವಿಸ್ತರಿಸಿಕೊಳ್ಳುವ ಆಲದ ಮರದಂತೆ ಧನಾತ್ಮಕ ಚಟುವಟಿಕೆಗಳನ್ನು ಬಹುಮುಖಿಯನ್ನಾಗಿ ಮಾಡಿಕೊಳ್ಳುವ ಮಹತ್ತರ ಘಟ್ಟವಾಗಿದೆ ಈ ಜ್ಯೇಷ್ಠಮಾಸ.



## ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ

| ದಿನಾಂಕ | ವಾರ | ಉತ್ಸವಗಳು |
|---|---|---|
| 09-06-2025 | ಸೋಮವಾರ | ವಜ್ರಕವಚ ಸಮರ್ಪಣೆ |
| 10-06-2025 | ಮಂಗಳವಾರ | ಮುತ್ತಂಗಿ ಕವಚ ಸಮರ್ಪಣೆ |
| 11-06-2025 | ಬುಧವಾರ | ಸ್ವರ್ಣಕವಚ ಸಮರ್ಪಣೆ |

# ಪ್ರದೋಷ ಪೂಜೆಯ ಪ್ರಾಮುಖ್ಯತೆ

- ಎಸ್. ಗೋಪಾಲ್
84533 26571

ಸೃಷ್ಟಿಕರ್ತ ಬ್ರಹ್ಮನ ಆದೇಶದಂತೆ ದೇವಾನುದೇವತೆಗಳೂ ಹಾಗೂ ಅಸುರರು ಶಾಶ್ವತ ಅಮರತ್ವ ಹೊಂದಲು ಅಮೃತಕ್ಕಾಗಿ ಕ್ಷೀರಸಾಗರದಲ್ಲಿ ಮಂದರಪರ್ವತವನ್ನೆ ಕುಡುಗೋಲನ್ನಾಗಿ ಮಾಡಿ ಕೊಂಡು ವಾಸುಕಿಯನ್ನು ಬಳಸಿಕೊಂಡು ಕಡೆಯಲಾರಂಭಿಸಿದರು. ಹೀಗೆ ಮಾಡಲು ಮೊದಲಿಗೆ ಕಾರ್ಕೋಟಕ ವಿಷ ಮೇಲಕ್ಕೆ ಬರ ಲಾರಂಭಿಸಿತು. ಇದರಿಂದ ಸಮಸ್ತ ಜೀವರಾಶಿ (ದೇವತೆಗಳು ಅಸುರರು ಸಹ) ಬಲು ಭೀತಿಯಿಂದ ತಲ್ಲಣಿಸಿಹೋದರು. ಆದರೆ ದೇವತೆಗಳು ಪರಶಿವನ ಬಳಿ ಹೋಗಿ ನಮ್ರತೆಯಿಂದ ತಮಗೆ ತಲೆ ದೋರಿರುವ ಕ್ಲಿಷ್ಟ ಪರಿಸ್ಥಿತಿಯನ್ನು ತಿಳಿಯಪಡಿಸಿ ತಮ್ಮನ್ನು ಹೇಗಾ ದರೂ ಮಾಡಿ ಈಗ ಒದಗಿ ಬಂದಿರುವ ಅವಘಡದಿಂದ ಪಾರು ಮಾಡಬೇಕೆಂದು ಪರಿಪರಿವಿಧದಲಿ ಬೇಡಿಕೊಳ್ಳಲು ಪರ ಶಿವನ ಮನಕರಗಿ ಎಲ್ಲ ಜೀವರಾಶಿಗಳನ್ನು ರಕ್ಷಿಸುವ ಸಲುವಾಗಿ ಕ್ಷೀರ ಸಾಗರದ ಬಳಿ ಬಂದು ಅಲ್ಲಿ ಮಂದರ ಪರ್ವತದಿಂದ ಹೊರ ಬರು ತ್ತಿದ್ದ ಕಾರ್ಕೋಟಕ ವಿಷವನ್ನು ಸಂಪೂರ್ಣವಾಗಿ ಆಪೋಷಣೆ ಯಾಗಿ ತೆಗೆದುಕೊಂಡು ಬಿಟ್ಟ. ಹೀಗೆ ಪಾನ ಮಾಡಿದ ದಿನ (13 ನೇ ದಿನದ) ತ್ರಯೋದಶಿ ಮುಸ್ಸಂಜೆ ವೇಳೆಯಾಗಿ ಪ್ರದೋಷ ಕಾಲ ವಾಗಿತ್ತು .

ಪ್ರದೋಷದ ದಿನ ಭಕ್ತಿಯಿಂದ ಪರಮೇಶ್ವರನನ್ನು ಆರಾಧಿಸಿ ದಲ್ಲಿ ಶಿವನು ಶೀಘ್ರವಾಗಿ ತೃಪ್ತಿಹೊಂದಿ ಮನಕರಗಿ ಅಂತಹವರನ್ನು ಕ್ಷಮಿಸಿ ರಕ್ಷಿಸುತ್ತಾನೆಂಬುದು ಬಲವಾದ ನಂಬಿಕೆ ಜೊತೆಗೆ ಯಾವುದೋ ಒಂದು ದೈವಿಕ (ಪವಾಡ) ಶಕ್ತಿಯಿಂದ ಅಪಕೃತ್ಯ ಮಾಡುವವರಿಗೆ ಏನೋ ಒಂದು ಬಗೆಯ ಜ್ಞಾನೋದಯವಾದಂ ತಾಗಿ ಅವರು ಪರಿವರ್ತನೆಗೊಳ್ಳುತ್ತಾರೆಂದು ಹಲವಾರು ನಿದರ್ಶನ ಗಳನ್ನು ಕಾಣಬಹುದಾಗಿದೆ.

ಸಾಧಾರಣವಾಗಿ ಪ್ರದೋಷಕಾಲವೆನ್ನುವುದು ತ್ರಯೋದಶಿ (13 ನೇತಿಥಿ) ಸಂಜೆ 4.30 ರಿಂದ 7.00 ಘಂಟೆವರೆಗೆ ಎಂದು ನಿಗದಿ ಪಡಿಸಿರುವುದರಿಂದ ಎಲ್ಲ ಶಿವನ ದೇವಾಲಯಗಳಲ್ಲಿ ಈ ವೇಳೆ ಯಲ್ಲಿ ಭಕ್ತಾದಿಗಳು ಶಿವಪಾರ್ವತಿಯರನ್ನು ಬಲು ಆಸೆ ಯಿಂದ ಬಿಲ್ವಪತ್ರೆ ಇನ್ನಿತರ ಪತ್ರ, ಪುಷ್ಪಗಳಿಂದ ಅಲಂಕರಿಸಿ ಪೂಜಿಸಿ ದೀಪ ಧೂಪಗಳಿಂದ ಅಷ್ಟೋತ್ತರ ಅರ್ಚನಾದಿಗಳನ್ನು ಮಾಡಿ ನಂದಿಯನ್ನು ಪೂಜಿಸಿ ಪಂಚಾಕ್ಷರ ಮಂತ್ರ ಶ್ರೀರುದ್ರಚಮಕ ವೇದ ಪಠಣ ಮಾಡಿ ಭಕ್ತಯಿಂದ ನೈವೇದ್ಯವನ್ನು ಅರ್ಪಿಸಿ ಮಂಗಳಾರತಿ, ಮಹಾಮಂಗಳಾರತಿಯನ್ನು ಮಾಡಿ ಭಕ್ತಾದಿಗಳಿಗೆ ತೀರ್ಥಪ್ರಸಾದ ಹಂಚಿ ಸಂತೃಪ್ತಿಗೊಳ್ಳು ವುದರಿಂದ ಮನಕ್ಕೆ ಒಂದು ರೀತಿ ಧೈರ್ಯ, ಶಾಂತಿ, ಸಮಾಧಾನ ಕಲಗಿ ತಾವು ಪರಿವರ್ತಿತರಾದವೆಂಬ ಭಾವ ಮೂಡಿ ಭಕ್ತಿ ಪರವಶರಾಗುವುದೇ ಪ್ರದೋಷ ಪೂಜೆಯ ವಿಶೇಷತೆ ಎನ್ನಬಹುದು.




ಇಂತಹ ಪ್ರದೋಷ ಕೆಲವು ಸಲ ಶನಿವಾರ ಬಂದರೆ **"ಮಹಾಪ್ರದೋಷ"** ವೆನ್ನಲಾಗುವುದು, ಸೋಮ ವಾರ ಬಂದರೆ **"ಸೋಮಪ್ರದೋಷ"** ವೆಂದು ಕರೆಯ ಲಾಗುವುದು. ಇನ್ನು ಪ್ರದೋಷ ದಿನ ಮಾತ್ರ ನಾವುಗಳು ದೇವರ ಸುತ್ತಾ ಗರ್ಭಗುಡಿ ನಂದಿಯನ್ನೊಳಗೊಂಡು ಕಮ್ಮಿ ಎಂದರೆ 3 ಸಲ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಪ್ರದಕ್ಷಿಣೆ/ಅಪ್ರದಕ್ಷಿಣೆ ಮಾಡುವುದು ಸಂಪ್ರ ದಾಯ. ಈ ರೀತಿ ಮಾಡುವುದನ್ನು ಸೋಮಸೂತ್ರ ಪ್ರದಕ್ಷಿಣೆ ಎನ್ನಲಾಗುವುದು. ಈ ರೀತಿ ಮಾಡುವುದ ರಿಂದ ಆಗುವ ಪ್ರಯೋಜನಗಳೆಂದರೆ 1. ನಮ್ಮ ಜೀವನ ದಲ್ಲಿ ದುಃಖ ಅಡತಡೆಗಳಾಗುವುದಿಲ್ಲ 2. ವಂಶಾಭಿವೃದ್ಧಿ ಯಾಗುವುದು 3. ಋಣ ಬಾಧೆ ಇಲ್ಲದೆ ಸಿರಿ ಸಂಪದ ಗಳು ಲಭಿಸುವುದು 4. ಯಾವ ತರದ ರೋಗ ಬಾಧೆ ಗಳಿರದೆ ಆರೋಗ್ಯವಂತರಾಗಬಹುದು. 5. ಜ್ಞಾನಾಭಿ ವೃದ್ಧಿ ಸುಖ ಸಂತಸದ ಜೀವನ ನಮ್ಮದಾಗುವುದು ಮತ್ತು ಶಿವನಿಗೆ ಪ್ರೀತಿಪಾತ್ರರಾಗುವರು.

# “ತ್ರಿ” ಲೋಕ ಪಾವನೆ “ಗಂಗಾಮಾತೆ”

– ಬೆಳವಾಡಿ ಅಶ್ವತ್ಥನಾರಾಯ
81059 15747

ನದಿಗಳು ಕೇವಲ ಭೌತಿಕ ಜಲ ಅಲ್ಲ, ಅವು ದಿವ್ಯ ಚೇತನಗಳ ಪ್ರಾಕೃತ ರೂಪ. ಆ ದೇವತೆಗಳ ಧ್ಯಾನ ಪೂರ್ವಕ ಸ್ನಾನ ಮಾಡಿದ ಪಕ್ಷದಲ್ಲಿ ಆಗುವ ಫಲವು ಭೌತಿಕ ಮಟ್ಟಕ್ಕಿಂತಲೂ ಹೆಚ್ಚಾದ ಆಧ್ಯಾತ್ಮಿಕ ಮಟ್ಟದ್ದು.

**ಹಿಂದೂಗಳು ಪ್ರತಿದಿನ ಸ್ನಾನ ಮಾಡುವ ಮುನ್ನ ಶ್ರದೆ ೦ಂದ :-**

**ಗಂಗೇ ಚ ಯುಮುನೇ ಚೈವ ಗೋದಾವರಿ ಸರಸ್ವತಿ !**
**ನರ್ಮದೇ ಂಧೂ ಕಾವೇರಿ ಜಲೇ೬ ್ಮನ್ ಸನ್ನಿಧಿಂ ಕುರು॥**

ಎಂಬ ಮಂತ್ರದ ಮೂಲಕ ಸಪ್ತ ಸಿಂಧುಗಳನ್ನು ಎಂದರೆ ನಮ್ಮ ಪವಿತ್ರ ಭಾರತದ ಈ ಏಳು ಪುಣ್ಯನದಿಗಳನ್ನು ನೀರಿನಲ್ಲಿ ಆವಾಹನೆ ಮಾಡಿ ಸ್ನಾನ ಮಾಡುವುದು ರೂಢಿಯಲ್ಲಿದೆ. ಸ್ನಾನದ ನಂತರ ಶರೀರ ಶುದ್ಧಿಯೊಂದಿಗೆ ಮನಶುದ್ಧಿಯನ್ನು ಪಡೆಯಬಹುದಾಗಿದೆ.

ನದಿಗಳು ದೇಶದ ಜೀವನಾಡಿ ಇದ್ದಂತೆ ಆದರೆ ಹಿಂದೂಗಳು ಅವುಗಳನ್ನು ನಿಸರ್ಗ ಸಂಪತ್ತು ಎಂದೆಷ್ಟೇ ಎಣಿಸದೆ, ದೈವೀಶಕ್ತಿಗಳು ಹಾಗೂ ಅಭ್ಯುದಯವನ್ನುಂಟು ಮಾಡುವ ದೇವತೆಗಳೂ ಎಂದೂ ಪರಿಗಣಿಸುತ್ತಾರೆ.

ಭಾರತೀಯರ ಹೃನ್ಮನಗಳನ್ನು ಗಂಗಾನದಿಯು ಆಕರ್ಷಿಸಿರುವಷ್ಟು ಮತ್ತಾವುದೇ ನದಿಯು ಸೂರೆಗೊಂಡಿಲ್ಲ. ಎಷ್ಟೋ ಹಿಂದೂಗಳಿಗೆ ಗಂಗಾಸ್ನಾನವೆಂಬುದು ಒಂದು ಹೆಬ್ಬಯಕೆ. ಪೂಜಾದಿ ಕರ್ಮಗಳಲ್ಲಿ ಒಂದಲ್ಲ ಒಂದು ವಿಧದಿಂದ ಪವಿತ್ರ ಗಂಗಾಜಲವನ್ನು ಬಳಸಿದ ಹೊರತು ಆ ಕಾರ್ಯಸಾಂಗವಾಗಿ ಪೂರ್ಣವಾದಂತೆ ಅನ್ನಿಸುವುದೇ ಇಲ್ಲ, ಅವರಿಗೆ, ಮರಣಶಯ್ಯೆಯಲ್ಲಿ ಮಲಗಿರುವ ವ್ಯಕ್ತಿಯ ಗಂಗಾಜಲದ ಬಿಂದುಗಳನ್ನು ಸೇವಿಸಿದರೆ ಅವನ ಎಲ್ಲ ಪಾಪಗಳೂ ನಾಶವಾಗುವುವು, ಹಾಗೂ ಮೃತರ ಅವಶೇಷಗಳನ್ನು ಗಂಗೆಯಲ್ಲಿ ಅರ್ಪಿಸಿದರೆ ಅವರಿಗೆ ಮುಕ್ತಿ ಪ್ರಾಪ್ತವಾಗುತ್ತದೆ ಎಂಬ ನಂಬಿಕೆ ರೂಢ ಮೂಲವಾಗಿದೆ.



**ಶಾಸ್ತ್ರಗಳಲ್ಲಿ ಗಂಗೆ :-**

ಋಗ್ವೇದದಲ್ಲಿ ನದೀಸ್ತುತಿ ಎಂಬುದೊಂದಿದೆ. ಅದರಲ್ಲಿ ಗಂಗೆಯ ಪ್ರಸ್ತಾಪ ಬರುತ್ತದೆ. ಇದೇ ಗಂಗೆಯ ಕುರಿತಾದ ಪ್ರಪ್ರಥಮ ಉಲ್ಲೇಖ. ಋಗ್ವೇದದ ಇತರೆಡೆಗಳಲ್ಲಿ, ಶತಪಥ ಬ್ರಾಹ್ಮಣದಲ್ಲಿ ಮತ್ತು ತರೇಯ ಬ್ರಾಹ್ಮಣದಲ್ಲಿಯೂ ಗಂಗೆಯ ಪ್ರಸ್ತಾಪವನ್ನು ಕಾಣುತ್ತೇವೆ. ಇವಲ್ಲದೆ ರಾಮಾಯಣ, ಮಹಾಭಾರತ, ಪದ್ಮಪುರಾಣ, ನಾರದೀಯಪುರಾಣ, ಅಗ್ನಿಪುರಾಣ ಮತ್ತು ಮತ್ಸ್ಯಪುರಾಣಗಳಲ್ಲಿ ಗಂಗೆಯ ಕುರಿತಾದ ನೂರಾರು ಶ್ಲೋಕಗಳು ಕಂಡು ಬರುತ್ತದೆ. ಆ ಶ್ಲೋಕಗಳಲ್ಲಿ ಗಂಗೆಯ ಗರಿಮೆಗಳನ್ನೂ ಶುದ್ಧೀಕರಣ ಶಕ್ತಿಯನ್ನೂ ಬಹಳವಾಗಿ ಕೊಂಡಾಡಲಾಗಿದೆ.

ಶ್ರೀಮದ್ಭಗವದ್ಗೀತಾ, ವಿಭೂತಿಯೋಗ, ಅಧ್ಯಾಯ ಹತ್ತು ಶ್ಲೋಕ ಮೂವತ್ತೊಂದರಲ್ಲಿ **“ನದಿಗಳಲ್ಲಿ ನಾನು ಗಂಗೆಯಾಗಿದ್ದೇನೆ”** ಎಂದು ಶ್ರೀಕೃಷ್ಣ ಉದ್ಘೋಷಿಸಿದ್ದಾನೆ.

**ಶ್ಲೋಕ ಇಂತಿದೆ.**

**ಪವನಃ ಪವತಾಮ ್ಮ ರಾಮಃ ಶಸ್ತ್ರಭೃತಾಮಹಮ್ ।**
**ಝುಷಾಣಾಂ ಮಕರಶ್ಚಾ ್ಮ ಸ್ರೋತಸಾಮ ್ಮ ಜಾಹ್ನವೀ ॥31॥**

“ನಾನು ಪವಿತ್ರಗೊಳಿಸುವವರಲ್ಲಿ ವಾಯುವು ಮತ್ತು ಶಸ್ತ್ರಧಾರಿಗಳಲ್ಲಿ ಶ್ರೀರಾಮನಾಗಿದ್ದೇನೆ. ಮೀನುಗಳಲ್ಲಿ ಮೊಸಳೆಯೂ ಮತ್ತು ನದಿಗಳಲ್ಲಿ ಗಂಗಾಭಾಗೀರಥೀ ಆಗಿದ್ದೇನೆ.

ಜಾಹ್ನವೀ ಅರ್ಥಾತ್ ಶ್ರೀ ಭಗೀರಥಿ ಗಂಗೆಯೇ ಸಮಸ್ತ ನದಿಗಳಲ್ಲಿ ಪರಮಶ್ರೇಷ್ಠಳಾಗಿದ್ದಾಳೆ. ಗಂಗೆಯು ಭಗವಂತನ ಚರಣೋದಕದಿಂದ ಉತ್ಪನ್ನಳಾಗಿ ಪರಮ ಪವಿತ್ರಳಾಗಿದ್ದಾಳೆ. ಆದ್ದರಿಂದಲೇ ನದಿಗಳಲ್ಲಿ ಜಾಹ್ನವೀ ಅರ್ಥಾತ್ ಗಂಗೆಯನ್ನು

ತನ್ನ ಸ್ವರೂಪವೆಂದು ಶ್ರೀ ಕೃಷ್ಣ ತಿಳಿಸಿದ್ದಾನೆ.

**ಶ್ರೀಮದ್ಭಾಗವತವ ಸಹ ಇದನ್ನೇ ಪ್ರತಿಪಾದಿಸುತ್ತದೆ. ಶ್ಲೋಕಗಳು ಇಂತಿವೆ :-**

**ಧಾತುಃ ಕಮಂಡಲುಜಲಂ**
**ತದುರುಕ್ರಮಸ್ಯ**
**ಪಾದಾವನೇ ಜನಪವಿತ್ರತ**
**ಯಾನರೇಂದ್ರ**
**ಸ್ವರ್ಧುನ್ಯಭೂನ್ನ ಭ ವಾ**
**ಪತತಿ ನಿಮಾರ್ಷ್ಟಿ**
**ಲೋಕತ್ರಯಂ ಭಗವತೋ**
**ವಿಶದೇವ ಣೀರ್ತಿಃ॥**



ಶ್ರೀ ಮದ್ಭಾಗವತ ಅಷ್ಟಮಸ್ಕಂಧ ಇಪ್ಪತ್ತೊಂದನೇ ಅಧ್ಯಾಯ ನಾಲ್ಕನೇ ಶ್ಲೋಕದಲ್ಲಿ ಶ್ರೀ ಶುಕಮಹಾಮುನಿಗಳು, ಪರೀಕ್ಷಿತರಾಜನನ್ನು ಕುರಿತು **"ಹೇ ರಾಜಾ ಆ ಬ್ರಹ್ಮದೇವರ ಕಮಂಡಲುವಿನ ಜಲವು ಭಗವಂತನ ಚರಣಗಳನ್ನು ತೊಳೆಯುವುದರಿಂದ ಪವಿತ್ರತಮವಾಗಿ ಸ್ವರ್ಗ-ಗಂಗಾ ಅಂದರೆ ಮಂದಾಣನೀ ಆ ಂತು."** ಆ ಗಂಗೆಯು ಭಗವಂತನ ನಿರ್ಮಲ ಕೀರ್ತಿಯಂತೆ ಆಕಾಶದಿಂದ ಪೃಥ್ವಿಯಲ್ಲಿ ಬಿದ್ದು ಈಗಿನವರೆಗೂ ಮೂರು ಲೋಕಗಳನ್ನು ಪವಿತ್ರವಾಗಿಸುತ್ತಿದ್ದಾಳೆ.

**ನಹ್ಯೇತತ್ಪರಮಾಶ್ಚರ್ಯಂ ಸ್ವರ್ಧುನ್ಯಾ ಯದಿ ಹೋದಿತಮ್।**
**ಅನಂತಚರಣಾಂಭೋಜ ಪ್ರಸೂತಾಯಾ ಭವಚಿದಃ॥**
**ಸಂನ್ನಿವೇಶ್ಯಮನೋ ಯ ಂಚ್ರದಯಾ ಮುನಯೋಮಲಾಃ**
**ತ್ರೈಗುಣ್ಯಂ ದುಸ್ತ್ಯಜಂ ಹಿತ್ವಾ ಸದ್ಯೋ ಯಾತಾಸ್ತದಾತ್ಮತಾಮ್॥**

ಯಾವ ಅನಂತ ಭಗವಂತನ ಚರಣ ಕಮಲಗಳಲ್ಲಿ ಶ್ರದ್ಧಾಪೂರ್ವಕ ಚೆನ್ನಾಗಿ ಚಿತ್ತವನ್ನು ನೆಟ್ಟು ನಿರ್ಮಲ ಹೃದಯದ ಮುನಿಗಡಣವು ತಕ್ಷಣವೇ ತ್ಯಜಿಸಲಸಾಧ್ಯವಾದ ತ್ರಿಗುಣಗಳ ಪ್ರಪಂಚವನ್ನು ತ್ಯಾಗಗೈದು, ಅವನ ಸ್ವರೂಪಭೂತರಾಗಿದ್ದಾರೋ ಅದೇ ಚರಣಕಮಲಗಳಿಂದ ಉತ್ಪನ್ನಳಾದ ಭವ-ಬಂಧನವನ್ನು ಕಳೆಯುವ ಭಗವತಿ ಗಂಗೆಯ ಯಾವ ಮಹಾತ್ಮೆಯನ್ನು ಇಲ್ಲಿ ತಿಳಿಸಲಾಗಿದೆಯೋ ಅದರಲ್ಲಿ ಯಾವುದೇ ಅತಿಶಯವಾದ ಆಶ್ಚರ್ಯದ ಮಾತಿಲ್ಲ.

ಪುರಾಣ ಮತ್ತು ಇತಿಹಾಸಗಳಲ್ಲಿ ಇವಳ ಭಾಳೀ ದೊಡ್ಡ ಮಹಾತ್ಮೆಯನ್ನು ತಿಳಿಸಲಾಗಿದೆ.

ಇದಲ್ಲದೆ ಒಂದು ಬಾರಿ ಭಗವಾನ್ ವಿಷ್ಣುವೇ ಸ್ವಯಂ ದ್ರವರೂಪವಾಗಿ ಹರಿಯಲು ತೊಡಗಿದ್ದನಂತೆ ಮತ್ತು ಬ್ರಹ್ಮನ ಕಮಂಡಲುವಿನಲ್ಲಿ ಹೋಗಿ ಗಂಗಾ ರೂಪಿಯಾಗಿದ್ದನಂತೆ. ಈ ಪ್ರಕಾರ ಸಾಕ್ಷಾತ್ ಬ್ರಹ್ಮ ದ್ರವವಾದ ಕಾರಣದಿಂದಲೂ ಗಂಗೆಗೆ ಅತ್ಯಂತ ಮಹಾತ್ಮೆಯಿದೆ. ಅದಕ್ಕಾಗಿ ಭಗವಂತನು ಗಂಗೆಯನ್ನು ತನ್ನ ಸ್ವರೂಪವೆಂದು ತಿಳಿಸಿರುವನು.

**"ಭಾಗೀರಥೀ ಜನನ"**

ಜಗಜ್ಜನನಿ ಮಹೇಶ್ವರೀ ಸತಿಯಾದ ದಕ್ಷಕನ್ಯೆಯು ದೇಹತ್ಯಾಗ ಮಾಡಿದ ಮೇಲೆ ಯಾವಾಗ ಶಿವನು ತಪಸ್ಸಿಗೆ ತೊಡಗಿದನೋ ಆಗ ದೇವತೆಗಳು ಜಗನ್ಮಾತೆಯ ಸ್ತುತಿಯನ್ನು ಮಾಡಿದರು. ಮಹೇಶ್ವರಿಯು ಪ್ರಕಟಳಾದಳು. ದೇವತೆಗಳು ಪುನಃ ಶಂಕರನನ್ನು ವರಿಸಲು ಅವಳಲ್ಲಿ ಪ್ರಾರ್ಥಿಸಿಕೊಂಡರು. ಆಗ ದೇವಿಯು ಹೇಳಿದಳು. **"ನಾನು ಎರಡು ರೂಪಗಳಲ್ಲಿ, ಸುಮೇರು ಕನ್ಯಾ ಮೇನಕೆಯ ಗರ್ಭದಿಂದ ಶೈಲರಾಜ ಹಿಮಾಲಯನ ಮನೆಯಲ್ಲಿ ಪ್ರಕಟಳಾಗುತ್ತೇನೆ. ಮೊದಲು ಗಂಗೆಯಾಗಿ ಎರಡನೆಯದು ಪಾರ್ವತಿಯಾಗಿ"** ದೇವಿಯು ಮೊದಲು ಗಂಗಾ ರೂಪದಿಂದ ಪ್ರಕಟಳಾದಳು. ದೇವತೆಗಳು ಅವಳನ್ನು ಸ್ತುತಿಸುತ್ತ, ಗಂಗೆಯನ್ನು ದೇವಲೋಕಕ್ಕೆ ಕರೆದುಕೊಂಡು ಹೋದರು. ಅಲ್ಲಿ ಗಂಗೆಯು ಮೂರ್ತಿ ಮತಿಯಾಗಿ ಶಂಕರನೊಂದಿಗೆ ದಿವ್ಯ ಕೈಲಾಸಧಾಮಕ್ಕೆ ತೆರಳಿದಳು ಮತ್ತು ಬ್ರಹ್ಮದೇವರ ಪ್ರಾರ್ಥನೆಯಂತೆ ಅಂತರ್ಧಾನಾಂಶದಿಂದ ಅರ್ಥಾತ್ ನಿರಾಕಾರ ರೂಪದಿಂದ ಅವರ ಕಮಂಡಲುವಿನಲ್ಲಿ ಸ್ಥಿತಳಾದಳು. **"ಅಂತರ್ಧಾನಾಂಶಭಾಗೇನ ತಾ ಬ್ರಹ್ಮ ಕಮಂಡಲೌ"** ಬ್ರಹ್ಮನು ಕಮಂಡಲದಲ್ಲಿ ಗಂಗೆಯನ್ನು ಬ್ರಹ್ಮ ಲೋಕಕ್ಕೆ ಕೊಂಡು ಹೋದನು. ಭಗವಾನ್ ವಿಷ್ಣುವು ವಾಮನಾವತಾರದಲ್ಲಿ ತನ್ನ ಸಾತ್ವಿಕ ಪದದಿಂದ ಸಮಸ್ತದ್ಯುಲೋಕವನ್ನು ಅಳೆದನೋ ಆಗ ಬ್ರಹ್ಮದೇವನು ಕಮಂಡಲದ ಆ ನೀರಿನಿಂದ ಭಗತಚ್ಚರಣವನ್ನು ತೊಳೆದನು. ಕಮಂಡಲದ ನೀರು ಸೋಕಿದೊಡನೆ ಆ ಚರಣವು ಅಲ್ಲೇ ಸ್ಥಿರವಾಯಿತು ಮತ್ತು ಭಗವಂತನು ಅಂತರ್ಧಾನನಾದರೂ ಅವನ ದಿವ್ಯಚರಣವು ಅಲ್ಲೇ ಗಂಗೆಯ ಜೊತೆಗೆ ಇದ್ದು ಬಿಟ್ಟಿತು.

ದೇವಗಂಗೆ ಹಿಮಗಿರಿಗೆ ಇಳಿದುದು ವೈಶಾಖಶುದ್ಧ ತೃತೀಯಾ ದಿನ ಎಂದು ಪುರಾಣಗಳಲ್ಲಿ ಉಲ್ಲೇಖವಿದೆ.

ಮತ್ತೊಂದು ಪುರಾಣದ ಪ್ರಕಾರ ವೈಶಾಖಮಾಸದ ಶುಕ್ಲ ಪಕ್ಷದ ತದಿಗೆಯಂದು ಭಗವಂತ ತ್ರೇತಾಯುಗವನ್ನಾರಂಭಿಸಿದ, ಹಾಗೆಯೇ ಗಂಗೆಯನ್ನು ಬ್ರಹ್ಮಲೋಕದಿಂದ ಭೂಮಿಗಿಳಿಸಿದ. ಹೀಗೆ ಅನೇಕ ಪುರಾಣಗಳಲ್ಲಿ ಭಾಗೀರಥೀ ಜನನ ವಿವರಿಸಲ್ಪಟ್ಟಿದೆ.

**ಭಗೀರಥ "ಭಾಗೀರಥಿಯನ್ನು ಭೂಮಿಗೆ ತಂದ ಕಥೆ"**

ಸ್ಕಂದ ಪುರಾಣದಲ್ಲಿ ಉಲ್ಲೇಖಿಸಿದಂತೆ ಗಂಗೆಯನ್ನು ಭೂಮಿಗೆ ತಂದ ಶ್ರೇಯಸ್ಸು ಭಗೀರಥ ರಾಜನಿಗೆ ಸಲ್ಲುತ್ತದೆ. ಇಕ್ಷ್ವಾಕುವಂಶದ ಸಗರರಾಜನೆಂಬ ಚಕ್ರವರ್ತಿ ಅಶ್ವಮೇಧ ಯಜ್ಞಕ್ಕಾಗಿ ಕುದುರೆ ಬಿಟ್ಟಿದ್ದ. ಇಂದ್ರನು ಅಶ್ವಮೇಧಯಜ್ಞ ಮುಗಿದರೆ ತನ್ನ ಪದವಿ ಹೋಗುವ ಭಯದಿಂದ ಆ ಯಜ್ಞಾಶ್ವವನ್ನು ಕದ್ದು **"ಕಪಿಲ"** ಮುನಿ ಆಶ್ರಮದಲ್ಲಿ ಕಟ್ಟಿದ. ಕುದುರೆಯನ್ನು ಹುಡುಕಿ ಕಪಿಲಮುನಿಯ ಆಶ್ರಮಕ್ಕೆ ಬಂದ ಸಗರ ರಾಜನ ಅರವತ್ತು ಸಾವಿರ ಪುತ್ರರು, ಧ್ಯಾನಸ್ಥರಾಗಿದ್ದ ಕಪಿಲ ಮಹರ್ಷಿಗಳನ್ನು ಅವಹೇಳನ ಮಾಡತೊಡಗಿದರು. ಆದ್ದರಿಂದ ಕುಪಿತರಾದ ಕಪಿಲ ಮುನಿಗಳು ಅವರನ್ನು ಭಸ್ಮಗೊಳಿಸಿದರು. ಅವರಿಗೆ ಮುಕ್ತಿ ಸಿಗದೆ ಮೃತ್ಯುಲೋಕದಲ್ಲಿಯೇ ಅಲೆಯ ತೊಡಗಿದರು. ಹೀಗೆ ಸಗರನ ಅರವತ್ತು ಸಾವಿರ ಮಂದಿ ಮಕ್ಕಳೂ ಕಪಿಲ ಮುನಿಯ ಕೋಪಾಗ್ನಿಯಿಂದ ಬೂದಿಯಾಗಿರುವಲ್ಲಿ, ಅವರ ಮರಿಮಗನಾದ ಭಗೀರಥನು ತನ್ನ ಮುತ್ತಜ್ಜಂದಿರಿಗೆ ಸದ್ಗತಿಯನ್ನುಂಟು ಮಾಡುವುದಕ್ಕಾಗಿ, ಗಂಗೆಯನ್ನು ಭೂಲೋಕಕ್ಕೆ ತರುವ ಉದ್ದೇಶದಿಂದ ಗಂಗೆಯನ್ನು ಕುರಿತು ತಪಸ್ಸು ಮಾಡಿದ.ಗಂಗೆ ಪ್ರತ್ಯಕ್ಷವಾಗಿ "ನಾನು ನಿನ್ನ ಇಷ್ಟಾರ್ಥವನ್ನು ಕೈಗೂಡಿಸುವೆನು, ಆದರೆ ನನ್ನ ವೇಗವನ್ನು ತಡೆಯುವವರಾರು?" ಎನ್ನಲು, ಭಗೀರಥ ಶಿವನನ್ನು ಮೆಚ್ಚಿಸಿ, ಒಪ್ಪಿಸಿದ.

ಗಂಗೆ ಶಿವನ ಮಸ್ತಕದ ಮೇಲೆ ಬಿದ್ದು, ಅಲ್ಲಿಂದ ಭಗೀರಥನ ಹಿಂದೆಯೇ ಬರುತ್ತ ದಾರಿಯಲ್ಲಿ ಜಹ್ನು ಋಷಿಯ ಯಜ್ಞಶಾಲೆಯನ್ನು ಕೊಚ್ಚಿಕೊಂಡು ಹರಿಯತೊಡಗಿದಳು. ಜಹ್ನು ಋಷಿಯು ಗಂಗೆಯನ್ನು ಶೋಷಿಸಿಬಿಟ್ಟ. ಭಗೀರಥ ಜಹ್ನುವನ್ನು ಬೇಡಲಾಗಿ, ಜಹ್ನು ಮರಳಿ, ಪ್ರವಹಿಸುವಂತೆ ಮಾಡಿದ.

ಈ ಕಾರಣದಿಂದಲೇ ಗಂಗೆಗೆ **"ಜಾಹ್ನವೀ"** ಎಂದು ಹೆಸರಾಯಿತು. ಬಳಿಕ ಭಗೀರಥ ಗಂಗೆಯನ್ನು ತನ್ನ ಹಿಂದೆಯೇ ಕರೆದೊಯ್ದು ತನ್ನ ಮುತ್ತಜ್ಜಂದಿರ ಬೂದಿಯ ರಾಶಿಯ ಮೇಲೆ ಪ್ರವಹಿಸುವಂತೆ ಮಾಡಿ, ಅವರಿಗೆ ಸದ್ಗತಿಯನ್ನೊದಗಿಸಿದ. ಹೀಗೆ ಭಗೀರಥನ ಇಷ್ಟಾನುಸಾರ ಭೂಲೋಕಕ್ಕೆ ಇಳಿದು ಬಂದುದರಿಂದ ಗಂಗೆಗೆ **"ಭಾಗೀರಥಿ"**ಯೆಂದು ಹೆಸರು ಬಂತೆಂದು ರಾಮಾಯಣ,ಭಾಗವತ,ಭಾರತ ಮತ್ತು ಮಾರ್ಕಂಡೇಯ ಪುರಾಣದಿಂದ ತಿಳಿದು ಬರುತ್ತದೆ.

## ತಿರುಚಾನೂರು
## ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು



| ದಿನಾಂಕ | ವಾರ | ಉತ್ಸವಗಳು |
|---|---|---|
| 06-06-2025 | ಶುಕ್ರವಾರ | ಶ್ರೀ ಕೃಷ್ಣ ಸ್ವಾಮಿಯವರಿಗೆ |
| 07-06-2025 | ಶನಿವಾರ | ಶ್ರೀಸುಂದರರಾಜ ಸ್ವಾಮಿಯವರಿಗೆ |
| 08-06-2025 | ಭಾನುವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |
| 09-06-2025 | ಸೋಮವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |
| 10-06-2025 | ಮಂಗಳವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |

# ಮಾರ್ಕಂಡೇಯರ ಪ್ರಸಂಗ

**ಪದ್ಮನಾಭ ರಾವ್**
**99161 73302**



ಮಹರ್ಷಿ ಮಾರ್ಕಂಡೇಯರ ಕಥೆ ಶ್ರೀಮದ್ಭಾಗವತದ 12 ನೆ ಸ್ಕಂಧದಲ್ಲಿ ಶುಕ ಮುನಿಗಳು ಹೇಳಿದ್ದು. ಅವರು ಮೃಕಂಡು ಋಷಿಗಳ ಪುತ್ರನಾಗಿ ಜನಿಸಿ, ಬಾಲ್ಯದಿಂದಲೇ ವೇದವಿದ್ಯೆ ತಪಸ್ಸುಗಳಲ್ಲಿ ನಿರತರಾಗಿ ಸಾಧನೆ ಮಾಡುತ್ತಿದ್ದರು. ತಾನು ವೇದಪಾರಾಯಣ ಮಾಡದೆ ಆಹಾರವನ್ನು ಸ್ವೀಕರಿಸುತ್ತಿರಲಿಲ್ಲ. ಗುರುಗಳ ಅಪ್ಪಣೆ ಆದರೆ ಮಾತ್ರ ಊಟ ಮಾಡುವುದು ಅವನ ದಿನವಹಿ ಕಾರ್ಯಕ್ರಮವಾಗಿತ್ತು. ಹೀಗೆ ಸತತ ಧ್ಯಾನ, ತಪಸ್ಸು, ಗುರು ಭಕ್ತಿಗಳ ಮೂಲಕ ಆತನಿಗೆ ದೈವ ಕೃಪೆಯಾಗಿತ್ತು. ಆತನ ಮಾನಸಿಕ ಏಕಾಗ್ರತೆಗೆ ಮೆಚ್ಚಿದ ದೇವತೆಗಳ ಅನು ಗ್ರಹ ಚಿಕ್ಕವಯಸ್ಸಿನಿಂದಲೇ ಈತನಿಗೆ ಇದ್ದಿತು. ಹೀಗೆ ಧ್ಯಾನ ಮಗ್ನನಾಗಿದ್ದ ಈ ಋಷಿ ಹಲವಾರು ವರ್ಷಗಳನ್ನು ತನ್ನ ತಪಸ್ಸಿನಲ್ಲೆ ಕಳೆದಿದ್ದ. 6 ಮನ್ವಂತರಗಳಷ್ಟು ದೀರ್ಘ ಸಮಯವೇ ಮುಗಿದಿತ್ತು.

ಈ ಋಷಿಪುತ್ರನ ತಪಸ್ಸಿಗೆ ಇತರರು ಮತ್ತು ದೇವತೆಗಳೇ ಹೆದರಿದರು. ದೇವರಾಜ ಇಂದ್ರನಿಗಂತೂ ಎಲ್ಲಿ ಈತ ತನ್ನ ಜಾಗಕ್ಕೆ ಬರುತ್ತಾನೋ ಎನ್ನುವ ಭಯ, ಆತಂಕವಿತ್ತು. ಮಾರ್ಕಂಡೇಯರನ್ನು ಆಕರ್ಷಿಸಲು, ಅವರ ತಪೋಭಂಗ ಮಾಡಲು ಆತನಿರುವ ಕಡೆಗೆ ಅಪ್ಸರೆಯರು, ಗಂಧರ್ವರು ಮತ್ತಿತರ ಭೋಗ ವಸ್ತುಗಳನ್ನು ಕಳುಹಿಸಲಾಯಿತು ಋಷಿಗಳು ಸ್ವಲ್ಪವೂ ವಿಚಲಿತರಾಗಲೇ ಇಲ್ಲ . ಇಂದ್ರನಿಗೆ ಕೋಪ ಬಂದಿತ್ತು. ಅವರಿದ್ದ ಆಶ್ರಮ ಪ್ರದೇಶದಲ್ಲಿ ಧಾರಾಕಾರವಾಗಿ ದಿನಗಟ್ಟಲೆ ಮಳೆ ಸುರಿಸಿದ. ಆತನು ಸ್ವಲ್ಪವೂ ಚಲಿಸದೆ ಮಳೆ, ಬಿಸಿಲು ಗಾಳಿಗೆ ಹೆದರದೆ ತನ್ನ ತಪಸ್ಸನ್ನು ಮುಂದುವರೆಸಿದ.

ಈ ಋಷಿಪುತ್ರನ ಉಗ್ರ ತಪಸ್ಸಿಗೆ ಮೆಚ್ಚಿದ ನರ-ನಾರಾಯಣರು ಅವನ ಮುಂದೆ ಕಾಣಿಸಿಕೊಂಡರು. ಮಾರ್ಕಂಡೇಯರನ್ನು ತನಗೆ ಬೇಕಾದ ವರ ಬೇಡು ಎಂದರು. ಎಲ್ಲ ಸುಖ, ಭೋಗ, ಐಶ್ವರ್ಯಗಳನ್ನೂ ತೊರೆದಿದ್ದ ಆ ಮುನಿಗೆ ಏನೂ ಬೇಕಾಗಿರಲಿಲ್ಲ. ಆದರೆ ಇಷ್ಟೇ ಬೇಡಿದ. ಸ್ವಾಮಿ! ಈ ಜಗತ್ತಿನ ಎಲ್ಲವನ್ನೂ ನೋಡಿದ್ದೇನೆ. ಜನರು ನಿಮ್ಮ ಮಾಯೆಗೆ ಸಿಲುಕಿ ಆಸೆ, ದುಃಖಗಳನ್ನು ಅನುಭವಿಸುವುದನ್ನೂ ಕಂಡಿದ್ದೇನೆ. ಹೀಗಾಗಿ ಭಗವನ್! ನಿಮ್ಮ ಮಾಯೆ ಹೇಗಿರುತ್ತದೆ ಎಂದು ನಾನು ತಿಳಿಯ ಬೇಕೆನಿಸಿದೆ ದಯಮಾಡಿ ಅದನ್ನು ನನಗೆ ಅನುಭವಕ್ಕೆ ಬರುವಂತೆ ಮಾಡಿ ಎಂದು ಪ್ರಾರ್ಥಿಸಿದನು. ಆಗ ಇದ್ದಕ್ಕಿದ್ದಂತೆ ಕಾರ್ಮೋಡ ಕವಿದು ಕತ್ತಲೆಯಾಯಿತು, ಋಷಿಗಳಿಗೆ ಏನೂ ಕಾಣಿಸುತ್ತಿರಲಿಲ್ಲ, ಅವರು ದಿಗ್ಭ್ರಾಂತರಾಗಿದ್ದರು.

ಆಗ ಮಾರ್ಕಂಡೇಯರಿಗೆ ಒಂದು ವಿಶಾಲ ಮರದ ಕೆಳಗೆ ಆಲದೆಲೆಯ ಮೇಲೆ ಮಲಗಿದ್ದ ದಿವ್ಯ ಶಿಶು ಕಾಣಿಸಿತು. ಅದು ಕಡು ನೀಲ ಮೋಡದ ಬಣ್ಣದ್ದಾಗಿತ್ತು. ತನ್ನ ಪಾದದ ಬೆರಳನ್ನು ಅದು ಬಾಯಲ್ಲಿಟ್ಟು ಚೀಪುತ್ತಿತ್ತು. ಮಾರ್ಕಂಡೇಯರು ಸ್ವಲ್ಪ ಹೆದರಿದ್ದರು. ಧೈರ್ಯ ತಾಳಿ ಮಗುವಿನ ಬಳಿ ಹೋದರು. ಅವರು ಮಗುವಿನ ಹತ್ತಿರ ಹೋಗುತ್ತಿದ್ದಂತೆ ಆ ಶಿಶು ಅವರನ್ನು ತನ್ನ ಬಾಯೊಳಗೆ ಸೆಳೆದುಕೊಂಡಿತು. ಆ ಪುಟ್ಟ ಬಾಯಲ್ಲಿ ಇಡೀ ಬ್ರಹ್ಮಾಂಡವೇ ಅವರಿಗೆ ಗೋಚರಿಸಿತು. ಎಲ್ಲವೂ ಈ ಮಗುವಿನ ಬಾಯೊಳಗೇ ಇದ್ದಂತೆ ಅನುಭವವಾಯಿತು. ಸ್ವಲ್ಪ ಸಮಯದಲ್ಲಿ ಆ ದಿವ್ಯ ಶಿಶು ಉಸಿರು ಹೊರ ಹಾಕಿದಾಗ ಋಷಿಗಳು ಹೊರಬಿದ್ದರು. ಅದೇ ಮರ ಅದೇ ಶಿಶು ಕಾಣಿಸಿತು. ಆಗ ಮಾರ್ಕಂಡೇಯರಿಗೆ ಆ ದಿವ್ಯ ಶಿಶುವೇ ಅವರು ಇದುವರೆಗೂ ಧ್ಯಾನ, ತಪಸ್ಸಿನಲ್ಲಿ ಪ್ರಾರ್ಥಿಸಿದ ಭಗವಾನ್ ವಿಷ್ಣು ಎಂದು ಅರ್ಥವಾಯಿತು. ಆ ಮಗು ಅವರನ್ನು ನೋಡಿ ಮಂದಹಾಸ ಬೀರಿತು. ಅವರು ಅದನ್ನು ಇನ್ನೇನು ತಬ್ಬಿಕೊಳ್ಳಬೇಕು. ಎನ್ನುವಲ್ಲಿ ಮಗು ಮರೆಯಾಗಿತ್ತು. ಆಗ ಅದು ಮಲಗಿದ್ದ ಎಲೆಯಾಗಲಿ, ಬೃಹತ್ ಮರವಾಗಲಿ ಕಣ್ಮರೆಯಾಗಿತ್ತು. ಋಷಿಗಳು ತಮ್ಮ ಆಶ್ರಮದಲ್ಲಿದ್ದ ಹಿಂದಿನಂತೆ ಆಸೀನರಾಗಿದ್ದರು. ಆಗ ನಡೆದದ್ದೆಲ್ಲಾ ಆ ಭಗವಂತನ ಮಾಯೆ ಮಾತ್ರ ಎಂದು ಅವರಿಗೆ ಮನದಟ್ಟಾಗಿತ್ತು.

ಸ್ವಲ್ಪ ಸಮಯದ ಬಳಿಕ ಶಿವ ಪಾರ್ವತಿಯರು ಅವರ ಆಶ್ರಮಕ್ಕೆ ಬಂದರು. ಧ್ಯಾನದಲ್ಲಿದ್ದ ಮಾರ್ಕಂಡೇಯರು ಕಣ್ತೆರೆದಾಗ ಆ ದಿವ್ಯ ದಂಪತಿಯನ್ನು ನೋಡಿ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಅವರನ್ನು ಮನಸಾರೆ ಸ್ತೋತ್ರಗೈದರು. ಇದರಿಂದ ಪ್ರೀತನಾದ ಭಗವಾನ್ ಶಂಕರನು "ಮಾರ್ಕಂಡೇಯ! ನಿನ್ನ ತಪಸ್ಸಿಗೆ ಮೆಚ್ಚಿದ್ದೇವೆ. ನಿನಗೆ ಬೇಕಾದ ವರವನ್ನು ಬೇಡು" ಎಂದು ನುಡಿದನು.

## ಶಿವನು ಅವರನ್ನು ಕುರಿತು ಹೇಳಿದ್ದು

ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃತ್ಶಿಲಾಮಯಾಃ
ತೇ ಪುನಂತ್ಯುರುಕಾಲೇನ ಯೂಯಂ ದರ್ಶನಮಾತ್ರತಃ

ಮುನಿವರ್ಯ! ಪುಣ್ಯತೀರ್ಥಗಳು, ದೇವತಾ ವಿಗ್ರಹಗಳು ಅವುಗಳನ್ನು ಕೋರಿದವರಿಗೆ ಫಲಗಳನ್ನು ನೀಡುವುದು ತಡವಾಗುತ್ತದೆ. ಆದರೆ ನಿಮ್ಮಂಥಾ ಋಷಿ ಮುನಿಗಳು, ಸಾಧುಗಳ ದರ್ಶನದಿಂದ ಬೇಗನೆ ಪುಣ್ಯಫಲಗಳು ದೊರೆಯುತ್ತವೆ.

ಆಗ ಮಾರ್ಕಂಡೇಯರು ಸ್ವಾಮಿ! ನನಗೆ ನಿಮ್ಮಲ್ಲಿ ಮತ್ತು ವಿಷ್ಣುವಿನಲ್ಲಿ ಸದಾ ಭಕ್ತಿಯಿರಲಿ ಇದೇ ನನಗೆ ನೀವು ಕರುಣಿಸಬೇಕಾದ ವರ ಮತ್ತೇನೋ ನನಗೆ ಬೇಡ ಎಂದರು. ಆಗ ಶಿವನುಃ ಋಷಿವರ್ಯ! ನಿನ್ನ ಹೆಸರು ಸದಾ ಈ ಜಗತ್ತಿನಲ್ಲಿ ಚಿರಂಜೀವಿಯಾಗಿ ಉಳಿಯಲಿ, ನೀನು ಈ ಜಗತ್ತಿನ ಲಯವನ್ನೂ ಕಾಣಬಹುದು. ನಿನ್ನ ತಪಸ್ಸು ಫಲಿಸಿದೆ ಎಂದು ವರ ನೀಡಿದನು. ನಿನಗೆ ಭೂತ-ವರ್ತಮಾನ- ಭವಿಷ್ಯಗಳ ಜ್ಞಾನವಿರಲಿ ಎಂದು ಅಭಯವಿತ್ತನು. ವಿಷ್ಣು ಶಿವರ ಸಾಕ್ಷಾತ್ ದರ್ಶನದಿಂದ ಮಾರ್ಕಂಡೇಯರು ಧನ್ಯರಾದರು.

# ಮನಸ್ಸಿನ ಭಾವನಾ ತರಂಗಗಳು

ವಿ. ನಾಗೇಂದ್ರ ಪ್ರಸಾದ್
98454 00816

ಮನುಷ್ಯನ ಮನಸ್ಸಿನ ವಿಕಾರವೇ ನಾನಾ ವಿಧವಾದ ಭಾವನೆಗಳ ಮೂಲಕ ವ್ಯಕ್ತವಾಗುತ್ತದೆ. ಮನಸ್ಸು ಚಂಚಲ ವಾದಂತೆ ನಮ್ಮ ಭಾವನೆಗಳೂ ಕ್ಷಣಕ್ಷಣಕ್ಕೂ ಬದಲಾಗುತ್ತದೆ ಅದರಂತೆಯೇ ಅವನ ವರ್ತನೆಗಳೂ ಬದಲಾಗುತ್ತವೆ. ಮೂಲತಃ ದೇಹದಲ್ಲಿ ಭಾವನೆಗಳು ದೈಹಿಕ ಹಾಗೂ ಮಾನ ಸಿಕ ಬದಲಾವಣೆಗಳಿಂದ ಉಂಟಾಗುತ್ತದೆ. ಅವು ನಮ್ಮ ವಿಚಾರ ಸರಣಿ ಹಾಗೂ ನಮ್ಮ ವರ್ತನೆಯ ಮೇಲೆ ಪ್ರಧಾನ ಪಾತ್ರ ವಹಿಸುತ್ತದೆ. ನಮ್ಮ ಶಿರದ ಬಲಭಾಗದಲ್ಲಿ ಅಮಿಗ್ಡಾಲಾ ಎಂಬ ಪುಟ್ಟ ಭಾಗವೇ ಭಾವನೆಗಳ ಉಗಮಸ್ಥಾನ ಎಂದು ಮನೋವೈಜ್ಞಾನಿಕರ ಅಭಿಪ್ರಾಯ. ಭಾವನೆಗಳು ಹಾಗೂ ಅದ ರಿಂದ ಉಂಟಾಗುವ ವರ್ತನೆಯ ಮೂಲ ಕಾರಣವೇನು ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಮನೋವಿಜ್ಞಾನಿ ಗಳಾದ ಜೇಮ್ಸ್‌ಲ್ಯಾಂಗ್,ಚಾರ್ಲ್ಸ್‌ಡಾರ್ವಿನ್, ಕ್ಯಾನನ್ ಬಾರ್ಡ್ ಮತ್ತು ಸ್ಯಾಕ್ಟರ್ ನಾನಾ ವಿಧವಾದ ಪರೀಕ್ಷೆಗಳನ್ನು ನಡೆಸಿ ಹಲವಾರು ಕಾರಣಗಳನ್ನು ನೀಡಿದ್ದಾರೆ. ಇವರು ಮಾಡಿದ ಪರೀಕ್ಷೆಗಳನ್ನು ಮನೋವಿಜ್ಞಾನದಲ್ಲಿ ಭಾವನೆಗಳ ವಿಭಿನ್ನ ಸಿದ್ಧಾಂತಗಳು ಎಂದೇ ಪ್ರಸಿದ್ಧವಾಗಿದೆ. ಅವುಗಳನ್ನು ಸ್ಥೂಲವಾಗಿ ಮೂರು ಗುಂಪಿನಲ್ಲಿ ವಿಂಗಡಿಸಬಹುದಾಗಿದೆ.

01. ದೇಹದಲ್ಲಿ ಆಗುತ್ತಿರುವ ನಿರಂತರ ಬದಲಾವಣೆ ಗಳಿಂದ ಆಗುವ ಪರಿಣಾಮವೇ ನಮ್ಮ ಭಾವನೆಗಳಿಗೆ ಕಾರಣ.

02. ನಮ್ಮ ತಲೆಯಲ್ಲಿರುವ ನರಮಂಡಲದಲ್ಲಿ ಆಗುವ ಬದಲಾವಣೆಗಳಿಂದ ಆಗುವ ಪರಿಣಾಮವೇ ನಮ್ಮ ಭಾವನೆ ಗಳಿಗೆ ಕಾರಣ.

03. ನಮ್ಮ ವಿಚಾರಸರಣಿಗಳು ಹಾಗೂ ಮಾನಸಿಕ ಚಟುವಟಿಗೆಗಳಿಂದ ಆಗುವ ಪರಿಣಾಮವೇ ನಮ್ಮ ಭಾವನೆ ಗಳಿಗೆ ಕಾರಣ.

ಇಲ್ಲಿ ಕುತುಹೂಲಕರವಾದ ಅಂಶವೇನೆಂದರೆ ಕಾರಣ ಗಳು ಬೇರೆ ಬೇರೆ ಇರಬಹುದು ಆದರೆ ಈ ಕಾರಣಗಳಿಗೆ ಯಾರು ಕಾರಣಕರ್ತರು ಎಂದು ಹೇಳುವುದಿಲ್ಲ. ಎಲ್ಲಿ ವಿಜ್ಞಾನ ಹೇಳಲಿಕ್ಕೆ ಸೋಲುತ್ತದೋ ಅಲ್ಲಿ ತತ್ತ್ವಶಾಸ್ತ್ರ ಹೇಳುತ್ತದೆ.

ನಾವೂ ಕೂಡ ನಮ್ಮೆಲ್ಲ ಭಾವನೆಗಳಿಗೆ ಮನಸ್ಸು ಕಾರಣ ಎಂದು ಒಪ್ಪುತ್ತೇವೆ, ಆದರೆ ಮನಸ್ಸು ಜಡ ಸ್ವತಂತ್ರ ವಾಗಿ ಅದು ನಿರ್ವಹಿಸಲು ಸಾಧ್ಯವಿಲ್ಲ ಅದಕ್ಕೆ ಅಭಿಮಾನಿ ಹಾಗೂ ನಿಯಾಮಕ ಭಗವದ್ರೂಪವೆಂಬ ಚೇತನದ ಅಗತ್ಯವಿದೆ. ಇದನ್ನು ನಮ್ಮ ತತ್ವಶಾಸ್ತ್ರಗಳು ಹೇಳುತ್ತದೆ. ಶ್ರೀ ಕೃಷ್ಣ ಭಗವದ್ಗೀತೆಯ 18/61 ರಲ್ಲಿ,

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥

ಎಂಬ ಸುಳಿವನ್ನು ನೀಡಿದ್ದಾನೆ. ನಮ್ಮ ಹೃದಯದಲ್ಲಿ 8 ದಳಗಳುಳ್ಳ ಕಮಲವಿದೆ. ಆ ಕಮಲದ ಮಧ್ಯದಲ್ಲಿ ಹಂಸ ನಾಮಕ ಪರಮಾತ್ಮನಿದ್ದು ಎಂಟೂ ದಿಕ್ಕುಗಳಲ್ಲಿ ಸಂಚರಿಸಿ ಎಂಟು ವಿಧ ಕಾರ್ಯಗಳನ್ನು ಮಾಡಿಸುವವನು ಎಂದು ಈ ಶ್ಲೋಕದ ಅರ್ಥ. ಈ ಶ್ಲೋಕವನ್ನು ಮೂಲವಾಗಿಟ್ಟುಕೊಂಡು ಜಗನ್ನಾಥದಾಸರು **"ಹರಿಕಥಾಮೃತಸಾರ"** ದ 9 ನೆ ಸಂಧಿ ಯಾದ **"ವರ್ಣಪ್ರಕ್ರಿಯಾ"** ಸಂಧಿಯ 20-24 ಪದ್ಯಗಳಲ್ಲಿ ಭಗವಂತನ ಮಹಿಮೆಯನ್ನು ಸುಲಭವಾಗಿ ವರ್ಣಿಸಿದ್ದಾರೆ. ಅದರ ವರ್ಣನೆಯನ್ನು ಈಗ ತಿಳಿಯೋಣ.

20 ನೆ ಪದ್ಯದಲ್ಲಿ ಹಂಸನಾಮಕ ಭಗವಂತ ನಮ್ಮ ಹೃದಯಕಮಲದ 8 ದಳಗಳಲ್ಲಿ ನಿರಂತರವಾಗಿ 8 ದಿಕ್ಕು ಗಳಲ್ಲಿ ಸಂಚರಿಸುತ್ತಿರುತ್ತಾನೆ. ಇದನ್ನು ದಾಸರು "ಕುಲಾಲ ಚಕ್ರದಂದದಿ"ಎಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ಕುಲಾಲ ಎಂದರೆ ಕುಂಬಾರ, ಗಡಿಗೆಯನ್ನು ಮಾಡಬೇಕಾದರೆ ಚಕ್ರದ ಮೇಲೆ ಮಣ್ಣಿನ ಮುದ್ದೆಯಿಟ್ಟು ಚಕ್ರವನ್ನು ತಿರುಗಿಸುತ್ತಾ ತನಗೆ ಬೇಕಾದ ಮಡಿಕೆಯ ಗಾತ್ರವನ್ನು ಕುಂಬಾರ ಮಾಡು ತ್ತಾನೆ. ಅದೇ ರೀತಿಯಲ್ಲಿ ಪರಮಾತ್ಮ ಎಂಟು ದಳಗಳ ಅರ್ಥಾತ್ ಎಂಟು ದಿಕ್ಕುಗಳಲ್ಲಿ ನಿರಂತರವಾಗಿ ಸಂಚರಿಸು ತ್ತಾನೆ. ಮೊದಲು ನಾವು ಎಂಟು ದಿಕ್ಕುಗಳು (ನಾಲ್ಕು ದಿಕ್ಕು ನಾಲ್ಕು ವಿದಿಕ್ಕು) ಯಾವವು ಎಂದು ತಿಳಿದುಕೊಳ್ಳಬೇಕು.

ಪೂರ್ವ-ಆಗ್ನೇಯ-ದಕ್ಷಿಣ-ನೈಋತ್ಯ-ಪಶ್ಚಿಮ-ವಾಯುವ್ಯ-ಉತ್ತರ-ಈಶಾನ್ಯ. ಅಂದರೆ ಪೂರ್ವದಿಂದ ಈಶಾನ್ಯದವರೆಗೆ ಹಂಸನಾಮಕ ಪರಮಾತ್ಮ ತಿರುಗುತ್ತಾನೆ. ಎಂದು ಅರ್ಥಮಾಡಿಕೊಳ್ಳಬೇಕು.

21 ನೆ ಪದ್ಯದಲ್ಲಿ ಆಯಾ ದಿಕ್ಕಿನ ಅಭಿಮಾನಿ ಹಾಗೂ ನಿಯಾಮಕ ಭಗವದ್ರೂಪಗಳನ್ನು ತಿಳಿಸುತ್ತಾರೆ. ಪೂರ್ವಕ್ಕೆ ಇಂದ್ರ ಅಭಿಮಾನಿ, ಉಪೇಂದ್ರ ನಿಯಾಮಕರೂಪ, ಆಗ್ನೇ ಯಕ್ಕೆ ಅಗ್ನಿ ಅಭಿಮಾನಿ ಪರಶುರಾಮ ನಿಯಾಮಕರೂಪ, ದಕ್ಷಿಣಕ್ಕೆ ಯಮ ಅಭಿಮಾನಿ ರಾಮದೇವರು ನಿಯಾಮಕ

ರೂಪ, ನೈಋತ್ಯಕ್ಕೆ ನಿಋತಿ ಅಭಿಮಾನಿ ಜನಾರ್ದನ ನಿಯಾಮಕ ರೂಪ, ಪಶ್ಚಿಮಕ್ಕೆ ವರುಣ ಅಭಿಮಾನಿ ಮತ್ಸ್ಯರೂಪಿ ನಿಯಾಮಕ ರೂಪ, ವಾಯುವ್ಯಕ್ಕೆ ಕೋಣ ವಾಯು ಅಭಿಮಾನಿ ಹಯಗ್ರೀವ ನಿಯಾಮಕರೂಪ ಉತ್ತರಕ್ಕೆ ಚಂದ್ರ ಹಾಗೂ ಕುಬೇರರು ಅಭಿಮಾನಿಗಳು ಕಪಿಲ ನಿಯಾಮಕ ರೂಪ ಹಾಗೂ ಈಶಾನ್ಯಕ್ಕೆ ರುದ್ರ ದೇವರು ಅಭಿಮಾನಿ ನರಸಿಂಹ ನಿಯಾಮಕರೂಪ.

ಹಂಸನಾಮಕ ಪರಮಾತ್ಮ ಒಂದೊಂದು ದಿಕ್ಕಿನಲ್ಲಿ ಬಂದಾಗ ಯಾವ್ಯಾವ ಆಲೋಚನೆಗಳು ನಮ್ಮಲ್ಲಿ ಹುಟ್ಟುಕೊಳ್ಳುತ್ತವೆ ಎಂದು ದಾಸರು ಮುಂದಿನ 3 ಪದ್ಯಗಳಲ್ಲಿ ತಿಳಿಸಿರುವರು.

**ಪ ರ್ವ :**

ಹಂಸರೂಪಿ ಪರಮಾತ್ಮ ಪೂರ್ವದಿಕ್ಕಿಗೆ ಬಂದರೆ ನಮಗೆ ಯಾವಾಗಲೂ ದೇವರ ಬಗ್ಗೆ ಆಲೋಚನೆ ಮಾಡಬೇಕೆಂಬ ಹಾಗೂ ಧಾರ್ಮಿಕರಾಗಿರಬೇಕೆಂಬ ಬಯಕೆ ಹುಟ್ಟುತ್ತದೆ. ಇಂದ್ರ ದೇವತೆಗಳ ಅಧಿಪತಿ ಅವನಿರುವ ಸ್ಥಳದಲ್ಲಿ ಪಾಪ ಕಾರ್ಯಗಳಿಗೆ ಅವಕಾಶವೇ ಇರುವುದಿಲ್ಲ. ಹಾಗಾಗಿ ನಾವೂ ಕೂಡಾ ಧಾರ್ಮಿಕರಾಗಿರಲು ಬಯಸುತ್ತೇವೆ.

**ಆಗ್ನೇಯ :**

ಆಗ್ನೇಯ ದಿಕ್ಕಿಗೆ ಹಂಸರೂಪ ಪರಮಾತ್ಮ ಬಂದರೆ ನಿದ್ರೆ ಆಲಸ್ಯ ಹಸಿವು ಬಾಯಾರಿಕೆ ಯಾವ ಕೆಲಸದಲ್ಲಿಯೂ ನಿರಾಸಕ್ತಿ ಆಗುತ್ತದೆ. ಅಗ್ನಿ ತಾಪಕರ ಬಹಳ ಬಿಸಿ ತಾಪ ಎಂದರೆ ನಿದ್ರೆ ಹಸಿವು ಮೊದಲಾದ ತಾಪಗಳೂ ನಮಗೆ ಉಂಟಾಗುತ್ತದೆ.

**ದಣ್ಣಣ :**


ದಕ್ಷಿಣ ದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ಸಿಟ್ಟು, ಸೆಡುವು, ಇನ್ನೊಬ್ಬರ ಮೇಲೆ ನಿರಾಕಾರಣವಾಗಿ ಕೂಗಾಡುವುದು ಉಂಟಾಗುತ್ತದೆ. ಯಮ ನರಕಲೋಕದ ಅಧಿಪತಿ, ಅಲ್ಲಿ ಯಾವಾಗಲೂ ಹೊಡಿ,ಬಡಿ,ಕಡಿ ಎಂದು ಯಮ ಕಿಂಕರರು ಕೂಗಾಡುತ್ತಾ ಶಿಕ್ಷೆ ನೀಡುತ್ತಿರುತ್ತಾರೆ ಅದರಂತೆಯೇ ನಮಗೂ ಕೂಡ ಅದೇ ರೀತಿಯಾದ ಪ್ರಚೋದನೆ ಬರುತ್ತದೆ.

**ನೈಋತ್ಯ :**

ನೈಋತ್ಯ ದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ಬರೀ ಪಾಪಕರ್ಮಗಳನ್ನು ಮಾಡುವ ಬುದ್ಧಿ ಹುಟ್ಟುತ್ತದೆ. ಅಧರ್ಮ ಸುಲಿಗೆ ಭ್ರಷ್ಟಾಚಾರ ಅನಾಚಾರ ಮುಂತಾದ ಆಲೋಚನೆಗಳು ಬರುತ್ತದೆ. ನಿಋತಿ ರಾಕ್ಷಸರಿಗೆ ಅಧಿಪತಿ, ಅಸುರರು ಎಂದರೆ ಯಾವಾಗಲೂ ಇನ್ನೊಬ್ಬರಿಗೆ ಕೆಡುಕನ್ನು ಬಯಸುವವರು, ನಮಗೂ ಇನ್ನೊಬ್ಬರಿಗೆ ಕೆಡುಕನ್ನು ಮಾಡುವ ಪ್ರಚೋದನೆ ಬರುತ್ತದೆ.

**ಪಶ್ಚಿಮ :**

ಪಶ್ಚಿಮ ದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ನಮ್ಮಲ್ಲಿ ಹಾಸ್ಯ ವಿನೋದ ಪ್ರವೃತ್ತಿಗಳು ಬರುವುದು. ವರುಣ ಸಮುದ್ರದ ಅಭಿಮಾನಿ, ಸಮುದ್ರ ಯಾವಾಗಲೂ ಶಾಂತವಾಗಿರುತ್ತದೆ, ಅದರಂತೆ ನಮ್ಮ ಮನಸ್ಸೂ ಶಾಂತವಾಗಿರುತ್ತದೆ. ಮತ್ಸ್ಯರೂಪಿ ರೂಪಿ ಪರಮಾತ್ಮನೂ ಅತ್ಯಂತ ಶಾಂತ ಮಂದರಪರ್ವತ ತನ್ನ ಬೆನ್ನಲಿ ಇಟ್ಟರೂ ಅದು ಅವನಿಗೆ ತುಲಿಸಿಕೊಂಡ ಸಂತೋಷವೇ ಆಯಿತೇ ಹೊರತು ಅವನಿಗೆ ಸಿಟ್ಟು ಬರಲಿಲ್ಲ. ಇದನ್ನು ದಾಸರು **"ಬೆಟ್ಟ ಬೆನ್ನೆಲ್ಲಿ ಪೆ ರೆ ದವರೊಳು ಟ್ಟು ಮಾಡಿದ ನೇನೋ ಹರಿ"** ಎನ್ನುತ್ತಾರೆ. ಅದರಂತೇ ನಾವೂ ಕೂಡ ಶಾಂತಚಿತ್ತರಾಗಿದ್ದಾಗ ನಮ್ಮಲ್ಲಿಯೂ ಹಾಸ್ಯ ವಿನೋದ ಪ್ರವೃತ್ತಿಗಳು ಬರುತ್ತದೆ.



**ವಾಯುವ್ಯ :**

ವಾಯುವ್ಯ ದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ಒಡಾಟಗಳ ಚಟುವಟಿಕೆ ನಡೆಯುತ್ತದೆ. ವಾಯುದೇವರಿಗೆ ಸದಾಗತಿ ಎಂಬ ವಿಶೇಷಣವನ್ನು ಉಪನಿಷತ್ತು ನೀಡುತ್ತದೆ ಏಕೆಂದರೆ ಗಾಳಿ ಯಾವಾಗಲೂ ಬೀಸುತ್ತಿರುತ್ತದೆ ಅಂತೆಯೇ ಹಯಗ್ರೀವ ಎಂದರೆ ಕುದುರೆ, ಕುದರೆ ಒಂದು ಕಡೆ ನಿಲ್ಲದ ಪ್ರಾಣಿ. ಅಂತೆಯೇ ನಮ್ಮಲ್ಲಿಯೂ ಕೂಡ ಗಮನಾಗಮನ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತೇವೆ.

**ಉತ್ತರ :**

ಉತ್ತರ ದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ಭಗವಂತನ ಕಡೆಗೆ ಒಲವು ಹೆಚ್ಚಾಗುತ್ತದೆ ಭಗವಂತನ ಜಿಜ್ಞಾಸ ಮಾಡಬೇಕು ಎಂಬ ಇಚ್ಛೆ ಬರುತ್ತದೆ. ಚಂದ್ರ ಮತ್ತು ಕುಬೇರರು ಅಭಿಮಾನಿದೇವತೆಗಳು, ಚಂದ್ರ ಆಹ್ಲಾದಕ್ಕೆ ಸಂಕೇತವಾದರೆ ಕುಬೇರ ಶ್ವರ್ಯಕ್ಕೆ ಸಂಕೇತ, ಇಲ್ಲಿ ಆಹ್ಲಾದ ಎಂದರೆ ಮನಸ್ಸಿನ ಸ್ವಾಸ್ಥ್ಯತೆ ಹಾಗೂ ಶ್ವರ್ಯ ಎಂದರೆ ಆಧ್ಯಾತ್ಮಿಕ ಸಂಪತ್ತು ಎಂದರ್ಥ,

ಇನ್ನು ಕಪಿಲ ನಿಯಾಮಕ ಭಗವದ್ರೂಪ, ಅವನು ತನ್ನ ತಾಯಿಗೆ ತತ್ತ್ವಜ್ಞಾನವನ್ನು ಬೋಧಿಸಿ ಸಂಸಾರವೆಂಬ ಸಾಗರದಿಂದ ಪಾರು ಮಾಡಿದವ, ಕಪಿಲ ಎಂದರೆ ಜ್ಞಾನರೂಪಿ, ಅಂತೆಯೇ ನಮ್ಮಲ್ಲಿಯೂ ಭಗವಂತನ ಬಗ್ಗೆ ತಿಳಿದುಕೊಳ್ಳಬೇಕು ಎಂದು ತುಡಿತ ಹೆಚ್ಚಾಗುತ್ತದೆ.

**ಈಶಾನ್ಯ :**

ಈಶಾನ್ಯದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ನಮ್ಮಲ್ಲಿ ದಾನ ಧರ್ಮಗಳು ಮಾಡಬೇಕೆಂಬ ಇಚ್ಛೆ ಹುಟ್ಟುತ್ತವೆ. ರುದ್ರದೇವರು ಅಭಿಮಾನಿದೇವತೆಗಳು. ರುದ್ರದೇವರು ಮನೋನಿಯಾಮಕರೆಂದು ಪ್ರಸಿದ್ಧರಾದರೂ ಇಲ್ಲಿ ಶ್ವರ್ಯಪ್ರದರು ಎಂಬ ಗುಣವನ್ನು ಹೇಳುತ್ತಿದ್ದಾರೆ,

ಯಜ್ಞ ಉಚ್ಛಿಷ್ಟವಾದ ಎಲ್ಲಾ ವಸ್ತುಗಳೂ ರುದ್ರದೇವರ ಪಾಲಾದರೂ ಒಬ್ಬ ರಾಜಕುಮಾರನಿಗೆ ಅದೆಲ್ಲವನ್ನೂ ಕೊಟ್ಟರು ಎಂದು ಭಾಗವತದಲ್ಲಿ ಬರುವ ನಾಭಾಗ ರಾಜನ ಪ್ರಸಂಗವೊಂದನ್ನು ನಾವು ನೆನೆಪು ಮಾಡಿಕೊಳ್ಳಬೇಕು. (ಭಾಗವತದ 9ನೆ ಸ್ಕಂದದ 5 ನೆ ಅಧ್ಯಾಯದಲ್ಲಿ ನಾಭಾಗನ ಕಥೆ ಬರುತ್ತದೆ),

ಅದರಂತೆ ನರಸಿಂಹನೂ ತನ್ನ ಭಕ್ತನಾದ ಪ್ರಹ್ಲಾದನಿಗೆ ಮೋಕ್ಷವೆಂಬ ಶ್ವರ್ಯವನ್ನೇ ಇತ್ತ ಅಂತೆಯೇ ನಮ್ಮಲ್ಲಿಯೂ ನಮ್ಮ ಯೋಗ್ಯತಾನುಸಾರವಾಗಿ ದಾನ ಧರ್ಮಗಳನ್ನು ಮಾಡಬೇಕು ಎಂಬ ಬುದ್ಧಿ ಹುಟ್ಟುತ್ತದೆ. ನಮ್ಮ ಸಾಧನೆ ಮುಂದುವರೆಯಬೇಕಾದರೆ ನಮ್ಮ ಮನಸ್ಸು ಯಾವಾಗಲೂ ಉತ್ತರ ಹಾಗೂ ಈಶಾನ್ಯ ದಿಕ್ಕಿನಲ್ಲೇ ಸಂಚಾರ ಮಾಡುವಂತೆ ನಮ್ಮ ಬಿಂಬರೂಪಿ ಪರಮಾತ್ಮನನ್ನು ಕೇಳಿಕೊಳ್ಳಬೇಕು.

ಇಲ್ಲಿಯವರೆಗೆ 8 ದಿಕ್ಕಿನಲ್ಲಿ ಹಂಸನಾಮಕ ಪರಮಾತ್ಮ ಆಯಾ ದಿಕ್ಕಿನಲ್ಲಿ ಬಂದಾಗ ನಮ್ಮ ಭಾವನೆಗಳು ಹೇಗೆ ಇರುತ್ತವೆ ಎಂದು ಹೇಳಿ, ಮುಂದೆ ಹೃದಯಕಮಲದ ಮೇಲ್ಭಾಗ, ಮಧ್ಯಭಾಗ ಹಾಗೋ ತುದಿಯ ಭಾಗ ಬಂದಾಗ ನಮಗೆ ಯಾವ ಅವಸ್ಥೆಗಳು ಪ್ರಾಪ್ತವಾಗುತ್ತದೆ ಎಂದು ದಾಸರು ತಿಳಿಸುತ್ತಾರೆ. ಹಂಸನಾಮಕ ಪರಮಾತ್ಮ ಹೃದಯದ ಮೇಲ್ಭಾಗಕ್ಕೆ ಬಂದಾಗ ನಮಗೆ ಸ್ವಪ್ನಾವಸ್ಥೆಯಾಗುತ್ತದೆ.

ಹಂಸನಾಮ ಪರಮಾತ್ಮ ಹೃದಯದ ಮಧ್ಯಭಾಗಕ್ಕೆ ಬಂದಾಗ ನಮಗೆ ವಿರಕ್ತಾವಸ್ಥೆ ಬರುತ್ತದೆ. ಹಂಸನಾಮದ ಪರಮಾತ್ಮ ಹೃದಯದ ಕೆಳಭಾಗ (ತುದಿಯ)ಕ್ಕೆ ಬಂದಾಗ ನಮಗೆ ಸುಷುಪ್ತಾವಸ್ಥೆಯಾಗುತ್ತದೆ (ಗಾಢನಿದ್ರೆ) ಹಂಸನಾಮಕ ಪರಮಾತ್ಮ ಹೃದಯದ ದಳ ಭಾಗಕ್ಕೆ ಬಂದಾಗ ನಮಗೆ ಜಾಗೃದಾವಸ್ಥೆ ಬರುತ್ತದೆ (ಎಚ್ಚರ)

ಕಮಲಾಪತಿದಾಸರು ಎಂಬುವವರು ಹರಿಕಥಾಮೃತಸಾರಕ್ಕೆ **"ಭಾವಸು ದರ್ಪಣ"** ಎಂಬ ಕನ್ನಡ ವ್ಯಾಖ್ಯಾನ ಬರೆದಿದ್ದಾರೆ. ಅದರಲ್ಲಿ **"ಮೂರ್ತಿತತ್ತ್ವ"** ಎಂಬ ಪ್ರಮಾಣ ಗ್ರಂಥದಿಂದ ದಾಸರ ಹೇಳಿಕೆಗಳನ್ನು ಸಮರ್ಥಿಸಿದ್ದಾರೆ.

ಪೂರ್ವದಲೇ ಪುಣ್ಯ ಬುದ್ಧಿರಗ್ನೌ ನಿದ್ರಾಕ್ಷುಧಾದಿಕಮ್।
ಯಾಮ್ಯದಲೇ ಕ್ರೂರ ಬುದ್ಧಿರ್ನೈಋತ್ಯಾಂ ಪಾಪಬುದ್ಧಿ ಧ್ಕೃತ್॥
ವಾರುಣ್ಯಾಂ ಚ ಪರಿಕ್ರೀಡಾ ವಾಯುವ್ಯಾಂ ಗಮನಾಗಮೌ।
ಕೌಬೇರ್ಯಾಂ ರತಃ ಬುದ್ಧಿ ಸ್ಯಾದೀಶಾನ್ಯೇ ದ್ರವ್ಯದಾನಕೃತ್॥
ಮಧ್ಯೇವೈರಾಗ್ಯ ಬುದ್ಧಿ ಸ್ಯಾತ್ ಸ್ವಪ್ನಾವಸ್ಥಾತು ಕೇಸರೇ।
ಜಾಗೃತ್ ಜ್ಞೇಯಾ ಕರ್ಣಿಕಾಯಾಂ ಲಿಂಗೇ ಚೈವ ಸುಷುಪ್ತಿಕೃತ್॥

ಮೇಲಿನ ಎಲ್ಲ ವಿಚಾರಗಳನ್ನು ಗಮನಿಸಿದಾಗ ಮನೋವೈಜ್ಞಾನಿಕ ಶಾಸ್ತ್ರ ವಿಷಯದಲ್ಲಿ ನಮ್ಮ ಮನಸ್ಸಿನ ಭಾವನೆಗಳು ಹೇಗೆ ಮೂಡುತ್ತವೆ ಅಥವಾ ಮೂಡಬಹುದು ಎಂದು ಹೇಳುತ್ತವೇ ಹೊರತು ಭಾವನೆಗಳು ಮೂಡುವುದಕ್ಕೆ ನಿಖರವಾದ ಕಾರಣವಾಗಲಿ ಅಥವಾ ಭಾವನೆಗಳನ್ನು ಹುಟ್ಟುವುದಕ್ಕೆ ಯಾರು ಕಾರಣ ಎಂದು ಹೇಳುವುದಿಲ್ಲ.

ಕಿಂತು ತತ್ತ್ವಶಾಸ್ತ್ರದಲ್ಲಿ ನಮ್ಮ ಭಾವನೆಗಳು ಹೇಗೆ ಹುಟ್ಟುತ್ತವೆ ಹಾಗೂ ಅದಕ್ಕೆ ಯಾರು ಕಾರಣ ಎಂಬುದರ ಬಗ್ಗೆ ಸ್ಪಷ್ಟವಾದ ವಿವರಣೆ ನೀಡಿ ಎಲ್ಲದಕ್ಕೂ ಭಗವಂತನೇ ಕಾರಣ ಎಂದು ಪ್ರಮಾಣ ಪೂರ್ವಕವಾಗಿ ಪ್ರತಿಪಾದಿಸುತ್ತದೆ.

ಭಗವಂತನೇ ನಮ್ಮೆಲ್ಲಾ ಸ್ಥಿತಿಗೆ ಕಾರಣ ಅವನಿಲ್ಲದಿದ್ದರೆ ನಮ್ಮದೇನೂ ನಡೆಯದು (ತೇನ ವಿನಾ ತೃಣಮಪಿ ನ ಚಲತಿ) ಎಂಬ ಕಟುಸತ್ಯವನ್ನು ಅರಿತು ನಮ್ಮೆಲ್ಲಾ ಭಾವನಾತರಂಗಗಳನ್ನು ಕೊಡುವ ಸರ್ವಪ್ರೇರಕನಾದ ಶ್ರೀಹರಿಗೆ ಜಗನ್ನಾಥದಾಸರ ಅಂತರ್ಯಾಮಿಯಾದ ಭಾರತಿ ಮುಖ್ಯ ಪ್ರಾಣಾಂತರ್ಗತನಾದ ಜಗನ್ನಾಥವಿಠಲನಿಗೆ ಇದು ನಿನ್ನ ಪೂಜೆ ಎಂದು ಸಮರ್ಪಿಸೋಣ.

# ತಪ್ತ ಚಕ್ರಾಂಕನ ಪ್ರಮಾಣ

- ಡಾ.ನ.ನ. ಮೂರ್ತಿ

ಮುಮುಕ್ಷುವಾದವನಿಗೆ ಸಹ ಮೋಕ್ಷ ಹೊಂದಲು ಪಂಚಸಂಸ್ಕಾರಕ್ಕೆ ಒಳಪಡುವುದು ಅವಶ್ಯಕ. ಸಂಸ್ಕಾರವೆಂದರೆ: ಕಾರ್ಯಾಂತರಯೋಗ್ಯತಾ ಕಾರಣತ್ವಮ್.... ಅಂದರೆ ಈಗಿರುವ ಸ್ಥಿತಿಗಿಂತಲೂ ಮತ್ತಷ್ಟು ಉನ್ನತ ದಶೆಯನ್ನು ಹೊಂದಲು ಆವಶ್ಯಕವಾದ ಅರ್ಹತೆಯನ್ನು ಪಡೆಯುವುದು. ಮುಮುಕ್ಷುಗಳ ಹೊಂದಲು ಯೋಗ್ಯವಾದ ಉನ್ನತ ಸ್ಥಿತಿಯೆಂದರೆ, ಮುಂದೆ ಯಾವುದೇ ರೀತಿಯಲ್ಲಿಯೂ ಕರ್ಮದ ಲೇಶವೂ ಸಹ ಉಂಟಾಗುವ ಅವಕಾಶ ನೀಡದಿರುವುದು. ಈಗಿನವರೆಗೆ ಉಳಿದಿರುವ ಕರ್ಮಶೇಷವನ್ನು ಸಂಪೂರ್ಣ ಕಳೆಯುವುದು. ಪುನಃ ನಿತ್ಯನಿರವಿಚ್ಛಿನ್ನ - ನಿರವತಿಶಯ ನಿರುಪಾಧಿಕ-ನಿರವಧಿಕ ಆನಂದವನ್ನು ಹೊಂದುವುದು. ಇವೆಲ್ಲವೂ ಒಬ್ಬನೇ ವ್ಯಕ್ತಿಗೆ, ಒಂದೇ ದೇಶದಲ್ಲಿ ಒಂದೇ ಕಾಲಕ್ಕೆ ಉಂಟಾಗಬೇಕು. ಅದನ್ನೇ ಮೋಕ್ಷ ಎನ್ನುವುದು.

ಅಂತ ಸ್ಥಿತಿಯನ್ನು ಹೊಂದಲು ಮನುಷ್ಯ ತಾಪ, ಪುಂಡ್ರ, ನಾಮ, ಮಂತ್ರ, ಯಾಗ ಎಂಬ ಹೆಸರಿನ ದು ಸಂಸ್ಕಾರಗಳಿಂದ ಕೂಡಿರುವುದು ಅವಶ್ಯಕ. ಈ ಪಂಚ ಸಂಸ್ಕಾರಗಳು ಕೇವಲ ಅಲೌಕಿಕ ಪುರುಷಾರ್ಥಗಳಿಗಷ್ಟೇ ಅಲ್ಲ, ಅನೇಕ ಲೌಕಿಕ ಪುರುಷಾರ್ಥಗಳಿಗೂ ಸಹ ಮಾಡಲ್ಪಡುತ್ತದೆ. ಅವುಗಳಲ್ಲಿ ತಾಪ ಎನ್ನುವ ಸಂಸ್ಕಾರದ ಅರ್ಥ, ಶ್ರೀ ಮನ್ನಾರಾಯಣನ ಅಸಾಧಾರಣ ಚಿನ್ಹೆ ಶಂಖ ಮತ್ತು ಚಕ್ರಗಳನ್ನು ಶಾಸ್ತ್ರಾನುಸಾರ ಅಗ್ನಿಯಲ್ಲಿ ಕಾಯಿಸಿ (ತಪಿಸಿ) ಎರಡು ತೋಳುಗಳ ಮೂಲದಲ್ಲಿ ಒತ್ತುವುದು (ಧಾರಣೆ), ಇದಕ್ಕೆ ಶ್ರುತಿ, ಸ್ಮೃತಿ, ಸೂತ್ರ, ಇತಿಹಾಸ, ಪುರಾಣ, ಆಗಮ ಮುಂತಾದ ಅನೇಕ ಪ್ರಮಾಣಗಳು ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತುತ ಪಡಿಸಬಹುದು. ಇವುಗಳಲ್ಲದೆ ಇನ್ನು ಅನೇಕ ಪ್ರಮಾಣಗಳಿವೆ.

ಇಲ್ಲಿ ಕೆಲವು ಪ್ರತ್ಯಕ್ಷ ಪ್ರಮಾಣಾನುಭವಗಳು ಮತ್ತು ಅನೇಕ ಯುಕ್ತಿಗಳು ಪ್ರಸ್ತುತವಾಗಿವೆ. ತಮ್ಮ ಪ್ರಭುವಿನ (ಒಡೆಯನ) ಅಸಾಧಾರಣ ಚಿನ್ಹೆಗಳನ್ನು ಧರಿಸುವುದರಿಂದಲೇ ಸೇವಕ ತನ್ನ ಅಧಿಕಾರಿಗಳ ಹುದ್ದೆಗೆ ಹೊಂದಿಕೊಂಡಂತೆ ಶಕ್ತಿ ಸಾಮರ್ಥ್ಯ ಮತ್ತು ಗೌರವಾದರಗಳನ್ನು ಪಡೆಯಬಲ್ಲ. ಶಂಖ,ಚಕ್ರ,ಚಿನ್ಹೆಗಳನ್ನು ಹೊಂದಿರುವುದರಿಂದಲೇ ಎತ್ತು ಮುಂತಾದ ಪ್ರಾಣಿಗಳೂ ಸಹ ಪೂಜಿಸಲ್ಪಡುತ್ತವೆ. ಅವು ದೇವತ್ವ ಪಡೆದರೆ ಎನ್ನುವಂತೆ ಚಿಕ್ಕದೊಂದು ಕಾಗದದ ತುಂಡೂ ಸಹ ಸರ್ಕಾರದ ಮುದ್ರೆ ಒತ್ತಿರುವುದರಿಂದ ಹಣದ ರೂಪದಲ್ಲಿ (ನೋಟು) ಅಮೂಲ್ಯ, ಬೆಲೆಯುಳ್ಳ ಗೌರವವನ್ನು ಪಡೆಯುತ್ತದೆ. ದುಃಸ್ಥಿತಿಯಲ್ಲಿರುವ ಪ್ರಾಣಿಗಳು ಮತ್ತು ಅಚೇತನವಾದ ಕಾಗದ ಮುಂತಾದ ಪದಾರ್ಥಗಳೂ ಸಹ ಹೀಗೆ ಸರ್ಕಾರದ ಮುದ್ರೆಯಿಂದ ಪವಿತ್ರ, ಪ್ರತಿಭಾ, ಪ್ರಭಾವ ಮತ್ತು ಉನ್ನತ ಸ್ಥಿತಿಯನ್ನು ಹೊಂದುವುದಾದರೆ ಎಲ್ಲ ಲೋಕಗಳ ಏಕಮಾತ್ರ ಪ್ರಭುವಾದ ಶ್ರೀಮನ್ನಾರಾಯಣನ ಅಸಾಧಾರಣ ಚಿನ್ಹೆಗಳನ್ನು ಯಥಾವಿಧಿಯಾಗಿ ಧಾರಣೆಮಾಡಿಕೊಳ್ಳವುದರಿಂದ ಅದೆಷ್ಟು ಪಾವಿತ್ರ್ಯತೆ, ಪ್ರಭಾವ ಮತ್ತು ಔನ್ನತ್ಯ ಉಂಟಾಗುತ್ತದೆ ಎಂಬುದನ್ನು ಹೇಳುವ, ಊಹಿಸುವ ಅಗತ್ಯವಾದರೂ ಏನಿದೆ? ತಪ್ತ ಚಕ್ರಾಂಕಿತ ಮನುಷ್ಯ ಉಳಿದ ನಾಲ್ಕು ಸಂಸ್ಕಾರಗಳನ್ನು ಸಹ ಪಡೆದು ಅದರಂತೆಯೇ ಜ್ಞಾನ ಮತ್ತು ಅನುಷ್ಠಾನ ಮಾಡುವುದರಿಂದ ಶ್ರೇಯಸ್ಸು ಉಂಟಾಗುತ್ತದೆ.

ಯೇ ಕಂಠಲಗ್ನ ತುಲಸೀ ನಲಿನಾಕ್ಷಮಾಲಾ
ಯೋ ಬಾಹುಮೂಲ ; ಪರಿಚಿಹ್ನಿತ ಶಂಖ ಚಕ್ರಾಃ
ಯೇ ವಾ ಲಲಾಟಫಲಕೇ ಲಸದೂರ್ಧ್ವಪುಂಡ್ರಾ,
ವೈಷ್ಣವಾ ಭುವನ ಮಾಶು ಪವಿತ್ರಯಂತಿ ॥

ಯಾರು ಕುತ್ತಿಗೆಯಲ್ಲಿ ತುಲಸೀ ಅಥವಾ ಕಮಲ ಬೀಜಗಳ ಮಾಲೆಯನ್ನು ಧರಿಸುತ್ತಾರೋ, ಭುಜಗಳಲ್ಲಿ (ತೋಳು) ಶಂಖ ಚಕ್ರ ಚಿನ್ಹೆಗಳನ್ನು ಮತ್ತು ಹಣೆಯಲ್ಲಿ ಬಿಳುಪು ಮೃತ್ತಿಕೆಯಿಂದ ಮತ್ತು ಕೆಂಪು/ಹಳದಿ ಶ್ರೀಚೂರ್ಣಗಳ ಊರ್ಧ್ವ ಪುಂಡ್ರಗಳನ್ನು ಧರಿಸುತ್ತಾರೋ ಅವರು ಶ್ರೀವೈಷ್ಣವರೆನಿಸಿಕೊಳ್ಳುತ್ತಾರೆ. ಅವರಿಂದಾಗಿ ಇಡೀ ವಿಶ್ವವೇ ಪವಿತ್ರವಾಗುತ್ತದೆ.

**ಪದ್ಮಪುರಾಣದಲ್ಲಿ :**

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ ,
ವದತಿಯವಾಃ ಕಿಲ ತಸ್ಯ ಕರ್ಣಮೂಲೇ।
ಪರಿಹರ ಮಧುಸೂದನ ಪ್ರಪನ್ನಾನ್,
ಪ್ರಭುರಹಮನ್ಯ ನೃಣಾಂ ನ ವೈಷ್ಣವಾನಾಮ್॥

ಅಂದರೆ ಯಮನ ಸೇವಕ ಕೈನಲ್ಲಿ ಪ್ರಾಶವನ್ನು ತೆಗೆದುಕೊಂಡು ಹೋಗುವಾಗ, ವೈಷ್ಣವರಾಗಿದ್ದಲ್ಲಿ ಅವರ ಬಳಿ

ಹೋಗಬೇಡವೆಂದು ಹೇಳುತ್ತಾನೆ. ನಾನು ಅವರಿಗೆ ಪ್ರಭುವಲ್ಲ, ಒಡೆಯನಲ್ಲ. ವೈಷ್ಣವೇತರರಿಗೆ ಮಾತ್ರ ನಾನು ಪ್ರಭು ಎನ್ನುತ್ತಾನಂತೆ.

ಇಂತಹ ಶ್ರೀವೈಷ್ಣವರು ತಮ್ಮ ಜನ್ಮಾಂತ್ಯದಲ್ಲಿಯೇ ಪರಮ ಪದವನ್ನು ಹೊಂದುವರು. ಒಂದು ವೇಳೆ ಚಕ್ರಾಂಕಿತರಾಗಿ ಜ್ಞಾನ ಮತ್ತು ಅನುಷ್ಠಾನ ಶೂನ್ಯರಾಗಿದ್ದರೂ ಸಹ ಈಗಿನ ಜನ್ಮದಿಂದ ಮತ್ತೂ ಉತ್ಕೃಷ್ಟ ಜನ್ಮವನ್ನು ಹೊಂದುತ್ತಾರೆ. ಮುಂದೆ ಬರಬರುತ್ತಾ ಅವರು ಜ್ಞಾನ ಮತ್ತು ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು ಬೇರೊಂದು ಜನ್ಮದಲ್ಲಿ ಖಂಡಿತ ಮೋಕ್ಷಕ್ಕೆ ಅಧಿಕಾರಿ (ಅರ್ಹರು)ಗಳಾಗುತ್ತಾರೆ. ಯಾವ ಸ್ಥಿತಿಯಲ್ಲಿ ಈಗಿನ ಜನ್ಮಕ್ಕಿಂತಲೂ ನೀಚ ಜನ್ಮ ಇಲ್ಲವೇ ನೀಚಸ್ಥಿತಿಯನ್ನು ಎಂದಿಗೂ ಹೊಂದಲಾರರು.

ಆದ್ದರಿಂದ ವೈದಿಕ ಮಾರ್ಗದಲ್ಲಿ ನಡೆಯುವ ದ್ವೈತ ಅದ್ವೈತ ಮತ್ತು ವಿಶಿಷ್ಟಾದ್ವೈತ ಮೂರೂ ಸಂಪ್ರದಾಯಗಳ ಜನರಲ್ಲಿ ವೈದಿಕ ಶಾಖೆಯ ದ್ವೈತ ಮತ್ತು ವಿಶಿಷ್ಟಾದ್ವೈತದವರೆಲ್ಲರೂ ಶ್ರೀಸುದರ್ಶನ ಮತ್ತು ಪಾಂಚಜನ್ಯದಿಂದ ಚಕ್ರಾಂಕಿತರಾಗುತ್ತಾರೆ. ಅದ್ವೈತಿಗಳಲ್ಲಿಯೂ ಸಹ ಶ್ರೀ ಸತ್ಯ ಕೂಟತ್ತಾರ್ ಮತ್ತು ಪಾಂಚರಾತ್ರ ದೀಕ್ಷಿತ ಬ್ರಾಹ್ಮಣರೂ ಸಹ ಅಂದರೆ ಅದ್ವೈತಿಗಳು ತಪ್ತ ಚಕ್ರಾಂಕಿತರೇ, ಉಪನಯನ ಸಂಸ್ಕಾರದ ನಂತರ ಹೇಗೆ ದ್ವಿಜತ್ವ ಸಿದ್ಧಿಸುತ್ತದೋ ಅದರಂತೆಯೇ ತಪ್ತ ಚಕ್ರಾಂಕಿತ ಮುಂತಾದ ದು ಸಂಸ್ಕಾರಗಳಿಂದ ಶ್ರೀ ವೈಷ್ಣವತ್ವ ಪ್ರಾಪ್ತವಾಗುತ್ತದೆ. ಇದು ಶರೀರ ಮತ್ತು ಆತ್ಮಗಳೆರಡಕ್ಕೂ ಪಾವಿತ್ರ್ಯ ಮತ್ತು ಶುದ್ಧತೆಯನ್ನು ನೀಡುತ್ತದೆ. ಪ್ರಣವದೊಂದಿಗೆ ವೈದಿಕ ನಾರಾಯಣ ಅಷ್ಟಾಕ್ಷರೀ ಮಹಾಮಂತ್ರೋಪದೇಶ ಅರ್ಹತೆಯನ್ನುಂಟು ಮಾಡುತ್ತದೆ. ಅಲ್ಲದೆ ಈ ಸಂಸ್ಕಾರ ಜಗತ್ತಿನ ಎಲ್ಲ ರೀತಿಯ ಪಾಪ ಮತ್ತು ಎಲ್ಲ ರೀತಿಯ ಕರ್ಮ ಬಂಧನಗಳಿಂದ ಬಿಡುಗಡೆ ಹೊಂದಲು ಪ್ರಾಯಶ್ಚಿತ್ತ ರೂಪವಾಗಿ ಬದಲಾವಣೆ ತಂದು ಎಲ್ಲರನ್ನೂ ಪವಿತ್ರಗೊಳಿಸುತ್ತದೆ.

ಹಾಗಾಗಿ-ಮುಮುವೇ ಅಲ್ಲ ಮುಮುಕ್ಷುವೂ ಸಹ ಲೌಕಿಕ ಪುರುಷಾರ್ಥ ಆಕಾಂಕ್ಷಿಯಷ್ಟೇ ಅಲ್ಲ, ಅಲೌಕಿಕ ಶ್ರೇಯಃ ಕಾಮಿಯೂ ಸಹ, ಸ್ತ್ರೀಯರಷ್ಟೇ ಅಲ್ಲ. ಪುರುಷರೂ ಸಹ, ಬ್ರಾಹ್ಮಣರಷ್ಟೇ ಅಲ್ಲ, ಅಬ್ರಾಹ್ಮಣರು ಸಹ, ಸನ್ಯಾಸಿಯಷ್ಟೇ ಅಲ್ಲ,ಎಲ್ಲ ಆಶ್ರಮವಾಸಿಗಳೂ ಸಹ ಎಲ್ಲರೂ ತಪ್ತ ಚಕ್ರಾಂಕಿತರಾಗಬಹುದು. ಹಾಗೆ ಆಗಲೇ ಬೇಕು. ಅದೇ ಸುಖ ಶಾಂತಿ ಮತ್ತು ಆನಂದಕ್ಕೆ ಏಕಮಾತ್ರ ಕಾರಣವಾಗಿದೆ.

ಲಕ್ಷ್ಮಣತ್ವಾದಾತ್ಮಭರ್ತು:ಪ್ರಕೃತಿ
ಪರಿಣತಿ ಗ್ರಂಥಿದಾಹಾತ್ಮಕತ್ವಾತ್ ।
ಕರ್ಮಾಂಗತ್ವಾದ್ಧಿತತ್ವಾತ್ತನು
ತನುಕ್ಷಯಿನೋಸ್ಸಂಸ್ಕೃತಿ ತ್ವಾತ್ತ್ರಯತ್ವಾತ್।
ಹೇತುತ್ವಾತ್ಸದ್ಧೃಹೀತೇರನಿತರ
ವಿಷಯಾದ್ ದ್ರವಣಾತ್ಕಿಂಕರಾದೇಃ
ಧಾರ್ಯ ಚಕ್ರಾದಿಚಿಹ್ನಂ
ಕೃತಿಭಿರಕೃತಿಭಿಶ್ರೇಯಸೇ ಮುಕ್ತಯೇ ಚ ॥

ಈ ರೀತಿ ಹಿರಿಯರ ಮೂಲಕ ತಪ್ತ ಚಕ್ರಾಂಕನದ ಅಮೂಲ್ಯ ಲಾಭವನ್ನು ತಿಳಿಸಿರುತ್ತಾರೆ.

ಈ ಚಕ್ರಾಂಕನಕ್ಕೆ ವಿರುದ್ಧವಾದ ಕೆಲವು ಮಾತುಗಳು ಸಹ ಇವೆ. ಅದಕ್ಕೆ ಮುಖ್ಯ ಕಾರಣ-ತಮೋಗುಣದಿಂದ ಕೂಡಿದ (ಅಭಿಭೂತ) ರಾಕ್ಷಸರನ್ನು ಮೋಹಕ್ಕೊಳಪಡಿಸಲು ಶ್ರೀಮನ್ನಾರಾಯಣನ ಆಜ್ಞೆಯಿಂದ ರುದ್ರದೇವನು ಕೆಲವು ಋಷಿಗಳಲ್ಲಿ ಪ್ರವಿಷ್ಟನಾಗಿ ಅವರ ಮೂಲಕ ತಮೋಗುಣ ಪ್ರಧಾನ ಮೋಹಶಾಸ್ತ್ರಗಳನ್ನು ಹುಟ್ಟುಹಾಕಿದ ಗೌತಮ ಮಹರ್ಷಿಗಳ ಶಾಪದಿಂದ ಪ್ರಭಾವಿತರಾಗಿ ಕೆಲವು ಋಷಿಗಳು ಹಲವು ಮೋಹಶಾಸ್ತ್ರಗಳನ್ನು ರಚಿಸಿದ್ದಾರೆ. ಕೇವಲ ಅಂತಹ ಮೋಹಶಾಸ್ತ್ರಗಳಲ್ಲಿ ಚಕ್ರಾಂಕನದ ವಿರುದ್ಧ (ವಿರೋಧ) ವಿಷಯಗಳಿವೆ. ಆದರೆ ಅವು ಸಜ್ಜನಾನುಮತವೆಂದಾಗಲೀ ಇಲ್ಲವೇ ಶಿಷ್ಟ ಸಮ್ಮತವೆಂದಾಗಲೀ ಅಲ್ಲ ಸಾತ್ವಿಕ ಜನಾದರಣೀಯವೂ ಅಲ್ಲ. ಅವು ಸಾತ್ವಿಕ ಮತ್ತು ಶಿಷ್ಟಾನಾನುಮತವಾದ ಎಲ್ಲ ಧರ್ಮಶಾಸ್ತ್ರಗಳ ವಿರೋಧಿಗಳ ಶ್ರೀ ರುದ್ರದೇವನೇ ಮೋಹಶಾಸ್ತ್ರಗಳ ನಿರ್ಮಾತೃ ಎನ್ನುವುದಕ್ಕೆ ಪ್ರಮಾಣವಿದೆ :

ತ್ವಂ ಚ ರುದ್ರ ಮಹಾಬಾಹೋ
ಮೋಹಶಾಸ್ತ್ರಾಣಿ ಕಾರಯ।
ಇತ್ಯಾದಿ

**ಆದಿತ್ಯಪುರಾಣದಲ್ಲಿನ ಪ್ರಮಾಣ :**

ತತಸ್ಥಾಪಹತಾನ್ ಸರ್ವಾನ್
ಋಷೀನ್ ಪರಮಕೋಪನ
ಗೌತಮಸ್ತ್ವಪತಾಂ ಶ್ರೇಷ್ಠ ಸಾಮಗಾನಾಂ ವರಸ್ತಥಾ

ತಾಪಸೋತ್ತಮರಾದ ಮತ್ತು ಸಾಮಗಾನ ಮಾಡುವವರಲ್ಲಿ ಶ್ರೇಷ್ಠರಾದ ಗೌತಮ ಋಷಿಗಳು ಶಾಪದಿಂದ ಬಾಧಿತ ಋಷಿಗಳೊಂದಿಗೆ ಅತಿ (ಹೆಚ್ಚು) ಕೋಪಗೊಂಡು ಹೀಗೆ ಹೇಳಿದರು.

ನಿರ್ದೋಷಾಯ ಯಥಾ ಮಹ್ಯಮ್
ಮಾಯಾಮ್‌ಗೋರೂಪಧಾರಿಣೀಮ್
ಕೃತವಂತಸ್ತಥಾಸರ್ವೇ ತ್ರಯೀಂ ತ್ಯಜಥ ಪಾಪಿನಃ।

ನೀವು ನಿರ್ದೋಷಿಯಾದ ನನ್ನನ್ನು ಗೋರೂಪದಲ್ಲಿ ಮಾಯೆಯನ್ನು ರಚಿಸಿ ಮೋಸಮಾಡಿದಿರಿ. ಹಾಗಾಗಿ ನೀವೆಲ್ಲರೂ ವೇದಶೂನ್ಯರಾಗಿ ಮತ್ತು ಪಾಪಿಗಳಾಗಿ,

ತ್ರಿಪುಂಡ್ರಧಾರಿಣೋ ಭೂತ್ವಾ ಭಸ್ಮೋದ್ಧೂಲನತತ್ಪರಃ
ಜಟಾಭಾರ ಪರಿಕ್ರಾಂತಾಃ ಮಿಥ್ಯಾಜ್ಞಾನಪ್ರಲಾಪಿನಃ

ಹಣೆಯ ಮೇಲೆ ಮೂರು ನೇರವಾದ (ತಿರ್ಯಕ್) ಪುಂಡ್ರಗಳನ್ನು ಧರಿಸಿ ಇಡೀ ದೇಹವನ್ನು ಭಸ್ಮದಿಂದ ಲೇಪಿಸಿಕೊಂಡು ಮತ್ತು ಜಟಾಧಾರಿಗಳಾಗಿ ಮಿಥ್ಯಾಜ್ಞಾನ ಹಾಗೂ ಸುಳ್ಳು ಹೇಳುವಂತವರಾಗಿ.

ಭವಿಷ್ಯಥ ಕಲೌ ಸರ್ವೇ ಮಿಥ್ಯಾಲಿಂಗೋಪಜೀವಿನ-
ಯೋಚಾನ್ಯೇ ಶಾಪ ನಿರ್ದಗ್ಧಾಃ ಗೌತಮಸ್ಯ ಮಹಾತ್ಮಾನಃ ॥

ಗೌತಮರು ಮತ್ತೂ ಶಾಪಕೊಟ್ಟರು ಕಲಿಯುಗದಲ್ಲಿ ನೀವೆಲ್ಲರೂ ಮಿಥ್ಯೆ ಚಿನ್ಹೆಯನ್ನು ಧರಿಸಿ ಜೀವನವನ್ನು ಕಳೆಯಿರಿ.

ಸರ್ವೇ ತೇ ಪ್ರಚರಿಷ್ಯಂತಿ ಬ್ರಾಹ್ಮಣಾದ್ಯಾ - ಸುಜಾತಿಷು
ನಿಂದಂತಿ ಚ ಹೃಷೀಕೇಶಂ ಬ್ರಾಹ್ಮಣಾಃ ಬ್ರಹ್ಮಘಾತಿನಃ

ಗೌತಮರಿಂದ ಶಾಪಕ್ಕೊಳಗಾದ ಮಹಾತ್ಮರೆಲ್ಲರೂ ಬ್ರಾಹ್ಮಣಾದಿ ಉಚ್ಚ ವರ್ಣಗಳಲ್ಲಿ ಹುಟ್ಟುತ್ತಾರೆ. ಅಲ್ಲದೆ ಪರಬ್ರಹ್ಮನ ಉಪಕಾರ ಮಾಡುವವರಾಗಿ ಶ್ರೀ ಮಹಾವಿಷ್ಣುವನ್ನು ನಿಂದಿಸುತ್ತಾರೆ.

ವೇದಬಾಹ್ಯವ್ರತಾಚಾರಾಃ
ದುರಾತ್ಮಾನೋ ದುರಾಗಮಾಃ
ಮೋಹಯಾಂತ ಜನಾನ್
ಸರ್ವಾನ್ ದರ್ಶಯಿತ್ವಫಲಾನಿ ಚ ॥

ಇವೆಲ್ಲವನ್ನು ವೇದಗಳಲ್ಲಿ ಹೇಳಿಲ್ಲ. ಆ ವ್ರತ ಆಚಾರಗಳನ್ನು ವ್ಯವಹಾರದಲ್ಲಿ ತರುತ್ತೇವೆ. ದುರ್ಜನರು ಮತ್ತು ಕುಮಾರ್ಗದಲ್ಲಿ ನಡೆಯುವವರಾಗಿ ಜಗತ್ತಿನ ಜನಗಳನ್ನು ತಾತ್ಕಾಲಿಕ ಕಾಮ್ಯ ಫಲಗಳಲ್ಲಿ ಕೆಡವಿ ಮೋಸಗೊಳಿಸುತ್ತಾರೆ.

ವಿರೋಧಿ ವಚನಗಳಿಂದ ನಮಗೆ ತಿಳಿಯುವುದೇನೆಂದರೆ, ಭಕ್ತಿಯಿಂದ ಶಾಸ್ತ್ರವಿಹಿತ ಕಾರ್ಯಾನುಸಾರ ಆಚಾರ್ಯ ಶಿಷ್ಯರುಗಳ ಕ್ರಮದಿಂದಲೇ ಮನುಷ್ಯನಿಗೆ ತಪ್ತ ಚಕ್ರಾಂಕಿತವಾಗಬೇಕು. ಪೌಂಡ್ರಕ - ವಾಸುದೇವನಂತೆ ಭಗವದ್ವಿರೋಧದಲ್ಲಿ ಇಲ್ಲವೇ ಮೋಸ ಮಾಡುವ ದೃಷ್ಟಿಯಿಂದ ಅಥವಾ ಶಾಸ್ತ್ರಕ್ಕೆ ವಿರುದ್ಧವಾಗಿ ಕಬ್ಬಿಣ ಯಾ ಮಣ್ಣಿನಿಂದ ತಯಾರಿಸಿದ ನಿಷಿದ್ಧ ವಸ್ತುಗಳಿಂದ ಶಂಖ-ಚಕ್ರಗಳ ಚಕ್ರಾಂಕನ ಆಗಬಾರದು ಕ್ರಮರಹಿತವಾಗಿ ಪ್ರಾಕೃತ ಫಲಗಳ ಮೋಹಕ್ಕೆ ಬಿದ್ದು ನಿತ್ಯವು ಬಳಸುವ ಅಗ್ನಿಯಲ್ಲಿ ಶಾಸ್ತ್ರ ವಿಹಿತ ಮಂತ್ರ ಮತ್ತು ಕರ್ಮಗಳನ್ನು ಬಿಟ್ಟು ತಪ್ತಗೊಳಿಸಿದ ವಿಷ್ಣು ಚಿನ್ಹೆಗಳಿಂದ ಚಿನ್ಹೆಯ ಧಾರಣೆ ಮಾಡಿಕೊಳ್ಳಬಾರದು ಹಾಗಾಗಿ ತಪ್ತ ಚಕ್ರಾಂಕನದ ನಿಷೇಧ ಎಲ್ಲಿಯೂ ಇಲ್ಲ.

ಇದಕ್ಕೆ ಶ್ರುತಿಪ್ರಮಾಣ ಉಂಟು.

**ಶುಕ್ಲಯಜುಷಿ ಶತಪಥ ಬ್ರಾಹ್ಮಣದಲ್ಲಿ :**

ತಪ್ತಚಕ್ರಂ ದ್ವಿಭುಜೇ ಧಾರ್ಯ
ಮಿಥ್ಯೂರ್ಧ್ವ ಪುಂಡ್ರ ಮಾಲಿಕೇತ್,
ತಸ್ಮಾತ್ ದ್ವಿರೇಖಂ ಭವತಿ ।

ಗೃಹ್ಯಸೂತ್ರದಲ್ಲಿ ಯಾವ ಕ್ರಮ ಮತ್ತು ವಿಧಿ ತಿಳಿಸಲ್ಪಟ್ಟಿದೆಯೋ ಆ ರೀತಿಯಲ್ಲಿ ಚಕ್ರವನ್ನು ಬಿಸಿ ಮಾಡಿ ಎರಡೂ ಭುಜಗಳ ಮೇಲೆ ಧಾರಣೆ ಮಾಡಬೇಕು ( ಒತ್ತಬೇಕು) ಎರಡು ಗೆರೆಗಳ ರೂಪದಲ್ಲಿ ಊರ್ಧ್ವ ಪುಂಡ್ರವನ್ನು ಧರಿಸುವುದು ಅವಶ್ಯಕ.

ಇನ್ನು ವೇದತ್ರಯದಲ್ಲಿ

ಪವಿತ್ರಂತೇವಿತತಂ ಬ್ರಹ್ಮಣಸ್ಪತೇ
ಪ್ರಭುರ್ಗಾತ್ರಾಣಿ ಪಯೋರ್ಷಿ ವಿಶ್ವತಾ
ಅತಪ್ತತನೂರ್ನ್ ತದಾಮೋ
ಅಶ್ನುತೇ ಶೃತಾಸ ಇದ್ವಹಂತಸ್ತತ್ಸಮಾಶತ

ಹೇ ಭಗವಾನ್, ತಾವು ಚತುರ್ಮುಖ ಬ್ರಹ್ಮನಿಗೆ ತಮ್ಮೆಲ್ಲ ಅಧಿಕಾರವನ್ನು! ಒಪ್ಪಿಸಿದಿರಿ. ನಿಮ್ಮ ಸುದರ್ಶನ ಎಲ್ಲದರಲ್ಲಿ ಬೆಳೆದಿದೆ, ಫಲಿತವಾಗಿದೆ. ಯಾವ ಜೀವಿ ನಿಮ್ಮ ಸುದರ್ಶನ ಚಿನ್ಹೆ ಗಳಿಂದ ತಪ್ತ ಶರೀರ ಹೊಂದುವುದಿಲ್ಲ ಅವನೆಲ್ಲ ಪಾಪ ಶಿಥಿಲವಾಗುವುದಿಲ್ಲ. ಅವನು ಬ್ರಹ್ಮವನ್ನು ಹೊಂದಲಾರ. ಯಾರು ಚಕ್ರವನ್ನು ಧರಿಸುತ್ತಾರೋ ಅವರೇ ಜೀರ್ಣ ಪಾಪರಾಗಿ ಆ ಬ್ರಹ್ಮವನ್ನು ಹೊಂದುತ್ತಾರೆ.

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು ದೇವರಾ ಸೇವಕನು**

**ನೆನೆವರವನನು ಜನರು ಅವನೆಂದು ನೋಡದರು**








# ಸುಂಕಾತೊಣ್ಣೂರು ಚನ್ನಕೇಶವ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ, ತಾಲ್ಲೂಕು ಕೇಂದ್ರದಿಂದ 12 ಕಿ.ಮೀ. ದೂರದಲ್ಲಿರುವ ಗ್ರಾಮ, ಪ್ರಸಿದ್ಧ ವೈಷ್ಣವ ಕ್ಷೇತ್ರ ಕೆರೆತೊಣ್ಣೂರಿಗೆ 4 ಕಿ.ಮೀ. ದೂರದಲ್ಲಿದೆ.

ಹೊಯ್ಸಳರ ಶಾಸನದಲ್ಲಿ ತೊಂಡನೂರು ಎಂದು, ಕ್ರಿ.ಶ. 1585 ರ ನರಿಹಳ್ಳಿ ಶಾಸನದಲ್ಲಿ ಸುಂಕತೊಂಡನೂರು ಎಂದು ಉಲ್ಲೇಖಿತಗೊಂಡಿರುವ ಸುಂಕಾತೊಣ್ಣೂರಿನಲ್ಲಿ ಹೊಯ್ಸಳದ ದೊರೆ ಒಂದನೆಯ ನರಸಿಂಹನ ಕಾಲದ್ದಾದ ಚನ್ನಕೇಶವ ದೇವಾಲಯವಿದೆ.

ಸುಂಕಾತೊಣ್ಣೂರು ಊರ ನಡುವೆ ಇರುವ ಕೇಶವ ದೇವಾಲಯವು ಹೊಯ್ಸಳರ ಕೊಡುಗೆ. ದೇವಾಲಯವು ಸಣ್ಣ ಮುಖಮಂಟಪ, ನವರಂಗ, ಅಂತರಾಳ ಹಾಗೂ ಗರ್ಭಗುಡಿಗಳನ್ನು ಹೊಂದಿದೆ. ದೇವಾಲಯಕ್ಕೆ ಇತ್ತೀಚೆಗೆ ಜೀರ್ಣೋದ್ಧಾರ ಸಮಯದಲ್ಲಿ ನಿರ್ಮಿತವಾದ ಶಿಖರವಿದೆ. ದೇವಾಲಯದ ಹೊರ ಭಿತ್ತಿಯು ವೇಸರ, ದ್ರಾವಿಡ, ಭೂಮಿಜ ಶೈಲಿಯ ಮಾದರಿಯ ಶಿಖರಗಳ ರಚನೆಗಳಿಂದ ಸುತ್ತುವರೆದಿದೆ. ದೇವಾಲಯದ ಅಧಿಷ್ಠಾನದಲ್ಲಿ ದಂತಪಂಕ್ತಿಗಳ ವಿನ್ಯಾಸದ ರಚನೆಯಿದೆ. ನವರಂಗದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಪ್ರಧಾನ ಸ್ತಂಭಗಳಿದ್ದರೆ ಗೋಡೆಗೆ ಹೊಂದಿಕೊಂಡಂತೆ ಕೆಲವು ಸ್ತಂಭಗಳಿವೆ. ಅಂತರಾಳದ ಇಕ್ಕೆಲಗಳಲ್ಲಿ ವಿಜಯನಗರೋತ್ತರ ಕಾಲಕ್ಕೆ ಸೇರುವ ದ್ವಾರಪಾಲಕರ ಮೂರ್ತಿಗಳಿವೆ. ನಮನ ಭಂಗಿಯಲ್ಲಿರುವ ಗರುಡ ಪೀಠದ ಮೇಲೆ ಶ್ರೀಭೂನೀಳಾ ಸಹಿತವಾದ ಚಕ್ರ,ಶಂಖ,ಗದಾ, ಪದ್ಮಧಾರಿಯಾದ ಜನಾರ್ದನನ ಅಂದದ ಮೂರ್ತಿಯಿದೆ. ಸ್ಥಳೀಯವಾಗಿ ಮೂರ್ತಿಯನ್ನು ಚನ್ನಕೇಶವ ಎಂದು ಕರೆಯುವರು ಗರುಡ ಪೀಠದ ವಿನ್ಯಾಸವು ಬಹಳ ಆಕರ್ಷಕವಾಗಿ ಮೂಡಿ ಬಂದಿದೆ.



ನವರಂಗದ ಮಧ್ಯದ ಭುವನೇಶ್ವರಿಯು ವೃತ್ತ, ಚೌಕ, ಅಷ್ಟಕೋನ, ಚೌಕಾಕೃತಿಗಳ ವಿನ್ಯಾಸದಿಂದ ಸೊಗಸಾಗಿ ಮೂಡಿ ಬಂದಿದೆ. ನವರಂಗದಲ್ಲಿ ಇತ್ತೀಚೆಗೆ ನಿರ್ಮಿಸಿರುವ ಶ್ರೀರಾಮಾನುಜರ ಪುತ್ಥಳಿಯದೆ. ಶಿಥಿಲ ಹಂತವನ್ನು ತಲುಪಿದ್ದ ದೇವಾಲಯವನ್ನು ಸ್ಥಳೀಯರ ಸಹಕಾರದಿಂದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ ಮೂಲ ಸ್ವರೂಪಕ್ಕೆ ಚ್ಯುತಿ ಬರದಂತೆ ಜೀರ್ಣೋದ್ಧಾರವನ್ನು ಮಾಡಿ ದಿನಾಂಕ : 10.8.2022 ರಂದು ಲೋಕಾರ್ಪಣೆಗೊಳಿಸಿದ್ದಾರೆ.

ಊರಿನಲ್ಲಿ ಗ್ರಾಮದೇವತೆ ರಾಕ್ಷಸಮ್ಮನ ಗುಡಿಯಿದ್ದು, ಕರಿಭಂಟನ ಕಾಳಗದ ಜಾನಪದ ಕತೆಗೆ ಬೆಸೆದುಕೊಂಡಿದೆ. ಈ ಗ್ರಾಮದಲ್ಲಿ ಹೊಯ್ಸಳರ ಕಾಲದ ಅನೇಕ ವೀರಗಲ್ಲುಗಳು ದೊರೆತಿದ್ದು, ಪ್ರಸ್ತುತ ಗ್ರಾಮದಲ್ಲಿ ನಡೆದಿರಬಹುದಾದ ಕಾಳಗಕ್ಕೆ ಸಾಕ್ಷಿಯಾಗಿ ಇವೆ.

**ಹೀಗೆ ಬನ್ನಿ :** ಪಾಂಡವಪುರ ಮೇಲುಕೋಟೆ ರಸ್ತೆಯಲ್ಲಿ ಪಾಂಡವಪುರದಿಂದ 9 ಕಿ.ಮೀ. ಬಂದು ಸುಂಕಾತೊಣ್ಣೂರಿನ ತಿರುವಿನಲ್ಲಿ ತಿರುಗಿ, ಅಂದವಾದ ಕೇಶವ ದೇವಾಲಯವಿರುವ ಸುಂಕಾತೊಣ್ಣೂರನ್ನು ಸೇರಬಹುದು.

# ಲೋಕವೆಲ್ಲಾ ನಾದಮಯ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621



ಸಂಗೀತ ಹೃನ್ಮನಗಳನ್ನು ತಣಿಸಿ ಒತ್ತಡಗಳನ್ನು ನಿವಾರಿಸುವ ದಿವ್ಯ ಸಂಜೀವಿನಿ. ವ್ಯಕ್ತಿತ್ವ ವಿಕಸನದ, ಸಾಧನಾ ಪರ್ವದ ಅಂಗಳದಲ್ಲಿ ಅರಳುವ ಕುಸುಮ. ಸಂಗೀತ ಹೃದಯದ ಭಾಷೆ. ಸ್ವರ ಮಿಳಿತಗಳು ಹೃದಯದ ಬಡಿತಕ್ಕೆ ಸ್ಪಂದಿಸುತ್ತವೆ. ಹೃದಯ ಆಧ್ಯಾತ್ಮ ಸಾಧಕನ ತಪೋಭೂಮಿಯಾಗಿದೆ. ಹೃದಯದ ಬಡಿತದಿಂದ ಮೊದಲ್ಗೊಂಡು ಬೀಸುವ ತಂಗಾಳಿಯವರೆಗೆ ಪ್ರಕೃತಿಯಲ್ಲಿ ಕಾಣ ಸಿಗುವ ಸಕಲ ಚರಾಚರ ವಸ್ತುಗಳ ಮಿಡಿತದಲ್ಲೂ ಸ್ವರಗಳೂ ಝೇಂಕಾರವಿದೆ.

ಸಂಗೀತವೆಂದರೆ ನಾದ, ಸ್ವರ ಮಾಧುರ್ಯದ ಸಂಗಮ. ಪ್ರಪಂಚಾದ್ಯಂತ ಸಭಾಂಗಣದಿಂದ ಹಿಡಿದು ಬೀದಿ ಬೀದಿಗಳಲ್ಲಿ ಅಲ್ಲಲ್ಲಿ ಪ್ರಚಲಿತವಿರುವ ಸಂಗೀತದ ಪ್ರಸ್ತುತಿ ಆಗಿ ಜನರಿಗೆ ಮುದ ನೀಡುವ ಈ ಪ್ರಯತ್ನ ಯಶಸ್ವಿಯಾಗಿದೆ.

ಮನುಷ್ಯನ ಜೀವನದಲ್ಲಿ ಸಂಗೀತವು ಅವಿಭಾಜ್ಯ ಅಂಗವಾಗಿರುವುದು ಸರ್ವವಿದಿತ. ಹುಟ್ಟಿನಿಂದ ಸಾವಿನವರೆಗೆ ಧಾರ್ಮಿಕ ಸಾಮಾಜಿಕವಾಗಿ ಸಂಗೀತ ಬಳಸಲ್ಪಡುತ್ತದೆ. ನವರಸಗಳ ಪ್ರತಿ ಸಾಧನಗೆ ಗಾಯನದಿಂದಲೇ ವಾದ್ಯ ಮುಖೇನವೇ ಸಂಗೀತ ಎಂಬುದು ಒಂದು ಮಾರ್ಗವಾಗಿರುವುದು ವಾಹಕವಾಗಿರುವುದು. ದೈಹಿಕ ಮಾನಸಿಕ ಆರೋಗ್ಯಕ್ಕೆ ಸಂಗೀತವೂ ಒಂದು ಚಿಕಿತ್ಸ ವಾಹಕವಾಗಿದೆಯೆಂದು ಇತ್ತೀಚಿನ ಸಂಶೋಧನೆಯಿಂದ ತಿಳಿದು ಬರುತ್ತದೆ.

## ಸಂಗೀತ ದೇವತೆಗೆ ಸಾಷ್ಟಾಂಗ ವಂದನೆ :-

ಸ್ವರ, ರಾಗ ಸಂಯೋಗ ಎನ್ನುವ ಹಾಡು ಸಂಗೀತಾಭ್ಯಾಸಿಗಳ ಗಮನಕ್ಕೆ ಬಂದಿರಬಹುದು. ಸಂಗೀತ ಶ್ರವಣಾನಂದವಷ್ಟೇ ಅಲ್ಲ, ವ್ಯಕ್ತಿ ಯೋರ್ವನನ್ನು ಆಧ್ಯಾತ್ಮ ದಾರಿಯತ್ತ, ವಿಕಸನದ ಹಾದಿಯತ್ತ ಕೊಂಡೊಯ್ಯುವ ಸಾಧನವೆಂದರೂ ಅತಿಶಯೋಕ್ತಿಯಲ್ಲ, ನಾದವೆಂದರೆ ಅನಂತ, ನಾದವಿಲ್ಲದ ಸ್ಥಳವಿಲ್ಲ. ಹಾಗಾಗಿ ನಾದವೇ ಬ್ರಹ್ಮ. ನಾದದ ಝೇಂಕಾರ ಪ್ರಕೃತಿಯ ಸಕಲ ಚರಾಚರ ವಸ್ತುಗಳಲ್ಲಿ, ಗೀತೆ,ಗಾಯನ, ಸಂಗೀತೋಪಕರಣ, ನೃತ್ಯಗಳಲ್ಲಿ ಕಾಣ ಸಿಗುತ್ತದೆ. ವೇದಗಳಲ್ಲಿ ಒಂದಾದ ಸಾಮವೇದವು ಸಂಗೀತದ ನಿನಾದವನ್ನೇ ಅನುಸರಿಸಿದೆ.

ನಮ್ಮ ಸುತ್ತಣ ಪರಿಸರವೂ ನಾದಮಯವಾಗಿದೆ. ನಮ್ಮ ದೇಹಕ್ಕೆ ನೀರೇ ಜೀವಾಧಾರ. ಮಂತ್ರೋಚ್ಚಾರಣೆಯ ಮೂಲಕ ಅದನ್ನು ಹೆಚ್ಚು ಚೈತನ್ಯಶೀಲರನ್ನಾಗಿಸಬಹುದು. ಸಂಗೀತದ ಸಕಾರಾತ್ಮಕ ಅನುಭವ ನಮ್ಮ ಮೇಲಾಗುತ್ತದೆ. ಸಂಗೀತದಿಂದ ಮನಸ್ಸು, ಪ್ರಜ್ಞೆ ಮತ್ತು ಸಂಸ್ಕಾರಗಳು ಶುದ್ಧವಾಗುತ್ತದ. ಅವೆಲ್ಲವೂ ಆತ್ಮನಿಗೆ ಸಂಬಂಧಿಸಿದುದಾಗಿದೆ. ದೈವದೊಂದಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ಪರಿಮಳಯುಕ್ತ ದ್ರವ್ಯದ ಸುಗಂಧ ಪ್ರಭಾವವಲಯದ ಮೇಲೆ ವಿಶೇಷ ಪರಿಣಾಮವನ್ನು ಉಂಟು ಮಾಡುತ್ತದೆ. ಮನಸ್ಸು, ಬುದ್ಧಿ ಮತ್ತು ವಿವೇಕವನ್ನು ಜಾಗೃತಗೊಳಿಸುತ್ತದೆ. ಹೀಗೆ ವಿವಿಧ ಸಂಗೀತೋಪಕರಣಗಳಿಂದ ಉಂಟಾಗುವ ಪ್ರಭಾವವು ಶರೀರದೊಳಗಿರುವ ಷಟ್ ಚಕ್ರಗಳ ಮೇಲೆ ಪ್ರಭಾವ ಬೀರುತ್ತದೆ. ಆ

ಕಾರಣ ದೇಹವು ಶುದ್ಧವಾಗುತ್ತದೆ. ಖಿನ್ನತೆಯಿಂದ ಬಳಲು ವವರಿಗೆ ಸಂಗೀತವೇ ಸಂಜೀವಿನಿಯಾಗುತ್ತದೆ.

## ನಾದಬ್ರಹ್ಮಸ್ವರೂಪ

ಸಂಗೀತಕ್ಕೆ ನಾದ-ಲಯಗಳು ಅಡಿಪಾಯ ನಾದ (ಪ್ರಾಣವಾಯು), (ಪ್ರಾಣಾಗ್ನಿ) ಇವೆರಡರ ಸಂಯೋಗದಿಂದ ನಾದೋತ್ಪತ್ತಿ ಕ್ರಮವಾಗಿ ಇದು ನಾಭಿ,ಹೃದಯ,ಕಠ, ನಾಲಗೆ ಶಿರಸ್ಸಿನ ಮೂಲಕ ಪ್ರಕಟವಾಗುವುದೆಂಬುದನ್ನು ಸಂಗೀತ ಸಾಮ್ರಾಟ್ ಸಂತ ತ್ಯಾಗರಾಜರು ತಮ್ಮ ಜಗನ್ಮೋಹಿನಿ ರಾಗದ 'ಶೋಭಿಲ್ಲು ಸಪ್ತಸ್ವರ' ರಚನೆಯಲ್ಲಿ ತಿಳಿಸಿದ್ದಾರೆ.

'ತಾ' (ಶಂಕರ), 'ಳ' (ಪಾರ್ವತಿ) ಎಂಬುದು ಈ ಶಿವ ಶಿವೆಯರ ಹಸ್ತ ಘರ್ಷಣೆಯಿಂದ ಉಂಟಾಯಿತೆಂದು ಶಾಸ್ತ್ರ ಹೇಳುತ್ತದೆ. ಪ್ರಪಂಚದ ಉಗಮವೇ ಓಂಕಾರದಿಂದ ಉಂಟಾಗಿ ಪ್ರಣವ ಎನ್ನುವ ಇದು ಭಗವತ್ ಸ್ವರೂಪವೆನ್ನು ವುದು ಬಲ್ಲವರ ಮಾತು. ಹಾಗಾಗಿ ಈ ನಾದವನ್ನು 'ಬ್ರಹ್ಮ' ಸ್ವರೂಪ ಎನ್ನುತ್ತಾರೆ, ನಾದ ಬ್ರಹ್ಮವೆನ್ನುತ್ತಾರೆ. ನಾದದಲ್ಲಿ ಅಹುತ-ಅನಾಹತ ಎಂಬ ಎರಡು ಬಗೆಗಳು. ತಪಸ್ವಿಗಳಿಗೆ ಏಕಚಿತ್ತತೆಯಿಂದ ಗೋಚರಿಸುವುದೇ ಅನಾಹತನಾದ. ಇದು ಸಾಮಾನ್ಯರಿಗೆ ಶ್ರವಣ ಯೋಗ್ಯವಾದ ಅಹುತನಾದ ವೆನಿಸುತ್ತದೆ. ಇನ್ನು ತ್ಯಾಗರಾಜರು ತಮ್ಮ ಕಲ್ಯಾಣನ ಸಂತ ರಾಗದ ನಾದ ಲೋಲುಪೈ ರಚನೆಯಲ್ಲಿ ನಾದಾನುಸಂಧಾನ ದಿಂದ ಮೋಕ್ಷ ಸಾಧ್ಯ-ಬ್ರಹ್ಮನಂದನ ಅನುಭವ ಸಾಧ್ಯವೆನ್ನು ತ್ತಾರೆ. ಹಿಂದೋಳ ರಾಗದ ಸಾಮಜವರ ಗಮನ ರಚನೆಯಲ್ಲಿ ಸಂಗೀತವು ಸಾಮವೇದ ಜೀತವಾದದ್ದು ಎನ್ನುತ್ತಾರೆ. 'ನಾದ' ದ ಅಂಗಾಂಗಗಳಾದ ಸಪ್ತಸ್ವರಗಳು ಷಡ್ಜ ಋಷಭ-ಗಾಂಧಾರ ಮಧ್ಯಮ-ಸಂಚಯ ದೈವತ ನಿಷಾದಗಳು ಪರಮೇಶ್ವರನ ಸದ್ಯೋಜಾತಾದಿ ಪಂಚ ಮುಖಗಳಿಂದ ಹೊರ ಬಂದವು ಎಂದು ಚಿತ್ತರಂಜಿನಿರಾಗದ ನಾದತನುಮನಿಶಂ ರಚನೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ. ವಿಶ್ವ ವ್ಯಾಪಿಯಾದ ಈ ಸಂಗೀತ ಕಲೆಯ ಕಲಿಕೆ-ಸಾಧನೆ-ಅನುಭವದಿಂದಾದ ಪ್ರಸ್ತುತಿಯು ವ್ಯಕ್ತಿಗತವಾದ ಕಲೆ. ಸಂಗೀತಗಾರನ ಬೆಳವಣಿಗೆ/ಸೊರಗು ವಿಕೆಯು ಅವನ ಅಭಿವ್ಯಕ್ತಿಯಲ್ಲಿ ಗೋಚರಿಸುತ್ತದೆ. ಇದನ್ನು ಗುರುತಿಸುವ ಶಕ್ತಿ ಕೇಳುಗನಿಗೂ ಇದ್ದಾಗ ಆಸ್ವಾದನೆಗೆ ಅರ್ಥ ಬರುತ್ತದೆ. ಹಾಗಾಗಿ ಸಂಗೀತಗಾರರು ಸ್ವಸ್ಥ ಮನಸ್ಸು ದೇಹಾ ರೋಗ್ಯದಿಂದ ಪರಮಾತ್ಮನಲ್ಲಿ ನಂಬುಗೆಯಿಂದ ನಾದಾನು ಸಂಧಾನ ಮಾಡಿ ಸಂಗೀತ ಪ್ರಸ್ತುತಿ ಆದಾಗ ಮಾತ್ರ ಉತ್ತಮ ಮಟ್ಟದ ಸಪ್ತಗೀತ ಹೊರ ಹೊಮ್ಮಲು ಸಾಧ್ಯವಾಯಿತು. ಹಾಗೆಯೇ ಶ್ರೋತೃವು ತನ್ನ ದೈಹಿಕ ಮಾನಸಿಕ-ಸಂಗೀತ ಜ್ಞಾನಾರ್ಜನೆಯಿಂದ ಉತ್ತಮ ಸಂಗೀತದ ಆಸ್ವಾದನೆ ಸಾಧ್ಯ.

## ನಾದಯೋಗ

'ಬ್ರಹ್ಮ' ವಸ್ತುವನ್ನು ಅರಿಯಲು ಭಗವದ್ಗೀತೆಯಲ್ಲಿ ಹೇಳಿ ರುವ ಅನೇಕ ಮಾರ್ಗಗಳಲ್ಲಿ ನಾದಯೋಗವೂ ಒಂದು ಇದಕ್ಕೆ ಸದ್ಗುರುವಿನ ಅವಶ್ಯಕತೆ ಬಹು ಮುಖ್ಯ. ಸದ್ಗುರುವನ್ನು ಪಡೆಯಲು ಹೇಗೆ ಜನ್ಮಾಂತರಗಳಲ್ಲಿ ನಾವು ಆರ್ಜಿಸಿದ ಪುಣ್ಯ ಅವಶ್ಯಕ. ಹಾಗೆಯೇ ಗುರು ಉಪದೇಶವನ್ನು ಪಡೆಯುವುದು ಗ್ರಹಿಸುವುದು ಸಾಧ್ಯವಾಗುವಂತಹ ಶಿಕ್ಷಕ ಸಿಗುವುದು ಅಷ್ಟೇ ಕಷ್ಟ. ಹೀಗೆ ಭವ್ಯ ಪರಂಪರೆಯನ್ನು ಬೆಳೆಸುವ ಜವಾಬ್ದಾರಿ ಉತ್ತಮಗುರು- ಉತ್ತಮ ಶಿಷ್ಯರಿಗೆ ಸೇರಿದೆ. ಈ ವಿಶ್ವಸಂಗೀತ ದಿನ ಆಚರಣೆ ಸಾಂಕೇತಿಕ ಮಾತ್ರ ಆದರೆ ಸಂಗೀತ ಸಾಧನೆ -ಚಿಂತನೆ-ಪ್ರಸಾರ ಪ್ರಸ್ತುತಿ ಮುಂತಾದವುಗಳು ದಿನನಿತ್ಯವಾಗ ಬೇಕಾದವು. ಪ್ರತಿಕ್ಷಣದಲ್ಲೂ ನಮ್ಮ ರಕ್ತದ ಪ್ರತಿಕಣಗಳಲ್ಲಿ ಅಂತರ್ಯಾಮಿಯಾಗಿ ಹರಿಯುತ್ತಾ ಇದ್ದಲ್ಲಿ ಭಗವಂತನು ಗೋಚರಿಸಿಯಾನು.

## ಸಮರ್ಪಣಾ ಭಾವದ ಫಲಶ್ರುತಿ

ಹಿಂದಿಯಲ್ಲೊಂದು ಆಡುಮಾತಿದೆ. ಸ್ವರ ಹಿ ಈಶ್ವರ್ ಹೈ. ಸ್ಥೂಲವಾಗಿ ಹೇಳುವುದಾದರೆ ಸಂಗೀತವು ನಿಮ್ಮನ್ನು ದೇವರತ್ತ ಕೊಂಡೊಯ್ಯುತ್ತದೆ. ಅದನ್ನೇ ಸೂಕ್ಷ್ಮವಾಗಿ ಸ್ವಯಂ ಭೂಮಿನತ್ತ, ಅನಂತಾತ್ಮನತ್ತ ಕೊಂಡೊಯ್ಯುತ್ತದೆ ಎನ್ನ ಬಹುದು. ಎಲ್ಲವೂ ನಾನೇ, ನಾನೇ ಎಲ್ಲವೂ ಎನ್ನುವ ಬೆಳ ಕನ್ನು ತೋರುತ್ತದೆ. ಒಂದು ಸ್ವರವನ್ನು ಆಸಕ್ತಿದಾಯಕ ಸಂಗತಿ. ಚಿಕ್ಕವರಿದ್ದಾಗ ವರ್ಣಾಕ್ಷರ ಮಾಲಿಕೆಯನ್ನು ಕಲಿ ಯುವಾಗ ಸ್ವರಾಕ್ಷರಗಳನ್ನು, ವ್ಯಂಜನಾಕ್ಷರಗಳ ಪರಿಚಯ ವನ್ನು ಮಾಡಿಕೊಂಡಿದ್ದೆವು. ಸಪ್ತಸ್ವರಗಳ ನಡುವಿನ ಸಂಬಂಧವನ್ನು ಗ್ರಾಂಥಿಕವಾಗಿ ಅರ್ಥೈಸಿಕೊಂಡಿದ್ದೆವು. ಸ್ವರಗಳ ನಡುವಿನ ಅಂತರೇನು ಅನ್ನುವ ಪ್ರಶ್ನೆ ಆರಂಭದಲ್ಲಿ ರುತ್ತದೆ. ಅಭ್ಯಾಸ ಪ್ರೌಢವಾಗುತ್ತಾ ಹೋದಂತೆ ಸ್ವರಗಳ ನಡು ವಿನ ಅಂತರ ಕಡಿಮೆಯಾಗುತ್ತಾ ಹೋಗುತ್ತದೆ. ಅವುಗಳ ಶ್ರುತಿ ಅಥವಾ ಮೈಕ್ರೋಟೋನ್‌ಗಳ ನಡುವಿನ ಸಂಬಂಧ ಮೊದಲಿ ಗಿಂತಲೂ ಹೆಚ್ಚು ಅರ್ಥವಾಗುತ್ತಾ ಹೋಗುತ್ತದೆ. ರಾಗದ ಆಲಾ ಪನೆಯಲ್ಲಿ ಉಂಟಾಗುವ ಅನುಭೂತಿಯೇ ಸಮಾಧಿಸ್ಥಿತಿ.

ಒಬ್ಬ ಸಂಗೀತಗಾರನಿಗೆ ಅದುವೇ ಧ್ಯಾನ. ಅಂತಹದ್ದೊಂದು ಸ್ಥಿತಿಯಲ್ಲಿ ಎಲ್ಲಾ ಸ್ವರಗಳು ಒಂದಕ್ಕೊಂದು ಬೆರೆತುಕೊಳ್ಳುತ್ತಾ ಹೋಗುತ್ತದೆ. ಏಕೀಕೃತ ಭಾವದಲ್ಲಿ ಒಂದಾಗಿ ಹೊರಹೊಮ್ಮುತ್ತದೆ. ಅದುವೇ ಪ್ರೀತಿಯಾಗಿ, ಪ್ರೇಮವಾಗಿ, ಮೋಹಕ ರೂಪಕವಾಗಿ, ಮಾಧುರ್ಯವಾಗಿ, ಇನಿದನಿಯಾಗಿ, ಸ್ವರ ಮೇಳವಾಗಿ ಆನಂದಾನುಭೂತಿಯಾಗಿ ಅವಿರ್ಭವಿಸುತ್ತದೆ. ಅಂತಹದ್ದೊಂದು ಅನುಭೂತಿಯೊಳಗೆ ಈಶ್ವರನಿದ್ದಾನೆ.

### ವೇದಗಳಲ್ಲೂ ಸಂಗೀತವಿದೆ

ವೇದ, ಉಪನಿಷತ್ತಿನಲ್ಲಿರುವ ಮಂತ್ರಗಳಲ್ಲೂ ಸ್ವರ ಪ್ರಸ್ತಾರಗಳಿವೆ. ಮಂತ್ರಗಳನ್ನು ಉಚ್ಚರಿಸುವಾಗಲೂ, ಆರೋಹಣ, ಅವರೋಹಣ, ಹ್ರಸ್ವ, ದೀರ್ಘ ಸ್ವರಗಳತ್ತ ಗಮನ ಹರಿಸುತ್ತಾರೆ. ಹಾಗೆ ಕ್ರಮಪಾಠ ಮಾಡಿದಾಗ ಮಾತ್ರ ಮಂತ್ರಗಳ ಪ್ರಭಾವ ನಮ್ಮ ಮೇಲಾಗುತ್ತದೆ. ಇಲ್ಲವೆಂದಾದರೆ, ಅದು ಬಾಯಿ ನೋಯಿಸಿಕೊಳ್ಳುವ, ವೃಥಾ ಒದಗಿರುವ ಪಾಠವಾಗುತ್ತದೆ ಅಷ್ಟೆ.

### ಲೋಕವೆಲ್ಲಾ ನಾದಮಯ

ಜನವಾಣಿ ಬೇರು, ಕವಿವಾಣಿ ಹೂವು ಎನ್ನುವಂತೆ ಸಂಗೀತ ಜನಮನಗಳಲ್ಲಿ ಬೇರೂರಿದ ನಂತರ ದೇವವಾಣಿಯಾಯಿತು. ನಾದವೇ ವಿಶ್ವದ ಮೂಲ. ಮಹಾನಾದವೇ ವಿಶ್ವವಿಕಾಸ. 'ಗಚ್ಛಾನವಿದ್ಧಮೇವೇದಂ ಜಗತ್ಸರ್ವಂ ಚರಾಚರರ' ಎಂಬ ಆಗಮೋಕ್ತಿಯೇ ಇದೆ.

'ಶಬ್ದ ದಿನವಾವಿಂದ್ರಿಯ ರಸಮಂ ಶ್ರೋತ್ರದೊಳು ದ್ಭಾವಿಪುದು'ಎನ್ನುತ್ತಾನೆ. ವ್ಯಾಕರಣ ಪಂಡಿತ ಕೇಶಿರಾಜ. ಮಂಗಲಕರ ದೇವತೋಪಾಸನೆಯನ್ನು 'ನಾದಶಬ್ಧಮಯಿಂ ಘಂಟಾಂ ಸರ್ವ ವಿಘ್ನೋಪಶಾಂತಯೇ' ಎಂದು ಆರಂಭಿಸುತ್ತಾರೆ. ನಮ್ಮ ಜೀವ ಜನ್ಮವೂ ನಾದಮೂಲಕ ಮೊದಲಾಗುತ್ತದೆ. ಸಕಲ ವಿಧ ಸಂಗೀತಕ್ಕೂ ನಾದವೇ ಮೂಲ. ಈ ನಾದದ ಲಹರಿ ವಿವಿಧ ರೀತಿಗಳಲ್ಲಿ ಹರಿದು ಬಹು ಸಂಗೀತ ಪದ್ಧತಿಗಳಿಗೆ ದಾರಿ ಮಾಡಿಕೊಟ್ಟಿದೆ.

### ಉಜ್ವಲ ಪರಂಪರೆ

ಭಾರತೀಯ ಸಂಗೀತ ಶಾಸ್ತ್ರದಲ್ಲಿ ಕರ್ನಾಟಕ ಪದ್ಧತಿಯನ್ನು ಪ್ರಾರಂಭಿಸಿ ಪರಂಪರೆಯನ್ನಾಗಿಸಿದವರು ತ್ಯಾಗರಾಜರು ಮತ್ತು ಪುರಂದರದಾಸರು. ಶಾಸ್ತ್ರೀಯವಾದ ಕರ್ನಾಟಕ ಸಂಗೀತದೊಂದಿಗೆ ಸಾಮೂಹಿಕ ಸಂಗೀತವೂ ಬೆಳೆದು ಬಂದಿತು. ಭಾರತದ ಸಂಸ್ಕೃತಿಯ ಮೂಲ ಪ್ರದೇಶಗಳಾದ ಗ್ರಾಮಗಳಲ್ಲಿ ಜನಪದ ಸಂಗೀತ ಜೀವಂತವಾಯಿತು.

### ಋತುವಿನೊಂದಿಗೆ ರಾಗ

ಉಷಃಕಾಲದಲ್ಲಿ ಪ್ರಭಾತ್ ರಾಗವನ್ನು ಹಾಡುವರು. ಹಿಮಕಾಲದಲ್ಲಿ ಶ್ರೀರಾಗವನ್ನು ಹಾಡುವುದು, ವಸಂತ ಋತುವಿನಲ್ಲಿ ಬಸಂತ್ ರಾಗವನ್ನು ಹಾಡುವುದು, ಮಳೆಗಾಲದಲ್ಲಿ ಮಲ್ಹಾರ್ ರಾಗಾಲಾಪನೆ ಇತ್ಯಾದಿಗಳನ್ನು ನಾವು ಶಾಸ್ತ್ರೀಯ ಸಂಗೀತದಲ್ಲಿ ಕಾಣುತ್ತೇವೆ. ಇದೇ ರೀತಿಯಲ್ಲಿ ಹಳ್ಳಿಗರು ಸಹ ವಿವಿಧ ಸಂದರ್ಭಗಳಲ್ಲಿ ವಿವಿಧ ರಾಗಗಳನ್ನು ವಿವಿಧ ರೀತಿಯನ್ನು ಹಾಡುತ್ತಾರೆ. ಸಂಗೀತಗಾರರು ವಾತಾಪಿ ಗಣಪತಿಂ ಭಜೆ ಎಂದರೆ ಜನಪದದಲ್ಲಿ ಶರಣು ಶರಣುವಯ್ಯ ಗಣನಾಯ್ಕ ಎನ್ನುತ್ತಾರೆ. ದಾಸವರ್ಯರು ಕರುಣಾಕರ ನೀನೆಂಬುವ ದೇತಕೂ ಭರವಸೆ ಇಲ್ಲನೆಗೆ ಎಂದರೆ ಹಳ್ಳಿಗರು, ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ , ಕರುಣ ಕಲ್ಯಾಣ ಬಸವಣ್ಣ ಎಂದು ಹಾಡುತ್ತಾರೆ.

ಮೊದಲು ಜನ್ಮವಾದದ್ದು ಜನವಾಣಿ. ಅದು ಬೆಳೆದು ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು, ಕವಿವಾಣಿ ಹೂವು ಎಂಬುದು ದಾರ್ಶನಿಕರ ಅಭಿಮತ. ಶಾಸ್ತ್ರೀಯ ಸಂಗೀತದಲ್ಲಿ ಪ್ರೇಮ, ಭಕ್ತಿ, ವೈರಾಗ್ಯಾದಿ ಗುಣಗಳಿರುವಂತೆ ಜನಪದ ಗೀತೆಗಳಲ್ಲಿಯೂ ಸುಖ, ದುಃಖ, ಬಡತನ, ಬಯಕೆಗಳೆಲ್ಲವೂ ಇದೆ. ಶಾಸ್ತ್ರೀಯ ಸಂಗೀತ ಅಲಂಕೃತ ವಧು, ಜನಪದ ಸಂಗೀತ ನಿರಾಭರಣ ಸುಂದರಿ. ಎರಡೂ ಲಲಿತ ಕಲೆಗಳು.ಎರಡೂ ಕಲೆಗಳ ಮೂಲಕ ಜೀವನ ಸಾಕ್ಷಾತ್ಕಾರವಾಗುತ್ತದೆ.

ಭಾರತೀಯರು ನಾದ ನಿನಾದಕ್ಕೆ ಮನಸೋತವರು. ದೇವವಾಣಿ ಜನವಾಣಿಯಾದಾಗ, ಜನವಾಣಿಯನ್ನು ದೇವವಾಣಿಯಾದಾಗ, ಜನವಾಣಿಯನ್ನು ದೇವವಾಣಿಯ ಪಟ್ಟಕ್ಕೇರಿಸಿದ ಮಾನವ ಮಾನವತೆಯ ವಾಣಿ ಹೃದಯ ಸಂಗೀತವಾಗಿ ಹೊಸ ಲೋಕವೇ ಆಗಿ ಮೆರೆಯಬಹುದು. ಸುಖವಿರಲಿ, ಸಂತೋಷವಿರಲಿ, ಸಂಕಟವಿರಲಿ, ನಾದವೇ ಅದಕ್ಕೆ ನಿನಾದವಾಗುವುದು. ನಾದಬ್ರಹ್ಮನೇ ನಮ್ಮ ಎಲ್ಲಾ ನಡೆ, ನುಡಿಯ ನೇತಾರ. ನಾದೋಪಾಸನೆಯೇ ನಿರಂತರ ಶಕ್ತಿಯಾಗಿದೆ ಇದೇ ಜೀವನ್ಮುಕ್ತಿಯೂ ಆಗಿದೆ.

108 ವ್ಯ ದೇಶಗಳು



# ತಿರುಪ್ಪಾರ್ಥನ್ ಪ್ಪಳ್ಳಿ

ಮೂಲ : ಚಾರ್ಯ ಚಕ್ರವರ್ತಿ ರಂಗನಾ ’ನ್
ಅನುವಾದ : ಶ್ರೀಮತಿ. ಸೂರ್ಯವಂಶಿ

ತಿರುನಾಂಗೂರ್ ದಿವ್ಯದೇಶಗಳಲ್ಲಿ ಇದು ಎಂಟನೆಯ ದಿವ್ಯ ದೇಶವಾಗಿದೆ. ಈ ದಿವ್ಯದೇಶವು ತಮಿಳುನಾಡಿನ ಶೀರ್ಗಾಳಿಯಿಂದ ಸುಮಾರು 11 ಕಿ.ಮೀ ದೂರದಲ್ಲಿ ರಾಧಾವಲ್ಲೂರ್ ಎಂಬ ಊರಿನಲ್ಲಿದೆ. ಈ ದಿವ್ಯದೇಶವು ಒಂದೇ ಪ್ರಾಕಾರ, ರಾಜಗೋಪುರ, ಅರ್ಥಮಂಟಪ, ಮಹಾ ಮಂಟಪದೊಂದಿಗೆ ಶೋಭಾಯಮಾನವಾಗಿದೆ. ಲೋಕದಲ್ಲಿ ಎಲ್ಲೂ ಇರದಂತಹಾ ವಿಶಿಷ್ಟತೆಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಶ್ರೀ ಕೃಷ್ಣನು ಅರ್ಜುನನೊಂದಿಗೆ ನೆಲೆಸಿರುವ ಈ ಪ್ರತ್ಯೇಕ ಸನ್ನಿಧಿಯಲ್ಲಿ ನೋಡಬಹುದು. ಅರ್ಜುನನಿಗೆ ಗೀತೋಪದೇಶ ಮಾಡುತ್ತಿರುವಂತೆ ಇರುವುದು ಈ ಆಲಯದ ಪ್ರತ್ಯೇಕತೆ. ಈ ದಿವ್ಯದೇಶವನ್ನು ಪಾರ್ಥಸಾರಥಿ ಆಲಯವೆಂದು ಕರೆಯುತ್ತಾರೆ. ಈ ದಿವ್ಯದೇಶದಲ್ಲಿ ಮೂಲಮೂರ್ತಿ, ತಾಮರೈಯಾಳ್ ಕೇಳ್ವನ್ ಎಂಬ ಹೆಸರಿನೊಂದಿಗೆ ಶಂಖಚಕ್ರಧಾರನಾಗಿ ಪಶ್ಚಿಮಾಭಿಮುಖವಾಗಿ ನಿಂತಿರುವ ರೀತಿಯಲ್ಲಿ ಶ್ರೀದೇವಿ ಭೂದೇವಿ ಸಹಿತನಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಪಾರ್ಥಸಾರಥಿ ಸ್ವಾಮಿಯ ಸಮೀಪದಲ್ಲಿ ಚತುರ್ಭುಜಗಳೊಂದಿಗೆ ಶಂಖ, ಚಕ್ರ, ಧನಸ್ಸು, ಬಾಣ ಇವೆಲ್ಲವನ್ನೂ ಧರಿಸಿ ಬೇರೆ ಎಲ್ಲೂ ಕಂಡು ಬರದ ಶ್ರೀದೇವಿ ಭೂದೇವಿ ಸಮೇತನಾದ ಶ್ರೀರಾಮಭದ್ರನು **‘ಕೋಳವಿಲ್ಲಿರಾಮನ್’** ಎಂಬ ಹೆಸರಿನೊಂದಿಗೆ ನೆಲೆಸಿದ್ದಾನೆ.

## ಸ್ಥಳ ಪುರಾಣ -1

ಅರ್ಜುನನು ಬೇಟೆಯಾಡುತ್ತಾ ಬರುತ್ತಿರುವಾಗ ದಕ್ಷಿಣ ದಿಕ್ಕಿಗೆ ಬರುತ್ತಿರುವ ಸಂದರ್ಭದಲ್ಲಿ ಈ ದಿವ್ಯ ದೇಶದ ಸಮೀಪಕ್ಕೆ ಬರುತ್ತಲೇ ಅತಿಯಾದ ದಾಹವಾಯಿತೆಂತೆ. ಆ ಸಮಯದಲ್ಲಿ ಅಗಸ್ತ್ಯ ಮಹರ್ಷಿಯನ್ನು ಭೇಟಿಯಾದ. ಆಗ ಅಗಸ್ತ್ಯರು ತಮ್ಮ ಕಮಂಡಲುವನ್ನು ಅರ್ಜುನನಿಗೆ ನೀಡಿ ದಾಹವನ್ನು ತೀರಿಸಿಕೊಳ್ಳಬೇಕೆಂದು ಹೇಳಿದರು. ಆದರೆ ವಿಚಿತ್ರವೆನ್ನುವಂತೆ ಆ ಕಮಂಡಲದಲ್ಲಿ ಒಂದು ಹನಿಯೂ ನೀರಿರಲಿಲ್ಲ. ಆಗ ಅಗಸ್ತ್ಯರು ಶ್ರೀಕೃಷ್ಣನನ್ನು ಪ್ರಾರ್ಥಿಸಬೇಕೆಂದು ಅರ್ಜುನ ನಿಗೆ ಸಲಹೆಯನ್ನು ನೀಡಿದರು. ಅರ್ಜುನನು ತನ್ನ ತಪ್ಪನ್ನು ತಿಳಿದುಕೊಂಡು ಶ್ರೀಕೃಷ್ಣನನ್ನು ಧ್ಯಾನಿಸಿದ ಕೂಡಲೇ ನಂದನಂದನನು ಪ್ರತ್ಯಕ್ಷನಾಗಿ ಒಂದು ಖಡ್ಗವನ್ನು ನೀಡಿ ಅದರಿಂದ ಭೂಮಿಯ ಮೇಲೆ ಗೆರೆಯನ್ನು ಎಳೆಯಬೇಕೆಂದು ಹೇಳಿದ. ಪಾರ್ಥನು ಶ್ರೀಕೃಷ್ಣನು ತಿಳಿಸಿದಂತೆ ಮಾಡಿದ. ಕೂಡಲೇ ಗಂಗೆಯು ಭೂಮಿಯಿಂದ ಹೊರಗೆ ಚಿಮ್ಮಿದಳು. ಅದೇ ದೊಡ್ಡ ನದಿಯಾಗಿ ಬದಲಾಯಿತು. ಪಾರ್ಥನಿಗೆ ಶ್ರೀಕೃಷ್ಣನು ಅನುಗ್ರಹಿಸಿದ ದಿವ್ಯವಾದ ಪ್ರದೇಶವಾದ್ದರಿಂದ ಈ ದಿವ್ಯ ದೇಶಕ್ಕೆ ಪಾರ್ಥನ್‌ಪ್ಪಳ್ಳಿ ಎಂಬ ಹೆಸರು ಬಂದಿದೆ.

## ಸ್ಥಳ ಪುರಾಣ - 2

ಒಮ್ಮೆ ದಕ್ಷಿಣ ಭಾಗದಲ್ಲಿ ದುರ್ಭಿಕ್ಷವು ತಲೆದೋರಿತು. ಆಗ ಪರಮಶಿವನ ಆಜ್ಞೆಯೊಂದಿಗೆ ಅಗಸ್ತ್ಯ ಮಹರ್ಷಿ ತನ್ನ ಕಮಂಡಲದೊಂದಿಗೆ ದಕ್ಷಿಣ ದಿಕ್ಕಿಗೆ ನಡೆದರು. ಆಗ ಕಾಗೆಯ ರೂಪದಲ್ಲಿ ವಿನಾಯಕನು ಬಂದು ಅಗಸ್ತ್ಯನ ಕಮಂಡಲವನ್ನು ಬೋರಲಾಗಿ ಬೀಳಿಸಿದನು. ಆಗ ಕಮಂಡಲವುನಿಂದ ಹೊರಹೊಮ್ಮಿದ ನೀರು ನದಿಯಾಗಿ ಪ್ರವಹಿಸಿ, ಕಾವೇರಿ ನದಿ ಎಂದು ಹೆಸರು ಪಡೆಯಿತು. ಹೀಗೆ ಪ್ರವಹಿಸಿದ ಕಾವೇರಿಯನ್ನು ಅನುಸರಿಸಿದ ಅಗಸ್ತ್ಯ ಮಹರ್ಷಿ ಈ ಪಾರ್ಥನ್‌ಪ್ಪಳ್ಳಿ ಕ್ಷೇತ್ರಕ್ಕೆ ಬಂದು ಅಲ್ಲಿನ ಪ್ರಕೃತಿಗೆ ಮಾರುಹೋಗಿ ಅಲ್ಲೇ ತಪಸ್ಸು ಮಾಡತೊಡಗಿದರು. ಆ ತಪಸ್ಸಿನ ಫಲವಾಗಿ ದೇವಿಯ ಸಮೇತನಾದ ಕೋಲವಿಲ್ಲಿರಾಮನ್ ಸೇವೆಯನ್ನು ಸ್ವೀಕರಿಸಿ ಅನುಗ್ರಹಿಸುತ್ತಿದ್ದಾನೆಂದು ಭಕ್ತರ ನಂಬಿಕೆ. ಹಾಗೇ ಬ್ರಹ್ಮಹತ್ಯಾ ದೋಷದಿಂದ ಬಳಲುತ್ತಿದ್ದ ವರುಣನು ಈ ದಿವ್ಯದೇಶಕ್ಕೆ ಬಂದು ತಪಸ್ಸು ಮಾಡಿದ. ಆತನ ತಪಸ್ಸಿಗೆ ಮೆಚ್ಚಿದ ಪಾರ್ಥಸಾರಥಿ ವರುಣನಿಗೆ ಪ್ರತ್ಯಕ್ಷನಾಗಿ ಶಾಪ ವಿಮೋಚನೆಯನ್ನು ಮಾಡಿದ. ಪಾರ್ಥನ್‌ಪ್ಪಳ್ಳಿ ಸ್ವಾಮಿಯನ್ನು ಸೇವಿಸಿದವರಿಗೆ ಸಮಸ್ತದೋಷಗಳೂ ತೊಲಗಿ ಹೋಗಿ ಪರಿಪೂರ್ಣವಾಗಿ ಭಗವಂತನ ಅನುಗ್ರಹವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

# ಪರಮಯೋಗಿನಿ ಶ್ರೀ ತರಿಗೊಂಡ ವೆಂಗಮಾಂಬ ವಿವರಿಸಿರುವ ಅಷ್ಟಾಂಗ ಯೋಗ

ತೆಲುಗು ಮೂಲ - ಜೆ. ಬಾಲಸುಬ್ರಹ್ಮಣ್ಯಂ
ಅನುವಾದ - ಎಸ್. ವಾದಿರಾಜ



'ಯೋಗ' ಎಂದರೆ ಒಂದಾಗುವುದು, ಐಕ್ಯತೆಯನ್ನು ಹೊಂದುವುದು. ಎರಡು ಬೇರೆ ಬೇರೆಯಾಗಿರುವ ವಸ್ತುಗಳನ್ನು ಒಂದೇ ಎಂದು ಭಾವಿಸುವಂತೆ ಮಾಡುವುದೇ ಯೋಗ! ಮುಖ್ಯವಾಗಿ 'ಜೀವಾತ್ಮ-ಪರಮಾತ್ಮ' ಎರಡನ್ನೂ ಒಂದರಲ್ಲೊಂದು ಲಯ ಗೊಳಿಸುವುದೇ ಯೋಗದ ಮುಖ್ಯ ಉದ್ದೇಶ! ಅದನ್ನು ತಿಳಿಯಪಡಿಸುವುದೇ 'ಯೋಗ ಶಾಸ್ತ್ರ'! ಈ ಎರಡರ ಬಗೆಗೆ ಭಾರತೀಯ ತತ್ವಶಾಸ್ತ್ರವು ನಿರಂತರವಾಗಿ ಸಂಶೋಧನೆಯನ್ನು ನಡೆಸುತ್ತಿದೆ.


'ಜೀವಾತ್ಮ' ಎಂದರೆ ಯಾರೋ ಅಲ್ಲ! ಅನಂತವಾದ, ಚೈತನ್ಯಪೂರಿತವಾದ, ಶಾಶ್ವತವಾದ ಪರಮಾತ್ಮನಿಂದ ಬೇರೆಯಾದ ಜೀವಾತ್ಮನು ಆ ವಿಷಯವನ್ನು ಮರೆತು, ಇಂದ್ರಿಯ ವ್ಯಾಮೋಹಕ್ಕೆ ಒಳಗಾಗಿ, ಅನೇಕ ದುಷ್ಕೃತ್ಯಗಳನ್ನು ಎಸಗುತ್ತಿರುತ್ತಾನೆ. ಆ ಪಾಪದ ಫಲವಾಗಿ ಜೀವಾತ್ಮನು ಮಾಯಗೆ ಒಳಗಾಗಿ, ಪುನಃ ಪುನಃ ಹುಟ್ಟು ಸಾವಿನ ಸುಳಿಯಲ್ಲಿ ಸಿಲುಕಿ ಸದಾ ನೋವಿಗೆ ಗುರಿಯಾಗುತ್ತಿರುತ್ತಾನೆ. ಜೀವಾತ್ಮನಾದ ಮಾನವನು ಈ ಹುಟ್ಟು ಸಾವುಗಳಿಂದ ಮುಕ್ತಿಯನ್ನು ಪಡೆಯುವುದು ಯಾವಾಗಲೋ ತಿಳಿಯದೇ ಭೀತಿಗೆ ಗುರಿಯಾಗುತ್ತಿರುತ್ತಾನೆ.

ಅದರಿಂದಾಗಿ ಅವನು ಇಂದ್ರಿಯಗಳಿಗೆ ವಶನಾಗದೇ ತನ್ನೊಳಗೆ ಯಾವುದೋ ಆಧ್ಯಾತ್ಮಿಕ ಶಕ್ತಿ, ಅಂತರ್ಗತವಾಗಿ ಕೆಲಸ ಮಾಡುತ್ತಿರುವುದನ್ನು ಗಮನಿಸಿದ ಮಾನವನು, ಅದಕ್ಕೆ 'ಯೋಗಶಕ್ತಿ' ಎಂಬ ಹೆಸರನ್ನು ಇರಿಸಿದ.

ಆ ಆಧ್ಯಾತ್ಮಿಕ ಶಕ್ತಿಯ ಮೂಲಕ ತಾನು ಪಾವನನಾಗುವುದಕ್ಕೆ ಕಣ್ಣು ಮುಚ್ಚಿಕೊಂಡು ತನ್ನಲ್ಲಿ ತಾನು ತದೇಕಚಿತ್ತದಿಂದ ಪ್ರಯಾಣಿಸುವುದಕ್ಕೆ ಪ್ರಾರಂಭಿಸುತ್ತಾನೆ. ಅದರ ಮೂಲಕ ಮುಕ್ತಿಯನ್ನು ಪಡೆಯಬೇಕೆಂದು ಆತುರ ಗೊಳ್ಳುತ್ತಿರುತ್ತಾನೆ. ಆ ಪ್ರಯತ್ನ ಕೇವಲ ವ್ಯಕ್ತಿಗತವಾದುದು. ವೈಯಕ್ತಿಕವಾದ ಆ ಮಾರ್ಗದಲ್ಲಿ ಸಿದ್ಧಿಯನ್ನು ಪಡೆಯುವುದಕ್ಕೆ ಜೀವಾತ್ಮನಿಗೆ ಎಷ್ಟು ಜನ್ಮಗಳಾದರೂ ಬೇಕಾಗಬಹುದು. ಆ ರೀತಿ ಯೋಗಸಿದ್ಧರಾದ ಮಹನೀಯರಾದ ಸಪ್ತರ್ಷಿಗಳು, ವ್ಯಾಸ, ವಾಲ್ಮೀಕಿ ಮೊದಲಾದ ಮಹರ್ಷಿಗಳು, ಅನೇಕ ಚಕ್ರವರ್ತಿಗಳು ಸನಾತನ ಧರ್ಮದಲ್ಲಿ ಕಂಡು ಬರುತ್ತಾರೆ.

## ಮಹಾಯೋಗಶಾಸ್ತ್ರವೇ ಭಗವದ್ಗೀತೆ!

ದ್ವಾಪರಯುಗದಲ್ಲಿ ಶ್ರೀಕೃಷ್ಣ ಭಗವಾನನು ಅರ್ಜುನನಿಗೆ "ಶ್ರೀಭಗವದ್ಗೀತೆ"ಯನ್ನು ಉಪದೇಶಿಸುತ್ತಾ ಮಹಾಯೋಗ ಶಾಸ್ತ್ರವೆಂದು ಹೆಸರಿಸಿದ್ದಾನೆ. ಇದೇ ಮೊದಲನೆಯ ಬಾರಿ ಅಲ್ಲ! ಯೋಗ ಶಾಸ್ತ್ರವನ್ನು ಬಹಳ ಮೊದಲೇ ಸೂರ್ಯನಿಗೆ ಉಪದೇಶಿಸಿದ್ದನು. ಆತನು ತನ್ನ ಮಗನಾದ ಮನುವಿಗೆ ತಿಳಿಸಿದ ಅವನು ಇಕ್ಷ್ವಾಕುವಿಗೆ ಬೋಧಿಸಿದ. ಅವನೂ ಕ್ರಮೇಣ ಅನೇಕ ರಾಜರ್ಷಿಗಳಿಗೆ ಉಪದೇಶಿಸಿದ್ದರಿಂದ ಇದು ರಾಜಯೋಗವೆಂದು ಪ್ರಚಾರವಾಗಿ ನಂತರ ಮರೆ



ಯಾಗಿಹೋಗಿತ್ತು. ಪುನಃ ಇದನ್ನು ನಿನಗೆ ಉಪದೇಶಿಸುತ್ತಿದ್ದೇನೆ ಎಂದು ಶ್ರೀಕೃಷ್ಣನು ತಿಳಿಸಿದ. ಒಮ್ಮೆ ಕಪಿಲಮಹರ್ಷಿ, ಪುತ್ರ ವ್ಯಾಮೋಹದಿಂದ ಭ್ರಮೆಗೆ ಒಳಗಾಗಿದ್ದ ತನ್ನ ತಾಯಿಯಾದ ದೇವಹೂತಿಗೆ ಈ ಯೋಗಶಾಸ್ತ್ರವನ್ನು ಉಪದೇಶಿಸಿ ಆಕೆಗೆ ಜರಾಜನ್ಮ ಮರಣಗಳಿಂದ ಮುಕ್ತಿಯನ್ನು ನೀಡಿದ.

ಹಾಗೇ ಪುತ್ರವಾತ್ಸಲ್ಯದಿಂದ ಪಾಮರಳಾಗಿ ಒದ್ದಾಡುತ್ತಿದ್ದ ತನ್ನ ತಾಯಿಯಾದ ಅನಸೂಯಮಾತೆಗೆ, ಸಾಕ್ಷಾತ್ತು ದತ್ತಾತ್ರೇಯ ಸ್ವಾಮಿಯು ತತ್ತ್ವೋಪದೇಶದ ಮೂಲಕ ಯೋಗವನ್ನು ಉಪದೇಶಿಸಿ, ಆಕೆಗೆ ಜ್ಞಾನವೈರಾಗ್ಯ ಸಂಪನ್ನಳನ್ನಾಗಿ ಮಾಡಿ ತಾನು ತಪಸ್ಸನ್ನು ಆಚರಿಸಲೆಂದು ಸಹ್ಯಾದ್ರಿಗೆ ಹೊರಟುಹೋದ.

ಈ ಯೋಗವನ್ನು ಅಭ್ಯಾಸಮಾಡುವುದರಿಂದ ಮೊದಲು ವ್ಯಕ್ತಿಗೆ ಭೌತಿಕವಾದ ಶರೀರ, ಆರೋಗ್ಯ, ದೃಢವಾದ ಶರೀರ, ನಂತರ ಪ್ರಶಾಂತವಾದ ಮನಸ್ಸು ಸಿದ್ಧಿಸುತ್ತವೆ. ನಂತರ ಪರಾಕಾಷ್ಠತೆಗೆ ತಲುಪಿ ಪರಮಾತ್ಮನ ದರ್ಶನವು ಉಂಟಾಗುತ್ತದೆ. ಕೊನೆಗೆ ಶಾಶ್ವತವಾಗಿ ಆ ತತ್ವದಲ್ಲಿ ಲಯವಾಗುತ್ತದೆ.

**ಮಾತೃಶ್ರೀ ತರಿಗೊಂಡ ವೆಂಗಮಾಂಬ - ರಾಜಯೋಗ**

ಈ ರೀತಿ ತಲೆಮಾರುಗಳಿಂದ ಅನೂಚಾನವಾಗಿ ಮುಂದುವರೆಯುತ್ತಿರುವ ಯೋಗ ವಿದ್ಯೆಯ ಬಗೆಗೆ ಸಿದ್ಧಯೋಗಿನಿಯಾದ ಮಾತೃಶ್ರೀ ತರಿಗೊಂಡವೆಂಗಮಾಂಬ **'ಶ್ರೀವೇಂಕಟಾಚಲ ಮಹಾತ್ಮ್ಯ, ರಾಜ ಯೋಗಸಾರ'** ಎಂಬ ಎರಡು ಪದ್ಯಕಾವ್ಯಗಳಲ್ಲಿ, **'ಅಷ್ಟಾಂಗಯೋಗ ಸಾರ'** ಎನ್ನುವ ದ್ವಿಪದ ಕಾವ್ಯದಲ್ಲಿ ಸುಲಭವಾದ ರೀತಿಯಲ್ಲಿ ವಿವರಿಸಿದ್ದಾಳೆ.

ಈಕೆ ಜನ್ಮತಃ ಪರಮ ದೈವಭಕ್ತೆ. ಆದರೆ ಚಿಕ್ಕಂದಿನಲ್ಲಿ ವೆಂಗಮಾಂಬಳಿಗೆ ಅಭ್ಯಾಸಗೊಂಡಿದ್ದ ವೈರಾಗ್ಯ ಸ್ಥಿತಿಯಲ್ಲಿ ವೆಂಗಮಾಂಬಳಿಗೆ ಒಂದು ರೂಪ ನೀಡಿದ ಯೋಗ ಮೂರ್ತಿಯಾದ ಗುರುವಿನ ರೂಪಾವತಾರರಾದ ಸುಬ್ರಹ್ಮಣ್ಯಯೋಗಿಯವರ ಆಶ್ರಯ ದೊರೆಯಿತು. ಆ ಗುರುಗಳು ನೀಡಿದ ಮಂತ್ರದೀಕ್ಷೆ-ಹಸ್ತಮಸ್ತಕ ಸಂಯೋಗದಿಂದಾಗಿ ಸಿದ್ಧಿಸಿದ ಯೋಗ ತತ್ವದಿಂದ ತರಿಗೊಂಡ ವೆಂಗಮಾಂಬ ಪರಮಯೋಗಿನಿಯಾಗಿ ರಾರಾಜಿಸಿದಳು.

ತಿರುಮಲೆಯನ್ನು ತಲುಪಿಸಿದ ಆ ಮಹಾಯೋಗಿನಿ ತುಂಬುರು ತೀರ್ಥದಲ್ಲಿ, ಬೆಟ್ಟಗಳಲ್ಲಿ, ಗುಡ್ಡಗಳಲ್ಲಿ ಕಠಿಣವಾದ ತಪಃ ಸಾಧನೆಯನ್ನು ಮಾಡಿ ಸಿದ್ಧಯೋಗಿನಿಯಾಗಿ ರೂಪುಗೊಂಡಳು.

ಗುರುಗಳ ಅನುಗ್ರಹದಿಂದಾಗಿ ಸಾಧನೆಯಿಂದಾಗಿ ತನಗೆ ಸಿದ್ಧಿಸಿದ ಯೋಗವಿದ್ಯೆಯನ್ನು ಎಲ್ಲರಿಗೂ ನೀಡಿ ಅವರಲ್ಲಿ ಕೆಲವರಿಗಾದರೂ ಯೋಗವಿದ್ಯೆಯನ್ನು ಪರಿಚಯಿಸಬೇಕೆಂಬ ಉದ್ದೇಶದಿಂದ ಅತ್ಯಂತ ಸುಲಭವಾಗಿ ಶ್ರೀವೆಂಗಮಾಂಬ ತನ್ನ ಗ್ರಂಥಗಳಲ್ಲಿ ವಿವರಿಸಿದ ರೀತಿ ಆಶ್ಚರ್ಯಗೊಳಿಸುತ್ತದೆ.

**ಪರಮಾತ್ಮ - ಜೀವಾತ್ಮ**

ಪರಬ್ರಹ್ಮವು **'ಪರಂ'** ಮತ್ತು **'ಅಪರಂ'** ಎಂಬ ಎರಡು ವಿಧಗಳಾಗಿವೆ. ಇವುಗಳಲ್ಲಿ ಪರಂ ಎಂಬ ಅಕ್ಷರ ಶಾಶ್ವತ. ಎರಡನೆಯದು ಅಪರಂ ಎನ್ನುವುದು ಕ್ಷರ ಎಂದರೆ ನಶಿಸುವಂತದ್ದು.

ಅಕ್ಷರನೇ ಪರಮಾತ್ಮ! ಕ್ಷರನೇ ಜೀವಾತ್ಮ! ಆ ಪರಮಾತ್ಮನ ಅಂಶದಲ್ಲಿ ಹುಟ್ಟಿದವನೇ ಜೀವಾತ್ಮ! ಅವಿದ್ಯೆ ಎನ್ನುವ ಮಾಯೆಯಿಂದಾಗಿ ಅನೇಕ ಜನ್ಮಗಳನ್ನು, ದೇಹಗಳನ್ನು ಪಡೆಯುತ್ತಾ ವ್ಯಾಮೋಹ

ವೆಂಬ ಶೋಕಸಮುದ್ರದಲ್ಲಿ ಮುಳುಗಿ ತೇಲುತ್ತಿರುತ್ತಾನೆ. ಅಹಂಕಾರ, ಮಮಕಾರಗಳೊಂದಿಗೆ ಅನೇಕ ಪಾಪಗಳನ್ನು ಮಾಡುತ್ತಾ ಪುನಃ ಪುನಃ ಜನ್ಮಿಸುತ್ತಾ, ಮರಣಿಸುತ್ತಾ ಇರುತ್ತಾನೆ. ಹಾಗಾದರೆ ಇಂತಹಾ ಜೀವನಿಗೆ ವಿಮುಕ್ತಿ ದೊರೆಯುವ ಬಗೆ ಹೇಗೆ? ಅಂದರೆ ಪರಮಯೋಗಿನಿ ವೆಂಗಮಾಂಬ ಈ ರೀತಿ ದಾರಿ ತೋರಿದ್ದಾಳೆ.

**ಯೋಗಾಭ್ಯಾಸಕ್ಕೆ ಎಂಟು ಮೆಟ್ಟಿಲುಗಳು**


ಯೋಗದ ಬಗೆಗೆ ತಿಳಿಯಬೇಕೆಂದರೆ ಅದಕ್ಕೆ ಸದ್ಗುರವಿನ ಉಪದೇಶ ಬೇಕೇಬೇಕು! ನಂತರವೇ ಯೋಗಾಭ್ಯಾಸ ಮಾಡಬೇಕು.

1. ಯಮ 2. ನಿಯಮ 3.ಆಸನ 4.ಪ್ರಾಣಾಯಾಮ 5.ಪ್ರತ್ಯಾಹಾರ 6.ಧ್ಯಾನ 7.ಧಾರಣೆ 8.ಸಮಾಧಿ ಎಂಬ ಎಂಟು ಮೆಟ್ಟಿಲುಗಳನ್ನು ಒಂದರ ನಂತರ ಒಂದರಂತೆ ಅಭ್ಯಾಸ ಮಾಡುತ್ತಾ ಧನ್ಯರಾಗಬೇಕು. ಆಹಾರ ನಿದ್ರೆಗಳೊಂದಿಗೆ ಇಂದ್ರಿಯ ನಿಗ್ರಹವನ್ನು ಮಾಡುತ್ತಾ ಶಾಂತವಾಗಿರುವುದೇ ಯಮ!

ಧೃಢವಾದ ಗುರುಭಕ್ತಿಯೊಂದಿಗೆ ಏಕಾಂತವಾಗಿ ವೈರಾಗ್ಯದಿಂದ ಕೂಡಿರುವುದು ನಿಯಮ! ಸುಖವಾಗಿ ಸ್ಥಿರಾಸನದಲ್ಲಿ ಸುತ್ತಮುತ್ತಲಿನ ಪರಿಸರಗಳ ಅರಿವೇ ಇಲ್ಲದಂತೆ ಕುಳಿತು ಮನಸ್ಸನ್ನು ಆತ್ಮದೊಂದಿಗೆ ನಿಲ್ಲಿಸುವುದೇ ಆಸನ! ವಾಯುವನ್ನು ಗುರುಗಳು ಹೇಳಿದಂತೆ ಒಳಗೆ ಎಳೆದುಕೊಳ್ಳುವುದು, ಹೊರಗೆ ಬಿಡುವುದೇ ಪ್ರಾಣಾಯಾಮ! ಪ್ರಾಣಾಯಾಮದ ಮೂಲಕ ಮನಸ್ಸನ್ನು ಹತೋಟಿಯಲ್ಲಿರಿಸಿಕೊಳ್ಳುವುದೇ ಪ್ರತ್ಯಾಹಾರ. ತನ್ನಲ್ಲಿನ ಆತ್ಮವೇ ಎಲ್ಲೆಡೆ ಅಂದರೆ ಸರ್ವತ್ರ ವ್ಯಾಪಿಸಿದೆ ಎಂದು ತಿಳಿದುಕೊಳ್ಳುವುದೇ ಧ್ಯಾನ. ತನ್ನ ಒಳಗೆ - ಹೊರಗೆ ತೇಜೋರೂಪದಲ್ಲಿ ಬೆಳಗುತ್ತಿರುವ ಪರಮಾತ್ಮನನ್ನು ಮನಸ್ಸಿನಲ್ಲಿ ಸ್ಥಿರವಾಗಿ ಇರಿಸಿಕೊಳ್ಳುವುದೇ ಧಾರಣೆ. ಕೊನೆಗೆ ನೀರಿನಲ್ಲಿ ಕರಗಿದ ಸಕ್ಕರೆಯಂತೆ ಪರಮಾತ್ಮನಲ್ಲಿ ಜೀವಾತ್ಮನನ್ನು ಒಂದಾಗಿಸುವುದೇ ಸಮಾಧಿ!

ಯೋಗಾಭ್ಯಾಸಕ್ಕೆ ಈ ಎಂಟುಮೆಟ್ಟಿಲುಗಳೇ ಅಲ್ಲದೇ ಮಾತೃಶ್ರೀ ತರಿಗೊಂಡವೆಂಗಮಾಂಬ ಸಮಾಧಿ ಯೋಗದಲ್ಲಿ, ಷಟ್ಚಕ್ರಗಳು,ಅಜಪಾ ಗಾಯತ್ರಿ, ಲಯ ಯೋಗ ಪದ್ಧತಿ, ಹಠ ಯೋಗ ಪದ್ಧತಿ, ಭೌತಿ ಕರ್ಮ ವಸ್ತಿ ಕರ್ಮ, ನೇತಿ ತ್ರಾಟಕ, ನೌಳಿ ಕರ್ಮ, ಕಪಾಲಭಾತಿ ಎಂಬಂತಹಾ ಆರು ಕರ್ಮಗಳನ್ನು ಸೂರ್ಯಭೇದನ, ಕುಂಭಕಂ, ಉಜ್‌ಝಾ ಕುಂಭಕದಂತಹಾ ಎಂಟು ರೀತಿಯ ಕುಂಭಕಗಳನ್ನು ಸಾಂಖ್ಯಯೋಗ, ತಾರಕಯೋಗ, ಅಮನಸ್ಕಯೋಗ, (ಶಾಂಭವಿ ಮುದ್ರೆ) ಮಂತ್ರಲಯಾದಿ ಯೋಗಗಳ ಅನುಭವ, ರಾಜಯೋಗಿ ಲಕ್ಷಣಗಳು, ರಾಜಯೋಗಿ ಆತ್ಮಯಜ್ಞ- ಇಂತಹಾ ಅನೇಕ ಯೋಗಾಭ್ಯಾಸದ ವಿಶೇಷಗಳನ್ನು ತಿಳಿಯ ಪಡಿಸುತ್ತಾ ಇವೆಲ್ಲವನ್ನೂ ಸದ್ಗುರವಿನ ಬಳಿ ಸಚ್ಛಿಷ್ಯನಾಗಿದ್ದುಕೊಂಡು, ಉಪದೇಶವನ್ನು ಪಡೆಯಬೇಕೆಂದು ತರಿಗೊಂಡ ವೆಂಗಮಾಂಬ ಸ್ಪಷ್ಟವಾಗಿ ತಿಳಿಸಿದ್ದಾರೆ.

ಇಂತಹಾ ಸಂಕ್ಲಿಷ್ಟವಾದ ಯೋಗಾಭ್ಯಾಸವನ್ನು ಕೇವಲ ಗುರುವಿನ ಅನುಗ್ರಹದೊಂದಿಗೆ ಪಡೆದ ಮಾತೃಶ್ರೀ ತರಿಗೊಂಡ ವೆಂಗಮಾಂಬ 1730 ರಲ್ಲಿ ಚಿತ್ತೂರು ಜಿಲ್ಲೆಯ ತರಿಗೊಂಡದಲ್ಲಿ ಜನ್ಮಿಸಿದಳು. ನಂತರ ತಿರುಮಲೆಯನ್ನು ತಲುಪಿ ಸುಮಾರು 90 ವರ್ಷದ ವಯಸ್ಸಿನಲ್ಲಿ 1817ರಲ್ಲಿ ಶ್ರೀ ವರಾಹಸ್ವಾಮಿಯವರ ಆಲಯದ ಎದುರಿನಲ್ಲಿ ವರಾಹ ಸ್ವಾಮಿ ಅತಿಥಿ ಗೃಹದ ಹಿಂಭಾಗದಲ್ಲಿ ಯೋಗ ಸಮಾಧಿಯಲ್ಲಿ ಪ್ರವೇಶಿಸಿ, ಇಂದಿಗೂ ತಿರುಮಲೆಯ ಶ್ರೀಹರಿಯ ಆಲಯದಲ್ಲಿ ಪ್ರತಿದಿನವೂ ರಾತ್ರಿ ಕೊನೆಯಲ್ಲಿ ನಡೆಯುವ **'ಶ್ರೀನಿವಾಸನ ಮುತ್ತಿನ ಆರತಿ'** ಯಲ್ಲಿ ಅಂದರೆ ಏಕಾಂತ ಸೇವೆಯಲ್ಲಿ ವೆಂಗಮಾಂಬ ತನ್ನ ಯೋಗ ಶರೀರದೊಂದಿಗೆ ಬೃಂದಾವನದಿಂದ ಆಲಯಕ್ಕೆ ಹೋಗುತ್ತಾಳೆಂದು ಪ್ರತೀತಿ ಇದೇ ! ಅಷ್ಟೇ ಅಲ್ಲ ಈ ಪರಮಯೋಗಿನಿ



ತಿರುಮಲೆಯ ಪರ್ವತದ ಸಾಲಿನಲ್ಲಿ ಯೋಗ ಶರೀರ ದೊಂದಿಗೆ ಸಂಚರಿಸುತ್ತಿರುತ್ತಾಳೆಂದು ಸುಮಾರು 70 ವರ್ಷದ ಕೆಳಗೆ ಆಕೆಯನ್ನು ಸಂದರ್ಶಿಸಿದ್ದೇವೆಂದು ಸದ್ಗುರು ಮಳಯಾಳಸ್ವಾಮಿಯಂತಹಾ ಮಹನೀಯರು ತಿಳಿಸಿದ್ದರೆ. ಸಾಧನೆಯೆಂಬ ಮಹತ್ಕಾರ್ಯಗಳು ಧರೆಯಲ್ಲಿ ನಡೆಯುವುವು ಎಂದು ಹೇಳಿದಂತೆ ಸಿದ್ಧಯೋಗಿನಿಯಾದ ಮಾತೃಶ್ರೀ ತರಿಗೊಂಡ ವೆಂಗಮಾಂಬ ನೀಡಿರುವ ಅಷ್ಟಾಂಗಯೋಗದಲ್ಲಿ ಸ್ವಲ್ಪ ಸುಲಭವಾದ ಪ್ರಾಣಾಯಾಮಾದಿ ಎಂಬ ನಿಯಮಗಳನ್ನು ಆಚರಿಸುತ್ತಾ ಜಿಜ್ಞಾಸಿಗಳು ಆ ಮಾರ್ಗದಲ್ಲೇ ಅಭ್ಯಾಸವನ್ನು ಮಾಡಿದಲ್ಲಿ, ಶರೀರದ ಪಟುತ್ವ,ಆರೋಗ್ಯ, ಮನಶ್ಶಾಂತಿ ವರ್ಚಸ್ಸು ಉಂಟಾಗುತ್ತದೆ.

ಆ ಪ್ರಯತ್ನವನ್ನು ಒಂದೇ ಮನಸ್ಸಿನಿಂದ ಅಭ್ಯಾಸ ಮಾಡುತ್ತಾ ಮುಂದಕ್ಕೆ ಸಾಗಿದರೆ ಸಾಕು ಗುರುವಿನ ಅನುಗ್ರಹದೊಂದಿಗೆ ದೈವಾನುಗ್ರಹವೂ ಉಂಟಾಗುತ್ತದೆ ಹಾಗೇ ನಮಗೆ ನಿಧಾನವಾಗಿಯಾದರೂ ಸರಿ ದೈವದರ್ಶನವೂ ದೊರೆಯುತ್ತದೆಂಬ ದೃಢವಾದ ಸಂಕಲ್ಪದೊಂದಿಗೆ ಯೋಗಾಭ್ಯಾಸವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ.

ಈ ಪ್ರಪಂಚದಲ್ಲಿ ಭಗವಂತನು ಮಾಡಿರುವ ಅದ್ಭುತವಾದ ಸೃಷ್ಟಿ ಎಂದರೆ ಈ ಮಾನವನ ಶರೀರ! ಜೀವನಿಗೆ ಸಾಧನೆ ಮಾಡುವುದಕ್ಕೆ ಹಾಗೂ ಧನ್ಯನಾಗುವುದಕ್ಕೆ ಭಗವಂತನು ಪ್ರಸಾದಿಸಿರುವ ಈ ದೇಹವೇ ಮಾಧ್ಯಮವಾಗಿದೆ. ಅಂತಹಾ ಮಾನವನ ಶರೀರವನ್ನು ಯೋಗ್ಯರಾದ ಮಹರ್ಷಿಗಳು ಹೀಗೆ ವಿವರಿಸಿದ್ದಾರೆ. ಈ ಶರೀರವು ಷಟ್ ಚಕ್ರಯುತವಾಗಿದೆಯೆಂದು, ಆಸನದಲ್ಲಿ **'ಮೂಲಾಧಾರ ಚ್ರಕದಲ್ಲಿ'** ಗಣೇಶನು ಇರುತ್ತಾನೆಂದು, ಅದರಿಂದ ಎರಡು ಅಂಗುಲಗಳ ಮೇಲೆ **'ಸ್ವಾಧಿಷ್ಠಾನಚಕ್ರ'** ದಲ್ಲಿ ಬ್ರಹ್ಮದೇವನು ಇರುತ್ತಾನೆಂದೂ, ಅದರಿಂದ ಆರು ಅಂಗುಲಗಳ ಮೇಲೆ ಅಂದರೆ ಹೊಕ್ಕಳ ಭಾಗದಲ್ಲಿ **'ಮಣಿಪೂರ'** ಎಂಬ ಚಕ್ರದಲ್ಲಿ ವಿಷ್ಣುವು ಇರುತ್ತಾನೆಂದು, ಅದರ ಮೇಲೆ ಹತ್ತು ಅಂಗುಲಗಳ ದೂರದಲ್ಲಿ ಹೃದಯದಲ್ಲಿ **'ಅನಾಹುತ ಚಕ್ರದಲ್ಲಿ'** ರುದ್ರ ದೇವನು ನೆಲಸಿರುತ್ತಾನೆಂದು, ಅದರ ಮೇಲೆ ಕಂಠದ ಭಾಗದಲ್ಲಿ **'ವಿಶುದ್ಧ ಚಕ್ರದಲ್ಲಿ'** ಸದಾಶಿವನು ಪ್ರಧಾನ ದೈವ ವಾಗಿರುತ್ತಾನೆಂದು, ನಂತರ ಭ್ರೂಮಧ್ಯಭಾಗದಲ್ಲಿ ಇರುವ **'ಆಜ್ಞಾಚಕ್ರದಲ್ಲಿ'** **'ಪರಮಾತ್ಮ'** ಅಥವಾ ಪರಬ್ರಹ್ಮನು ಬೆಳಗುತ್ತಿರುತ್ತಾನೆಂದು ಹೇಳುತ್ತಾರೆ. ಇವುಗಳೆಲ್ಲದಕ್ಕಿಂತಲೂ ಮೇಲಿನ ಭಾಗದಲ್ಲಿ ಶಿರಸ್ಸಿನಲ್ಲಿನ ಮಧ್ಯಭಾಗದಲ್ಲಿನ **'ಸಹಸ್ರಾರ ಚಕ್ರದಲ್ಲಿ'** ಸಾವಿರ ದಳಗಳ ಪದ್ಮದಲ್ಲಿ **'ಸದ್ಗುರು ಪಾದಪದ್ಮಗಳು'** ಪ್ರಕಾಶಿಸುತ್ತಿರುತ್ತವೆಂದು ಇವುಗಳೆವನ್ನೂ ಯೋಗ ಸಾಧಕರು ನಿತ್ಯವೂ ದರ್ಶಿಸುತ್ತಿರುತ್ತಾರೆಂದು ತಿಳಿದವರು ಹೇಳಿರುವ ಪರಮಸತ್ಯವಾದ ಅನುಭವ ಪೂರ್ವಕವಾದ ಮಾತು!

ಹಾಗೇ ಈ ಏಳುಗಿರಿಯೊಡೆಯನ ಕ್ಷೇತ್ರವೂ ಷಟ್ಚಕ್ರ ಪೂರಿತವಾದ ಮಹಿಮಾನ್ವಿತವಾದ ದಿವ್ಯಕ್ಷೇತ್ರವಾಗಿದೆ! ಒಂದೊಂದು ಬೆಟ್ಟವನ್ನು ಒಂದೊಂದು ಚಕ್ರವೆಂದು ಭಾವಿಸಿ, ಆರು ಬೆಟ್ಟಗಳನ್ನು ಅಧಿರೋಹಣ ಮಾಡಿ, ಕೊನೆಗೆ ಏಳನೆಯ ಬೆಟ್ಟದಲ್ಲಿ ಸಾವಿರದಳಗಳಿಂದ ಕೂಡಿದ ಪದ್ಮ .... ಸಹಸ್ರಾರ ಚಕ್ರದಲ್ಲಿ ನೆಲಸಿರುವ ಆನಂದನಿಲಯನನ್ನು ದರ್ಶಿಸಿಕೊಳ್ಳಬಹುದು.


ಅಷ್ಟೇ ಅಲ್ಲ. ಯೋಗತತ್ವಶಾಸ್ತ್ರವಿಧಿಗಳು ತಿಳಿಸುವಂತೆ ಮಂತ್ರದಂತಹಾ ಮಾತು ಏನೆಂದರೆ **'ನಿರಂತರ ಸಹಸ್ರಾರ ಚಕ್ರ'** ದಲ್ಲಿ ಇರುವಂತೆ ಭಾಸವಾಗುವ ಏಳು ಬೆಟ್ಟಗಳ ಮೇಲೆ ಇಂದಿಗೂ ಎಂದಿಗೂ ಯೋಗಶರೀರದೊಂದಿಗೆ ಮಾತೃಶ್ರೀ ತರಿಗೊಂಡವೆಂಗಮಾಂಬ ಸಂಚರಿಸುತ್ತಿರುತ್ತಾಳೆ. ಆಕೆ ತಿಳಿಸಿದ ಯೋಗಮಾರ್ಗದಲ್ಲಿ ಹೆಜ್ಜೆ ಇರಿಸುತ್ತಾ ನಡೆಯುವುದಕ್ಕೆ ಪ್ರಯತ್ನಿಸೋಣ. ಆ ಆಪದ್ಭಾಂಧವನನ್ನು ಹೆಜ್ಜೆ ಹೆಜ್ಜೆಗೂ ಸ್ಮರಿಸುತ್ತಾ, ನಮಸ್ಕರಿಸುತ್ತಾ ಮನಸಾರಾ ಆನಂದವನ್ನು ಆಸ್ವಾದಿಸುತ್ತಾ......ಬಾಯ್ತುಂಬಾ ಆ ದೇವದೇವನನ್ನು ಸುತ್ತಿಸಿ ಜನ್ಮವನ್ನು ಸಾರ್ಥಕ ಪಡಿಸೋ ಕೊಳ್ಳೋಣ!!!

**ಓಂ ನಮೋ ವೇಂಕಟೇಶಾಯ**



# ಶ್ರೀ ಪಾದರಾಜರು

**– ರಾಘವೇಂದ್ರನ್. ಹೆಚ್.ಎನ್**




**ನಮಃ ಶ್ರೀ ಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ।**
**ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ॥**

ಮೇಲಿನ ಸ್ತುತಿ ಪದ್ಯದಲ್ಲಿ ಆದ್ಯರಾಗಿ ಹೆಸರಿಸಲ್ಪಟ್ಟಿರುವ ಶ್ರೀಪಾದರಾಜರು ಶ್ರೇಷ್ಠಯತಿಗಳು ಹಾಗೂ ಕನ್ನಡ ಹರಿದಾಸ ಕೀರ್ತನ ಪ್ರಕಾರಕ್ಕೆ ಭದ್ರ ತಳಹದಿ ಹಾಕಿಕೊಟ್ಟ ಮಹಾತ್ಮರು. ಶ್ರೀಪಾದರಾಜರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ಅವರ ತಂದೆ ಶೇಷಗಿರಿಯಪ್ಪ, ತಾಯಿ ಗಿರಿಯಮ್ಮ. ಅವರ ಜನನವಾದುದು ಕ್ರಿ.ಶ.1404 ರಲ್ಲಿ, ಕರ್ನಾಟಕದ ಚನ್ನ ಪಟ್ಟಣ ತಾಲ್ಲೂಕಿನ ಅಬ್ಬೂರು ಎಂಬಲ್ಲಿ. ಬಾಲ್ಯದಲ್ಲಿ ಒಂದು ದಿನ ಸಂಧ್ಯಾಕಾಲದಲ್ಲಿ ಶ್ರೀರಂಗದ ಯತಿಗಳಾದ ಶ್ರೀ ಸ್ವರ್ಣ ವರ್ಣತೀರ್ಥರ ಭೇಟಿಯಾಗಿ,ಮುಂದೆ ಅವರಿಂದಲೇ ಸನ್ಯಾಸ ದೀಕ್ಷೆ ಪಡೆದು ಲಕ್ಷ್ಮೀನಾರಾಯಣ ತೀರ್ಥರೆನಿಸಿ, ನಂತರ ತಪೋನಿಷ್ಠ ಮಹಿಮರಾದ ಶ್ರೀವಿಭುದೇಂದ್ರ ತೀರ್ಥರ ಬಳಿ ವೇದಾಂತದ ವ್ಯಾಸಂಗ ನಡೆಸಿ, ವಿದ್ವತ್ ಗೋಷ್ಠಿಯೊಂದರಲ್ಲಿ ಉತ್ತರಾದಿ ಮ ’ದ ಯತಿಗಳಾಗಿದ್ದ ಶ್ರೀರಘುನಾಥ ತೀರ್ಥರಿಂದ **‘ಶ್ರೀಪಾದರಾಜ’** ರೆಂಬ ಹೆಸರು ಪಡೆದು ಅದೇ ಹೆಸರಿನಿಂದಲೇ ಮುಂದೆ ಪ್ರಸಿದ್ಧರಾದರು.

ಶ್ರೀರಂಗದ ಶ್ರೀಸ್ವರ್ಣವರ್ಣತೀರ್ಥರ ತರುವಾಯ ಸಂಸ್ಥಾನಾಧಿಪತ್ಯವನ್ನು ವಹಿಸಿಕೊಂಡ ಶ್ರೀಪಾದರಾಜರು ಅಲ್ಲಿಂದ ಸಂಚಾರ ಹೊರಟು ತಮ್ಮ ಬಾಲ್ಯದ ದಿನಗಳನ್ನು ಕಳೆದಿದ್ದ ತಪೋಭೂಮಿ ಇಂದಿನ ಕರ್ನಾಟಕದ ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ಬಂದು, ಅಲ್ಲಿ ಕಡೆಯವರೆಗೂ ನೆಲೆ ನಿಂತು ಮಹಿಮೆತೋರುತ್ತ ಶ್ರೀಹರಿಪದಾಂಬುಜ ಭೃಂಗರಾಗಿ, ಹರಿದಾಸ ಪರಂಪರೆಗೆ ನೇತಾರರಾಗಿ,ಯತಿಶ್ರೇಷ್ಠರಾಗಿ ಪಂಡಿತ-ಪಾಮರರಿಗೆ ಆತ್ಮೋದ್ಧಾರದ ಮಾರ್ಗತೋರಿ, ದ್ವೈತ ತತ್ವವನ್ನು ಸಾರಿ, ಕ್ರಿ.ಶ.1502 ರ ಜ್ಯೇಷ್ಠ ಬಹುಳ ಚತುರ್ದಶಿ’ಯಂದು ಶ್ರೀ ಹರಿಯ ಪಾದಪದ್ಮಗಳನ್ನು ಸೇರಿದರು. ಅವರ ಸಂಸ್ಥಾನವು ಇಂದಿಗೂ ಶ್ರೀಪಾದರಾಜರ ಮ ’ವೆಂದೇ ಪ್ರಸಿದ್ಧಿ ಪಡೆದಿದೆ. ಅವರ ಪಾವನವಾದ ಬೃಂದಾವನವಿರುವ ಸ್ಥಳವು ಪವಿತ್ರವೆನಿಸಿದ್ದು ಅವರ ಬೃಂದಾವನಕ್ಕೆ ಭಕ್ತಿಯಿಂದ ಸೇವೆ ಸಲ್ಲಿಸುವವರ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವೆಂದು ಮತ್ತೋರ್ವ ಯತಿ ಶ್ರೇಷ್ಠರಾದ ಶ್ರೀವ್ಯಾಸರಾಯರೇ ಘೋಷಿಸಿರುವರು.

## ಶ್ರೀಪಾದರಾಜರ ಕನ್ನಡ ಕೃತಿಗಳು :

ಶ್ರೀಪಾದರಾಜರು ಕನ್ನಡದಲ್ಲಿ **‘ರಂಗವಿ ’ಲ’** ಅಂಕಿತದಲ್ಲಿ ನೂರಾರು ಕೀರ್ತನೆ, ಸುಳಾದಿ, ಉಗಾಭೋಗ, ದಂಡಕ, ವೃತ್ತ ನಾಮಗಳನ್ನು ರಚಿಸಿದ್ದಾರೆ. ಅವರ ಕೃತಿಗಳಲ್ಲಿ ಅವರ ಅಂತರಂಗದ ಪರಿಶುದ್ಧ ಭಕ್ತಿಯೇ ತುಂಬಿ ಬಂದಿದೆ. ಅವರ ಕೃತಿಗಳಲ್ಲಿ ಭಗವಂತನ ಮಹಿಮೆ, ದ್ವೈತ ತತ್ವ ಪ್ರತಿಪಾದನೆ, ಕ್ಷೇತ್ರವರ್ಣನೆ, ಆತ್ಮಶೋಧನೆ, ಅಂತರಂಗ ನಿವೇದನೆ, ನೀತಿ ಬೋಧನೆಗಳು ಸಹಜವಾಗಿ ಮೂಡಿ ಬಂದಿವೆ. ಅವರ ಕೃತಿಗಳಲ್ಲಿ ಕಾಣಬರುವ ಆತ್ಮನಿವೇದನೆಯಂತೂ ವಿಶ್ವದ ಎಲ್ಲ ಜೀವರ ಅಂತರಂಗದ ಪ್ರತಿಬಿಂಬವೇ ಆಗಿದೆ. ಜೀವರ ಜನ್ಮಾಂತರ ಪಯಣದ ಹಾದಿ, ಸಂಸಾರದ ಅನಿತ್ಯತೆ, ತಳಮಳ, ತೊಳಲಾಟ,ಕಡೆಯಲ್ಲಿ ಹರಿಯಲ್ಲದೇ ಅನ್ಯಗತಿಯಿಲ್ಲವೆಂಬ ಬಲವಾದ ನಂಬಿಕೆ, ಅನನ್ಯ ಶರಣಾಗತಿ, ಭಗವಂತನನ್ನು ಕಾಣಬೇಕೆಂಬ, ಅವನ ಕೃಪೆಯನ್ನು ಅನುಭವಿಸಬೇಕೆಂಬ ಕಾತರ-ಅವರ ಕೃತಿಗಳಲ್ಲಿದೆ. ಅವರ ಮಾತೆಲ್ಲವೂ

ಶ್ರೀಹರಿಯೊಂದಿಗೆ ಶ್ರೀಹರಿಯೇ ಅವರ ಗುರಿ, ಅಂತೆಯೇ ಅವರ ಪ್ರತಿಯೊಂದು ಕೃತಿಯೂ ನರನಿಗೊಂದು ಬೆಳಕು.

ಜಗತ್ತಿನಲ್ಲಿ ಎಲ್ಲರೂ ಸಂಸಾರದಲ್ಲಿ ಕ್ಷಣಿಕ ಸುಖದ ಆಸೆಗೆ ಮರುಳಾಗಿ ಮೋಸ ಹೋದವರೇ ಅಂತಹವರನ್ನು ನಿಮಿತ್ತ ಮಾಡಿಕೊಂಡು ಹೇಳುತ್ತಾರೆ.

**ಮೋಸಹೋದೆನಲ್ಲ ಸಕಲವು ವಾಸುದೇವ ಬಲ್ಲ**

**..........................................**

**ನಿಷ್ಠೆಯಿಂದ ನಾ ದೃಷ್ಟಿಸಿ ನೋಡದದೆ ॥**

ಅವರ ದೃಷ್ಟಿಯಲ್ಲಿ 'ಕಾಳಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು. ಸುಖ ದುಃಖಗಳ ಮಿಳಿತವಾದ ಸಂಸಾರದ ಯಾತ್ರೆಯಲ್ಲಿ ಒಮ್ಮೆ ಕತ್ತಲಾದರೆ ಒಮ್ಮೆ ಬೆಳದಿಂಗಳ ಬೆಳಕು. ಸುಖದ ಕಾಲಕ್ಕಷ್ಟೆ ನೆಂಟರು, ಇಷ್ಟರು, ಬಂಟರು. ಅವರ ಚರ್ಯೆ ಎಂತೆಂದರೆ,

**ಉಂಭಾಗ ಉಡುವಾಗ ಕೊಂಬಾಗ ಕೊಡುವಾಗ**

**..............................................**

**ಇಂಬು ನಿನಗಿಲ್ಲ ನಡೆಯೆಂಬರು॥**

ಅವರೆನ್ನುವಂತೆ ಸಂಸಾರ ಸುಖವೆಂಬುದು ಮೂರು ದಿನದ ಭಾಗ್ಯ ಕಷ್ಟ, ದುಃಖ, ನೋವು, ನಷ್ಟಗಳ ದಂಡ ತೆತ್ತ ಮೇಲೆಯೇ ಮಾನವನಿಗೆ **'ರಂಗವಿ 'ಲನೇ ಸರಿ'** ಎಂಬ ಅರಿವು ಮೂಡುವುದು.

ಸಂಸಾರ ಸುಖವೆಂಬುದು ಚಿರವೆಂದು ಭ್ರಮಿಸಿ, ಅಜ್ಞಾನದಿಂದ ಅದರಲ್ಲೇ ಮುಳುಗಿ ಕೆಡುವುದು ಮನುಷ್ಯನ ಸ್ವಭಾವ. ಅಂತಹ ಮನುಷ್ಯನನ್ನು ಎಚ್ಚರಿಸುವ ಶ್ರೀಪಾದ ರಾಜರು.

**ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ**
**ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ।**

- ಎನ್ನುತ್ತಾರೆ. ಧನಮದದಿಂದ, ಬಲಮದದಿಂದ, ಛಲ ಮದದಿಂದ, ಪದವಿಮದದಿಂದ ಮೆರೆದ ನರಕಾಸುರ, ಕಾರ್ತವೀರ್ಯ, ಕೌರವ, ನಹುಷರು ತಮ್ಮ ತಮ್ಮ ಅಂತ್ಯಕಾಲದಲ್ಲಿ ಜತೆಗೆ ಏನನ್ನೂ ಕೊಂಡೊಯ್ಯಲಿಲ್ಲ. ಆದರೆ ಧ್ರುವ, ವಿಭೀಷಣ, ಹನುಮಾದಿಗಳು ಅನವರತ ಹರಿಸ್ಮರಣೆಗೈದು ಸಕಲ ಭಾಗ್ಯವನ್ನೂ ಹೊಂದಿದರು.ಅನಂತ ಕಾಲದಲ್ಲಿ ಭಗವಂತನನ್ನು ಅರಿಯದೆ, ಶರಣಾಗದೆ, ಸ್ಮರಿಸದೆ ಭವದಲ್ಲಿ ಬಿದ್ದುನೊಂದ ಜೀವನಿಗೆ ಅದಾವುದೋ ಪುಣ್ಯವಿಶೇಷವು ಭಗವಂತನ ಅರಿವಿನ ಬೆಳಕನ್ನು ಮನದಲ್ಲಿ ಮೂಡಿಸುವುದು. ಆ ವೇಳೆಯಾದರೂ ಭಗವಂತನನಲ್ಲಿ ಸಂಪೂರ್ಣ ಶರಣಾಗಿ ಅವನ ದಯೆಗೆ ಪ್ರಾರ್ಥಿಸಬೇಕು.

**ಅನ್ನಂತ ಕಾಲದಲ್ಲಿ ನಿನ್ನ ನಾನರಿಯದೆ ಭವದಲ್ಲಿ ಬಂದೆನೊ**

**.........................................................**

**ಎನ್ನ ಪೊರೆದು ಪಾಲಿಸೊ ದೀನನಾಥ ಶ್ರೀರಂಗವಿ 'ಲ।**

ಎಂದಿದ್ದಾರೆ.

ಅಷ್ಟೇ ಅಲ್ಲ ತಮ್ಮ ಮತ್ತೊಂದು ಕೀರ್ತನೆಯಲ್ಲಿ ದಿನ ನಿತ್ಯದ ಎಲ್ಲಾ ಚಟುವಟಿಕೆಗಳೂ ಭಗವದರ್ಪಿತವಾಗಿ ನಿನ್ನ ಪೂಜೆಯೇ ಆಗಿದೆ ಎಂದಿದ್ದಾರೆ.

**ನಿನ್ನ ಪೂಜೆಯಾ-ರಾಮ**
**ನಿನ್ನ ಪೂಜೆ ಹೊರತಿಲ್ಲ**
**ಎನ್ನ ವ್ಯಾಪಾರವೆಲ್ಲ ಯಾಕೆ ಪುಟ್ಟಿಸಿದಿ ನೀ**
**ಸಾಕಲಾರದೆ ಜಗದೇಕ ಕಾರಣ ಪುರುಷನೆ ಕೃಷ್ಣ**

ಎಂದು ಆರಂಭವಾಗುವ ಶ್ರೀಪಾದರಾಜರ ಸುದೀರ್ಘ ಕೃತಿಯೊಂದು ಮನಸ್ಸಿನ ತಳಮಳ-ತೊಳಲಾಟಗಳನ್ನೆಲ್ಲ ಒಟ್ಟುಗೂಡಿಸಿ ಕೃಷ್ಣನಾಮ ವಜ್ರಕ್ಕೆ ಬೆಟ್ಟ ದುರಿತವು ಥಟ್ಟನೆ ನೀಗುವುದೆಂದು ಅಚಲ ನಂಬಿಕೆಯೊಂದಿಗೆ ಶ್ರೀಕೃಷ್ಣನ ಪಾದ ಕಮಲಗಳಿಗೆ ಅರ್ಪಿಸಿ ಬಿಟ್ಟಿರುವ ನಿರ್ಲಿಪ್ತ-ನಿವೇದನಾ ಪೂರ್ವಕ ನಿಲುವನ್ನು ದರ್ಶಿಸುತ್ತದೆ. ಇದನ್ನು ದಿದರೆ ಕೃಷ್ಣನೊಂದಿಗೇ ಶ್ರೀಪಾದರಾಜರು ಪ್ರತ್ಯಕ್ಷವಾಗಿ ಮಾತನಾಡುತ್ತಿರುವಂತೆ ಭಾಸವಾಗುತ್ತದೆ.

**"ಅವರ ಭಕ್ತಿ ಬೇಕು ವಿರಕ್ತಿ ಬೇಕು ಸರ್ವಶಕ್ತಿಬೇಕು ಮುಂದೆ ಮುಕ್ತಿಯ ಬಯಸುವಗೆ"** ಎಂಬ ಕೃತಿಯು ಮುಕ್ತಿ ಮಾರ್ಗ ಪಥಿಕರಿಗೆ ಮಾರ್ಗ ತೋರುವ ಕೃತಿಯಾಗಿದೆ. ಮುಕ್ತಿಯನ್ನು ಬಯಸುವ ಜೀವನು ಭಕ್ತಿ-ವಿರಕ್ತಿ-ಸರ್ವ ಶಕ್ತಿಗಳನ್ನೂ ಒಂದು ಗೂಡಿಸಿಕೊಂಡು, ಸಂಸಾರದ ನೆರವಿನೊಂದಿಗೆ, ಜಪ-ತಪ-ನೇಮ-ವ್ರತಾದಿಗಳಲ್ಲಿ ಹೊಂದಾಣಿಕೆ ತಂದು ಮನಸ್ಸನ್ನು ಶಾಂತಗೊಳಿಸಿ ದುಸ್ಸಂಗ ರಹಿತನಾಗಿ ರಂಗವಿ 'ಲನನ್ನು ಬಿಡದೆ ಅವನಲ್ಲಿ ಅಚಲವಾದ ನಂಬಿಕೆ ಹೊಂದಿರಬೇಕೆನ್ನುತ್ತಾರೆ ಶ್ರೀಪಾದರಾಜರು. ವ್ಯರ್ಥವಲ್ಲವೆ ಜನ್ಮ ವ್ಯರ್ಥವಲ್ಲವೆ ಎಂಬ ರಚನೆಯಲ್ಲಿ ಮನುಷ್ಯನು ತನ್ನ ಜನ್ಮವನ್ನು ಸಂಪನ್ನವಾದ ಸದಾಚಾರ ನೇಮಗಳಿಂದ ಸಾರ್ಥಕ ಪಡಿಸಿಕೊಳ್ಳುವ ಬಗೆಯನ್ನು ಅರುಹಿದ್ದಾರೆ. ಶ್ರೀಪಾದರಾಜರ **'ಮಧ್ವನಾಮ'** ವು ಹನುಮ-ಭೀಮ-ಮಧ್ವರ ಅವತಾರದ ಹಿರಿಮೆಯನ್ನು ಸುದೀರ್ಘವಾಗಿ ಬಣ್ಣಿಸಿದೆ. ಅವರ **'ಶ್ರೀಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ'** ವು ಭಾಗವತವನ್ನು ಅವಲಂಬಿಸಿರುವ ಸುದೀರ್ಘಕೃತಿಯಾಗಿದೆ. ಶ್ರೀಕೃಷ್ಣನ ಲೀಲಾ ವಿಲಾಸಗಳನ್ನು ಗೋಪ-ಗೋಪಿಕೆಯರನ್ನು ನಿಮಿತ್ತವಾಗಿಸಿಕೊಂಡು ಅನೇಕ ಕೃತಿಗಳನ್ನು ಶ್ರೀಪಾದರಾಜರು ರಚಿಸಿದ್ದಾರೆ. ಅಲ್ಲೆಲ್ಲ ಮಧುರ, ವಾತ್ಸಲ್ಯ, ವಿರಹ

ಭಾವಗಳ ಸ್ಪರ್ಶವಿದೆ. ತೀರ್ಥ ಕ್ಷೇತ್ರಗಳ ಸಂದರ್ಶನ ನಿಮಿತ್ತ ಕೃತಿಗಳಲ್ಲಿ ‘ಕಂಗಳಿದ್ಯಾತಕೊ ಕಾವೇರಿ ರಂಗನ ನೋಡದ ಅತ್ಯಂತ ಪ್ರಸಿದ್ಧ ಹಾಗೂ ಮಧುರವಾಗಿದೆ. ಶ್ರೀ ಪಾದರಾಜರು ತಮ್ಮ ಕೃತಿಗಳಲ್ಲಿ ಗೋವಿಂದನಿಗೆ ಲಾಲಿ ಹಾಡಿದ್ದಾರೆ. ರಂಗ ಧಾಮನಿಗೆ ಜೋಗುಳವಾಡಿದ್ದಾರೆ. ಕಡೆಯಲ್ಲಿ, ಅವರು ಘಂಟಾ ಘೋಷವಾಗಿ ಸಾರಿರುವ ಸತ್ಯವೊಂದನ್ನು ಮನಕ್ಕೆ ತಂದು ಕೊಳ್ಳಬೇಕು.

**ಸ್ಮರಿಸಿದವರನು ಕಾಯ್ವ ನಮ್ಮ ಸೂರ್ಯನೇಕ**
**ಪ್ರಭಾವ ಜಯರಂಗವಿ ’ಲ ಕರುಣಾ ವಿಲಾಸ**

ವೈಕುಂ ’ದಿಂದ ಬಂದು ಶೇಷಾಚಲ ಕ್ಷೇತ್ರದಲ್ಲಿ ನಿಂದು, ಅಭಯನೀಡುತ್ತಾ ಭಕ್ತರ ಪಾಲಿಸುತ್ತ, ಕಲಿಯುಗದಲ್ಲಿ ಪರಿ ಪರಿ ಲೀಲಾವಿಲಾಸ ವೈಭವ ತೋರುತ್ತಿರುವ ಶ್ರೀವೇಂಕಟೇಶ ನಲ್ಲಿ **‘ಹರೇ ವೇಂಕಟ ಶೈಲವಲ್ಲಭ ಪೊರೆಯಬೇಕು ಎನ್ನ ’** ಎಂದು ಶ್ರೀಪಾದರಾಜರು ಶರಣಾಗಿದ್ದಾರೆ. ನಾವೂ ಕೂಡ ಶ್ರೀನಿವಾಸನ, ಶ್ರೀವೇಂಕಟೇಶನ ಪಾದಕಮಲಗಳಿಗೆ ಶರಣಾಗಿ, ಅವನನ್ನು ಕಾಣುವ ಭಾಗ್ಯದ ದಾರಿ ತೋರಿದ ಶ್ರೀಪಾದರಾಜ ಯತಿಗಳಿಗೆ **‘ಜಯತು ಜಯತು’** ಎನ್ನೋಣ.



# ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 01-06-2025 | ಭಾನುವಾರ | --- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 02-06-2025 | ಸೋಮವಾರ | ತಿರುಚ್ಚಿ ಉತ್ಸವ , ಧಜಾರೋಹಣ | ದೊಡ್ಡಶೇಷವಾಹನ |
| 03-06-2025 | ಮಂಗಳವಾರ | ಚಿಕ್ಕಶೇಷವಾಹನ | ಹಂಸವಾಹನ |
| 04-06-2025 | ಬುಧವಾರ | ಂಹವಾಹನ | ಮುತ್ತಿನಚಪ್ಪರವಾಹನ |
| 05-06-2025 | ಗುರುವಾರ | ಕಲ್ಪವ ಕ್ಷವಾಹನ | ಸರ್ವಭೂಪಾಲವಾಹನ |
| 06-06-2025 | ಶುಕ್ರವಾರ | ಪಲ್ಲಣಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 07-06-2025 | ಶನಿವಾರ | ಹನುಮದಾಹನ, ಸಾ॥ ವಸಂತೋತ್ಸವ | ಗಜವಾಹನ |
| 08-06-2025 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 09-06-2025 | ಸೋಮವಾರ | ರ ೋತ್ಸವ | ಅಶಾಹನ |
| 10-06-2025 | ಮಂಗಳವಾರ | ಪಲ್ಲಣ ಉತ್ಸವ, ತೀ ’ವಾರಿ, ಅವಭ ’, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧಜಾವರೋಹಣ |

ಜೂನ್ 21 ವಿಶ್ವ ಯೋಗ ದಿನದ ಪ್ರಯುಕ್ತ

# ಯೋಗ – ಸ್ವಸ್ಥ ವಿಶ್ವಕ್ಕೆ ಭಾರತದ ಕೊಡುಗೆ

-ಶ್ರೀಮತಿ. ಕೆ. ವಿ. ಪದ್ಮಾವತಿ
97437 22327




ಯೋಗವೆಂದರೆ ಶಾರೀರಿಕ ವ್ಯಾಯಾಮವಲ್ಲ. ಅದು ಮನಸ್ಸಿನ ಸಂಭ್ರಮವನ್ನು ಸಾಧನ. ಯೋಗಾಭ್ಯಾಸದಿಂದ ಬಾಹ್ಯ ಜಗತ್ತನ್ನು ನೋಡುವ ನಮ್ಮ ದೃಷ್ಟಿಕೋನ ಬದಲಾಗುವುದಿಲ್ಲ. ಬದಲಿಗೆ ನಾವೇ ಬದಲಾಗುತ್ತೇವೆ. ಯೋಗ ಅಂತರ್ಯದ ಅರಿವನ್ನು ಹೆಚ್ಚಿಸುತ್ತದೆ. ಅಧ್ಯಾತ್ಮಯಾನದಲ್ಲಿ ಸಾರ್ಥಕತೆ ಹೊಂದುವಂತೆ ಮಾಡುತ್ತದೆ.

**"ಹಿತ್ತಲ ಗಿಡ ಮದ್ದಲ್ಲ"** ಎಂಬ ನಾಣ್ಣುಡಿಯಂತೆ ಅದು ಮದ್ದಾಗುವುದು, ಹೊರಗಿನವರು ಆ ಗಿಡವನ್ನು ಆರಿಸಿ ಕೊಂಡಾಗ, ವಿದೇಶಿಯರು ತಮ್ಮ ಆತ್ಮ ಶಾಂತಿ, ದೇಹಸ್ವಾಸ್ಥ್ಯಕ್ಕಾಗಿ ಭಾರತದ ಯೋಗವಿದ್ಯೆಯ ಕಡೆ ತಿರುಗಿ ನೋಡುತ್ತಿರುವಾಗ, ನಮಗೆ ನಮ್ಮಲ್ಲೊಂದು ಇಂತಹ ಮಹಾವಿದ್ಯೆ ಇದೆ ಎಂಬ ಅರಿವುಂಟಾಗಿದೆ.

ನಾವೂ ಕಲಿಯಬೇಕೆಂಬ ಎಚ್ಚರ ಉಂಟಾಗಿದೆ. ಗಾಳಿ, ನೀರಿನಂತೆ, ಆಹಾರ ಪಾನೀಯಗಳಂತೆ ಯೋಗ ಸಾಧನೆಯೂ ಆರೋಗ್ಯ ಜೀವನಕ್ಕೆ ಅತ್ಯಾವಶ್ಯಕ. ಸತ್ವಹೀನ ಆಹಾರ,ಪರಿಸರ ಮಾಲಿನ್ಯ, ಪ್ರಕ್ಷುಬ್ಧ ವಾತಾವರಣಗಳ ಇಂದಿನ ಸನ್ನಿವೇಶದಲ್ಲಿ ಗಂಡು ಹೆಣ್ಣೆನ್ನದೆ ಸರ್ವರೂ ಕ್ಷಣ - ಕ್ಷಣಕ್ಕೂ ಉದ್ವಿಗ್ನತೆಯಿಂದ ಬಳಲಿ ಬೆಂಡಾಗುತ್ತಿರುವಾಗ, ಮನಃಶಾಂತಿ ಆತ್ಮಕಲ್ಯಾಣಕ್ಕಾಗಿ, ಯೋಗ ಮಾರ್ಗವೇ ಜೀವನ್ಮುಕ್ತಿಗೆ ದಾರಿದೀಪವಾಗಿದೆ.

ಯೋಗವು ಶಿಸ್ತನ್ನು ಕಲಿಸುತ್ತದೆ. ದೇಹ ಮತ್ತು ಮನಸ್ಸುಗಳನ್ನು ಹತೋಟಿಯಲ್ಲಿಡುವ ವಿಧಾನವನ್ನು ಬೋಧಿಸುತ್ತದೆ. ಎಲ್ಲ ಸಮಸ್ಯೆಗಳನ್ನು ದೂರವಿಡುತ್ತದೆ. ಇಂತಹ ಬಹು ಉಪಕಾರಿಯಾದ ಯೋಗವನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಾನಸಿಕ ಒತ್ತಡವನ್ನು ದೂರ ಮಾಡಲು ಇರುವ ದಿವ್ಯೌಷದ ಯೋಗ. ಯೋಗ ಒಂದು ವಿಶಿಷ್ಟ ಸಾಧನ, ದಿನನಿತ್ಯ ಯೋಗಾಭ್ಯಾಸ ಮಾಡುವುದರಿಂದ ಯೋಗ ಮತ್ತು ಆಯುರ್ವೇದ ಮೊಟ್ಟಮೊದಲು ಪ್ರಾರಂಭವಾಗಿದ್ದು ಭಾರತದೇಶದಲ್ಲೇ, ಇವುಗಳ ಪ್ರಯೋಜನವನ್ನು ಪಡೆದುಕೊಳ್ಳುತ್ತಿರುವುದು ಮಾತ್ರ ಬೇರೆ ಬೇರೆ ದೇಶದ ಜನರು. ಆಯುರ್ವೇದದ ವಿಜ್ಞಾನವು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಪೂರ್ವ ಮೀಮಾಂಸ ಮತ್ತು ಉತ್ತರ ಮೀಮಾಂಸ ಅಥವಾ ವೇದಾಂತಗಳೆಂಬ ದರ್ಶನಗಳನ್ನೊಳಗೊಂಡ ವಿಜ್ಞಾನ. ಯೋಗಶಾಸ್ತ್ರವು ಆಯುರ್ವೇದದ ಒಂದು ವಿಭಾಗ ಎಂದರ್ಥ. ಅಂತೆಯೇ ಯೋಗಶಾಸ್ತ್ರದ ಸೂತ್ರಧಾರಿ ಪತಂಜಲಿ ಮಹರ್ಷಿಯನ್ನು ಸ್ಮರಿಸುತ್ತೇವೆ. ಯೋಗ ಶಾಸ್ತ್ರದಲ್ಲೇ ಚಿಕಿತ್ಸಾಶಾಸ್ತ್ರವೂ ಅಡಗಿದೆ.

ಆದುದರಿಂದ ವೈದ್ಯನಾದವನಿಗೆ ಯೋಗಶಾಸ್ತ್ರದ ಪರಿಜ್ಞಾನವಿರುವುದೂ, ಯೋಗಿ ಯಾದವನಿಗೆ ವೈದ್ಯಶಾಸ್ತ್ರದ ಅನುಭವವಿರುವುದೂ ಅಗತ್ಯ. ಹವಾಮಾನ, ವಯೋಮಾನ ಇವುಗಳನ್ನು ಅನುಸರಿಸಿ, ಅಗತ್ಯವಿದ್ದಲ್ಲಿ ಕೆಲವು ಔಷಧಿಗಳನ್ನು ರೋಗಕ್ಕನುಸಾರವಾಗಿ ನೀಡಬೇಕು. ಆತನ ಮಾನಸಿಕ ಸ್ಥಿತಿ, ವಯಸ್ಸನ್ನು ಹಾಗೂ ಚಿಕಿತ್ಸಿಸುವ ಕಾಲವನ್ನು ಮುಂದಿಟ್ಟು ಕೊಂಡು ಪ್ರಥಮವಾಗಿ ಯಮ, ನಿಯಮಗಳ ಪರಿಜ್ಞಾನವನ್ನು ಆತನಿಗೆ ತಿಳಿಸಿ, ಯೋಗ ಚಿಕಿತ್ಸೆಯನ್ನು ಪ್ರಾರಂಭಿಸುವುದು ಒಳ್ಳೆಯದು.

ರೋಗಿಗಳು ಯಾವ ದೇಹಭಾಗಕ್ಕೆ ಚಿಕಿತ್ಸೆಬೇಕು ಎಂಬ ಮೂಲ ಅರಿವು ಚಿಕಿತ್ಸಕನಿಗೆ ಅಗತ್ಯ ಎಂಬುದನ್ನು ಮೂಲತಃ ತಿಳಿದು ಕೊಂಡು, ಅದಕ್ಕನುಸರಿಸಿ,ಶಾಸ್ತ್ರೋಕ್ತವಾಗಿ ಅಗತ್ಯವಿರುವ ಆಸನಗಳನ್ನು ಕಲಿಸಿಕೊಡಬೇಕು. ಅದನ್ನು ರೋಗಿಯಿಂದ ನಿತ್ಯ ಅಭ್ಯಾಸ ಮಾಡಿಸಬೇಕು. ಇದರಿಂದಾಗಿ ಅಗತ್ಯವಿರುವ ಮಾಂಸ ಖಂಡಗಳು ಸ್ವಸ್ಥ ಸ್ಥಿತಿಯನ್ನು ಪಡೆದು ರೋಗಪ್ರತಿಬಂಧಕ ಹಾಗೂ ರೋಗ ಗುಣವಾಗಲು ಅನುಕೂಲವಾಗುವುದು. ಮಾನವ ಜೀವನಕ್ಕೆ ಅತ್ಯಂತ ಮೂಲಭೂತ ವಸ್ತುವೆಂದರೆ ಗಾಳಿ, ಈ ಗಾಳಿಯನ್ನು ದೇಹದ ಒಳಗೆ ಸೇವಿಸುವ, ದೇಹದಲ್ಲಿ ಧಾರಣೆ ಮಾಡುವ, ದೇಹದಿಂದ ಹೊರಗೆ ಹಾಕುವ ಕ್ಷಮೆಗಳಿಗೆ ಯೋಗಶಾಸ್ತ್ರದಲ್ಲಿ ಪೂರಕ, ಕುಂಭಕ, ರೇಚಕಗಳೆಂಬ ಹೆಸರುಗಳಿವೆ. ಕ್ರಮಬದ್ಧವಾಗಿ ಆಚರಿಸುವ ಈ ಕ್ರಮಕ್ಕೆ **"ಪ್ರಾಣಾಯಾಮ"** ಎಂಬ ಹೆಸರೂ ಯೋಗ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಪ್ರಾಣಾಯಾಮದ ಬೇರೆ ಬೇರೆ ವಿಧಗಳನ್ನು ಕ್ರಮವಾಗಿ ಅಭ್ಯಾಸ ಮಾಡುವ ವಿಧಾನಗಳನ್ನೂ ಯೋಗಶಾಸ್ತ್ರ ವಿವರಿಸಿದೆ.

ಮಾನವಕುಲದಲ್ಲಿ ಬರತಕ್ಕ ಎಲ್ಲಾ ವ್ಯಾಧಿಗಳಿಗೂ ಯೋಗದಿಂದಲೇ ಚಿಕಿತ್ಸೆ ದೊರಕುವುದು ಸಾಧ್ಯವಿಲ್ಲ. ಆದರೆ ಯೋಗಾಭ್ಯಾಸವನ್ನು ಕ್ರಮವಾಗಿ ಆಚರಿಸುವ ವ್ಯಕ್ತಿಯು ನಿರೋಗಿಯಾಗಿ ಬಾಳಬಹುದೆಂಬುದು ಅನುಭವ. ಯೋಗ ವನ್ನು ದಿನನಿತ್ಯ ಮಾಡುವುದರಿಂದ ನೂರಾರು ಮಾನಸಿಕ ಚಿಂತೆ ಗಳು/ಸಮಸ್ಯೆಗಳು ಮಾಯವಾಗಿ ಮನಸ್ಸು ಪ್ರಫುಲ್ಲವಾಗಿರುತ್ತದೆ. ಯೋಗಾಸನ, ಪ್ರಾಣಾಯಾಮಗಳ ಜೊತೆಗೆ ಧ್ಯಾನ, ಭಕ್ತಿಯೋಗ ಮತ್ತು ಜ್ಞಾನಯೋಗಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಮಾನಸಿಕ ಸ್ವಾಸ್ಥ್ಯ, ದೈಹಿಕ ಆರೋಗ್ಯವನ್ನು ಪಡೆದುಕೊಳ್ಳಬಹುದಾಗಿದೆ.

**ಯೋಗ ವ್ಯಾಖ್ಯೆಗಳು :** ಯೋಗವನ್ನು ಕುರಿತಂತೆ ಹಲವಾರು ವ್ಯಾಖ್ಯೆಗಳು ಬಹು ಹಿಂದಿನಿಂದಲೂ ಲಭ್ಯವಿದೆ. ನಾವಿಲ್ಲಿ ಮುಖ್ಯವಾಗಿ ನಾಲ್ಕು ವ್ಯಾಖ್ಯೆ ಗಳನ್ನು ಗಮನಿಸಬಹುದು. **"ಯೋಗಃ ಕರ್ಮಸು ಕೌಶಲಂ"** ಇದನ್ನು ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಹೇಳಿರುವಂತೆ ಕೆಲಸದಲ್ಲಿ ಕುಶಲತೆ ಪಡೆಯುವುದೇ ಯೋಗವೆನಿಸಿಕೊಳ್ಳುತ್ತದೆ. **"ಸಮತ್ವಂ ಯೋಗ ಮುಚ್ಯತೇ"** ಜೀವನದಲ್ಲಿ ನೋವು-ನಲಿವು ಸಿಹಿ-ಕಹಿ ಉಷ್ಣ-ಶೀತ, ಕತ್ತಲೆ-ಬೆಳಕು ಇತ್ಯಾದಿ ದ್ವಂದ್ವಗಳು ವ್ಯಾಪಕ, ನಿರಂತರ. ಈ ದ್ವಂದ್ವಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಧರ್ಮವನ್ನು ರೂಪಿಸಿಕೊಳ್ಳುವುದು. ದುಃಖ ಬಂದಾಗ ಕುಗ್ಗದೆ, ಸುಖ ಬಂದಾಗ ಮೈಮರೆಯದೆ ಅವೆರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಧರ್ಮವನ್ನು ರೂಪಿಸಿಕೊಳ್ಳುವುದೇ ಯೋಗ.

**'ಯೋಗ ಪಿತಾಮಹಾ'** ಎಂದು ಕರೆಸಿಕೊಳ್ಳುವ ಪತಂಜಲಿ ಮಹಾ ಮುನಿಗಳು ಯೋಗಶ್ಚಿತ್ತವೃತ್ತಿನಿರೋಧಃ ಎಂದು ವ್ಯಾಖೆಯನ್ನು ಮುಂದಿಟ್ಟಿದ್ದಾರೆ. ಯೋಗ ಎಂದರೆ ಚಿತ್ತವೃತ್ತಿಗಳು ನಿರೋಧ. ಪ್ರಮಾಣ, ವಿಪರ್ಯಯ ವಿಕಲ್ಪ, ನಿದ್ರಾ, ಸ್ಮೃತಿ ಎಂಬ ಚಿತ್ತವೃತ್ತಿಗಳು ಮತ್ತು ದುಃಖಕ್ಕೆ ಕಾರಣ ವಾದ ಅವಿದ್ಯಾ,ಅಸ್ಮಿತಾ,ರಾಗ, ದ್ವೇಷ ಅಭಿನಿವೇಶ ಮುಂತಾದ ಕ್ಲೇಶಗಳ, ವ್ಯಾದಿ (ವೈಷಮ್ಯ), ಸ್ತ್ಯಾನ (ಸೋಮಾರಿತನ), ಸಂಶಯ (ಅನುಮಾನ) ಪ್ರಮಾದ (ಆತುರತೆ) ಆಲಸ್ಯ (ಜಡತ್ವ) ಅವಿರತಿ (ನಿರಾಸಕ್ತಿ) ಭ್ರಾಂತಿ ದರ್ಶನ (ಭ್ರಾಂತಿ),ಅಲಬ್ಧಭೂಮಿಕತ್ವ (ಮನಸ್ಸು ಏಕಾಗ್ರತೆಯಿಲ್ಲ ದಿರುವುದು), ಅನವಸ್ಥಿತತ್ವ (ಏಕಾಗ್ರತೆ ಬಹುಕಾಲ ಉಳಿಯದಿರುವುದು) ಮುಂತಾದ ಚಿತ್ತ ವಿಕ್ಷೇಪಗಳನ್ನು ನಿಯಂತ್ರಣಗೊಳಿಸುವುದೇ ಯೋಗ. **"ಮನಃ ಪ್ರಶಮನೋಪಾಯಃ ಯೋಗಃ ಇತ್ಯಭಿಧೀ ಯತೇ"** ಅರ್ಥಾತ್ ಮನಸ್ಸನ್ನು ಪ್ರಶಮನಗೊಳಿಸುವ, ಶಾಂತಗೊಳಿಸುವ, ಉಪಾಯವೇ ಯೋಗ ಎನ್ನುವ ವಸಿಷ್ಠರ ಸೂತ್ರ.

**ಯೋಗಫಲಗಳು :** ನಿರ್ದಿಷ್ಟವಾದ ಒಂದು ಗುರಿ ತಲುಪಲು ವಿವಿಧ ಮಾರ್ಗಗಳು ಇರುವಂತೆಯೆ ಯೋಗದಲ್ಲಿಯೂ, ಜೀವಾತ್ಮ ಪರಮಾತ್ಮ ಸಂಯೋಗ ಹೊಂದಲು ಹಲವಾರು ಮಾರ್ಗಗಳಿವೆ. ಅವುಗಳಲ್ಲಿ ಕರ್ಮ ಯೋಗ,ಭಕ್ತಿಯೋಗ, ಜ್ಞಾನಯೋಗ, ಇವು ಪ್ರಮುಖವಾಗಿದೆ.

**ಕರ್ಮಯೋಗ :** ನಾವು ಮಾಡುವ ಕೆಲಸಗಳಿಗೆಲ್ಲಾ ಫಲ ಉಂಟು. ಆದರೆ ಫಲದ ಕಡೆ ಗಮನ ನೀಡಕೂಡದು. ಇದನ್ನೇ **'ನಿಷ್ಕಾಮ ಕರ್ಮ'** ವೆಂತಲೂ ಕರೆಯುತ್ತಾರೆ ಮಾಡುವ ಕೆಲಸದಲ್ಲಿ ವ್ಯಾಮೋಹವಿಲ್ಲದ



ಮನೋಭಾವ ಇದ್ದಾಗ ಮನಸ್ಸು ಕರ್ಮಗಳ ಬಂಧನದಿಂದ ಮುಕ್ತವಾಗಿರುವುದು. ಆಗ ಮನಸ್ಸು ಸ್ಥಿರತೆ ಮತ್ತು ಶಾಂತಿಯಿಂದ ಕೂಡಿರುತ್ತದೆ, ಇದೇ ಕರ್ಮಯೋಗ.

**ಭಕ್ತಿ ಯೋಗ :** ಅಧ್ಯಯನ, ತರ್ಕ ಜಿಜ್ಞಾಸೆ ನಮ್ಮಿಂದ ಸಾಧ್ಯವಿಲ್ಲ ಎಂದಾದರೆ ಮತ್ತೊಂದು ಮಾರ್ಗವನ್ನು ನಾವು ಆರಿಸಿಕೊಳ್ಳಬಹುದು. ಅದು ಭಕ್ತಿಯಿಂದ ನಾವು ಸ್ವಭಾವತಃ ಭಾವುಕರಾಗಿದ್ದಲ್ಲಿ, ದೇವರು-ಧರ್ಮ ಇತ್ಯಾದಿಗಳ ಬಗ್ಗೆ ಗಮನ ನೀಡಬಲ್ಲರಾಗಿದ್ದಲ್ಲಿ ಭಕ್ತಿಯೋಗದ ಮಾರ್ಗದಲ್ಲಿ ಮುನ್ನಡೆದು ಗುರಿ ತಲುಪಬಹುದು. ಆಸ್ತಿ, ಅಂತಸ್ತು, ಅಧಿಕಾರಗಳು ಗೌಣ, ಭಕ್ತಿ, ಭಾವನೆಗಳೇ ಇಲ್ಲಿ ಪ್ರಧಾನ, ಭಜನೆ ಪ್ರಾರ್ಥನೆ, ಪೂಜೆ, ಹೋಮ, ಹವನ, ಜಪ, ತಪ, ಧ್ಯಾನ, ಮೌನ ಈ ಮಾರ್ಗಗಳ ಮೂಲಕ ಗುರಿ ತಲುಪುವುದೇ ಭಕ್ತಿಯೋಗ. ಶ್ರೀನಿವಾಸನಾಯ್ಕರಿಗೆ ಜೀವನದಲ್ಲಿ ಯಾವ ಕೊರತೆಯಿತ್ತು ಹೇಳಿ? ಹತ್ತು ತಲೆಮಾರು ಕುಳಿತು ಊಟ ಮಾಡಿದರೂ ಕರಗದಷ್ಟು ಸಂಪತ್ತು ಅವರಲ್ಲಿತ್ತು ಒಂದರ್ಥದಲ್ಲಿ ಅವರು ನವಕೋಟಿ ನಾರಾಯಣ. ಆದರೆ ಅವೆಲ್ಲವನ್ನೂ ಬಿಟ್ಟು ಪುರಂದರದಾಸರಾಗಿ ಹೊರ ಬಂದುದೇಕೆ? ರಾಜ್ಯದ ಒಡೆಯನಾಗಿದ್ದ ಕನಕದಾಸರು ದಾಸರಾಗಿ ಹೊರ ಬಂದುದೇಕೆ? ಅಕ್ಕಮಹಾದೇವಿ ಕೌಶಿಕನ ಪತ್ನಿಯಾಗಿ ಮೆರೆಯಬಹುದಾದವಳು, ಎಂತ ಮೀರಾಬಾಯಿ ರಾಜಸ್ಥಾನದ ರಾಜ ಕುಮಾರಿಯಾಗಿ ಸುಖ ಅನುಭವಿಸಬಹುದಾದವಳು. ಇದನ್ನೆಲ್ಲಾ ತಮ್ಮ ತೊರೆದು ಭಕ್ತಿ ಮಾರ್ಗದಲ್ಲಿ ಮುನ್ನಡೆದರು ಜನ ಜ್ಯಾತಿಗೊಳಿಸಿದರು ಭಕ್ತಿಯಲ್ಲೇ ಮೆರೆದು ಆ ಮೂಲಕ ಗುರಿ ತಲುಪಿದವರು.

**ಜ್ಞಾನಯೋಗ:** ವೇದ,ಉಪನಿಷತ್ತು,ಪುರಾಣ,ಇತಿಹಾಸಗಳ ಅಧ್ಯಯನದ ಮೂಲಕ, ಸಜ್ಜನರ ಸಹವಾಸ, ಸತ್ಸಂಗ,ತರ್ಕ,ಮೀಮಾಂಸೆ ಇತ್ಯಾದಿ ಮಾಧ್ಯಮಗಳ ಮೂಲಕ ನಾನು ಯಾರು? ನನ್ನ ಕೈ, ಕಾಲು, ನನ್ನ ಕಣ್ಣು ಇವುಗಳೆಲ್ಲದರ ಹಿಂದಿರುವ 'ನಾನು ಯಾರು, ಈ ಸೃಷ್ಟಿಯ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುವ ಶಕ್ತಿ ಯಾವುದು? ಆ ಶಕ್ತಿಗೂ ಜೀವಾತ್ಮನಿಗೂ ಇರುವ ಸಂಬಂಧ ವೇನು? ಎಂಬ ಇತ್ಯಾದಿ ವಿಷಯಗಳ ಬಗ್ಗೆ ಅಧ್ಯಯನ ತರ್ಕ, ಜಿಜ್ಞಾಸೆಗಳ ಮಾರ್ಗದಲ್ಲಿ ಮುಂದುವರೆದು ಗುರಿ ತಲುಪುವುದೇ ಜ್ಞಾನಯೋಗ ಶಂಕರ,ರಾಮಾನುಜಾಚಾರ್ಯರೇ, ಮಧ್ವ, ಮೊದಲಾದ ತತ್ವಜ್ಞಾನಿಗಳು, ದಾರ್ಶನಿಕರು ಈ ಪಥದಲ್ಲಿ ಮುನ್ನಡೆದವರು.

### ಶಿಸ್ತಿನ ಪ್ರತಿರೂಪ

ಯೋಗವು ಒಂದು ಜ್ಞಾನ. ಇದು ದೇಹ, ಉಸಿರು, ಮನಸ್ಸು, ಆತ್ಮ ಹಾಗೂ ಅಂತಿಮವಾಗಿ ಪೂರ್ತಿ ಬ್ರಹ್ಮಾಂಡ ದೊಂದಿಗೆ ವ್ಯವಹರಿಸುತ್ತದೆ. ಜನ ಯೋಗವನ್ನು ಕೇವಲ ಭೌತಿಕ ಶರೀರಕ್ಕೆ ಮಾತ್ರ ಸಂಬಂಧಿಸಿದ ಸಂಗತಿ ಎಂದು ಆಲೋಚಿಸುತ್ತಾರೆ.

ಯೋಗವು ಪ್ರಯೋಗ ಮತ್ತು ಸಿದ್ಧಾಂತಗಳನ್ನು ಒಳಗೊಂಡಿರುವ ಶಿಸ್ತು. ಜ್ಞಾನದ ಇತರ ವಿಷಯಗಳಂತೆ ಇದೂ ಒಂದು ಶಿಸ್ತಿನ ಅಧ್ಯಯನ ಮತ್ತು ಸಾಧನೆ. ಹಾಗಾಗಿ ಇದೂ ಒಂದು ಜ್ಞಾನವೇ.

ಪತಂಜಲಿಯ ಯೋಗಸೂತ್ರವು, ನೀವು ಏನು ಮಾಡಬೇಕು. ಏನು ಮಾಡಬಾರದು ಎಂಬುದಾಗಿ ಹೇಳುವುದಿಲ್ಲ, ಆದರೆ ಹೇಗೆ ಮಾಡಬೇಕು ಎಂಬುದನ್ನು ಉಪದೇಶಿಸುತ್ತದೆ. ಅದು ನೋವುಗಳು ಹಾಗೂ ಸಂಕಟಗಳಿಂದ ನೀವು ಮುಕ್ತರಾಗಲು ನಿಮಗೆ ನೆರವಾಗುತ್ತದೆ ಮತ್ತು ನೋವುಗಳು ಹಾಗೂ ಸಂಕಟಗಳಿಂದ ಮುಕ್ತವಾದ ಸ್ಥಿತಿಯನ್ನು ಪಡೆಯಲು ನೆರವಾಗುತ್ತದೆ.

ವಿದೇಶಿಯರಲ್ಲಿ ಭಾರತ ಎಂಬ ಪದ ಕೇಳಿದಾಕ್ಷಣ ನೆನಪಿಗೆ ಬರುವುದೇ ಆಧ್ಯಾತ್ಮ. ಅದೇ ಭಾರತೀಯರ ಶಕ್ತಿ. ಆಧ್ಯಾತ್ಮಕ್ಕೆ ತವರೂರಾಗಿರುವ ನಮ್ಮ ದೇಶದಲ್ಲಿ ಎಲ್ಲ ರೀತಿಯ ಬಾಧೆಗಳಿಗೂ ಒಂದೇ ಅಸ್ತ್ರವಿದೇ ಅದೇ ಯೋಗ. ಉಸಿರಿನ ಮೇಲೆ ನಂಬಿಕೆ ಇಟ್ಟು ಬದುಕುವವರು ನಾವು ನಮ್ಮ ಉಸಿರಿನಲ್ಲೇ ಯೋಗವಿದೆ. ಈ ಯೋಗಕ್ಕೆ ಈಗ ರಾಜಯೋಗ ಬಂದಿದೆ. ಯೋಗದ ಮಹತ್ವ ವಿಶ್ವಮಟ್ಟದಲ್ಲಿ ಮತ್ತೆ ಸಾಬೀತಾಗಿದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

**ಕಳೆದ ಸಂಚಿಕೆಯಿಂದ**

ಮುನಿಗಳೇ! ನಿಮ್ಮ ಆಕಾಂಕ್ಷೆ ನನಗೆ ಅರ್ಥವಾಗಿದೆ. ವೆಂಕಟೇಶ್ವರ ಸ್ವಾಮಿಯ ವಿನೋದಗಳು ವಿಧವಿಧವಾಗಿವೆ. ವೆಂಕಟಾದ್ರಿಯಲ್ಲಿ ರಾಕ್ಷಸ ಸಂಹಾರವಾಗುತ್ತಿರುವಾಗ ಸ್ವಾಮಿಯು ಭೂತಳದಲ್ಲಿಯೇ ಇರಲು ನಿರ್ಧರಿಸಿದನು. ತಾನು ಪರಿಪೂರ್ಣನಾಗಿದ್ದರೂ ಶೇಷಗಿರಿವಾಸಿ ಎಂದು ಲೋಕಗಳು ಮಾತನಾಡುವಂತೆ ವರ್ತಿಸುತ್ತಿದ್ದನು. ಸ್ವಾಮಿಯು ತನ್ನ ಸ್ವಸ್ವರೂಪದಲ್ಲಿ ವಿಗ್ರಹವಾಗಿ ನಿಂತನು. ಅವನು ಮೌನಮುದ್ರೆ ತಳೆದನು. ಕರ್ಮಚಕ್ಷುವಿನ ಹೊರತು ಯಾರಿಗೂ ಗೋಚರಿಸದ ರೀತಿಯಲ್ಲಿ ಮೆರೆದನು. ಭಕ್ತರೊಂದಿಗೆ ನೇರವಾಗಿ ಮಾತನಾಡದೆ ಕನಸಿನಲ್ಲಿ ಸಾಕ್ಷಾತ್ಕರಿಸಿ ಕರ್ತವ್ಯ ಬೋಧನೆ ಮಾಡಿದನು. ಮಾಯಾರೂಪದಲ್ಲಿ, ತನ್ನ ಬಗ್ಗೆ ಅನುಕಂಪ ಬರುವಂತೆ ವರ್ತಿಸುತ್ತಾನೆ. ಭೌತಿಕ ಆಮಿಷಗಳಿಗೆ ದಾಸರಾಗಿ ಶರೀರಾದಿಗಳ ಮಮಕಾರ ಹೊಂದದೇ ತನ್ನನ್ನು ಸೇವಿಸುವ ಭಕ್ತರಿಗೆ ಮೋಕ್ಷ ವನ್ನು ದಯಪಾಲಿಸುತ್ತಾನೆ.



ಕೆಲವೊಮ್ಮೆ ವೈಕುಂ ’ದಿಂದ ತಂದ ವಿಮಾನವಾಸನಂತೆ ಕಾಣಿಸಿಕೊಳ್ಳುತ್ತಾನೆ ಮತ್ತೊಮ್ಮೆ ನೋಡಬೇಕೆನ್ನುವಷ್ಟರಲ್ಲಿ ಅಂತರ್ಧಾನನಾಗುತ್ತಾನೆ, ಮತ್ತೊಮ್ಮೆ ಆನಂದನಿಲಯನಾಗಿ ಕಾಣಿಸುತ್ತಾನೆ ಮತ್ತೊಮ್ಮೆ ಅವನು ಅಂತರ್ವಿಮಾನಸ್ಥನಾಗುತ್ತಾನೆ. ತನ್ನ ವಾಸಸ್ಥಾನವಾಗಿರುವ ವಿಮಾನವನ್ನು ದೇವತೆಗಳಿಗೆ ಮಾತ್ರ ಪ್ರಕಟ ಪಡಿಸುತ್ತಾನೆ. ಸಾಮಾನ್ಯ ಜನರ ಬಾಹ್ಯ ಪೂಜೆಯನ್ನು ಪ್ರೀತಿಯಿಂದ ಸ್ವೀಕರಿಸುತ್ತಾನೆ ದೇವತಾ ಪೂಜೆಗಳನ್ನು ರಹಸ್ಯವಾಗಿ ಸ್ವೀಕರಿಸುತ್ತಾನೆ. ಭಕ್ತಿಯಿಂದ ಕೋರುವ ಸಾಮಾನ್ಯ ಮನುಷ್ಯರಿಗೂ ವರಗಳನ್ನು ಸುರಿಸುತ್ತಾನೆ. ಜಗತ್ತೇ ಬೆರಗಾಗುವ ರೀತಿಯಲ್ಲಿ ವಿವಿಧ ಮಹಿಮೆಗಳನ್ನು ಪ್ರದರ್ಶಿಸುತ್ತಾನೆ. ಅಲ್ಪದಾನವನ್ನು ಅಧಿಕದಾನವೆಂದು ಭಾವಿಸುತ್ತಾನೆ ಸಾಮಾನ್ಯ ಪೂಜೆಗಳಿಗೆ ತೃಪ್ತನಾಗುತ್ತಾನೆ. ಅಪ್ರಾಕೃತನಾದ ಸ್ವಾಮಿಯು ಸಾಮಾನ್ಯರಂತೆ ತಿರುಗಾಡುತ್ತಾ ಜನರನ್ನು ತನ್ನತ್ತ ಸೆಳೆಯುತ್ತಾನೆ. ಅವನ ಬಳಿಗೆ ಹೋಗುವಂತೆ ವಾಂಛೆ ಹುಟ್ಟಿಸುತ್ತಾನೆ. ಒಮ್ಮೊಮ್ಮೆ ಮುಡುಪುಗಳು ಮತ್ತು ನೈವೇದ್ಯ ತರಲು ಆದೇಶಿಸಿ, ಅವುಗಳೊಂದಿಗೆ ಬರುತ್ತಾನೆ. ತಿರುಮಲೆಯಲ್ಲಿ ವಿವಿಧ ಉತ್ಸವಗಳನ್ನು ಸಂಭ್ರಮದಿಂದ ಆಚರಿಸುವವರನ್ನು ಆಶೀರ್ವದಿಸುತ್ತಾನೆ. ಉತ್ಸವಗಳ ಸಮಯದಲ್ಲಿ ದೇವತೆಗಳೇ ಸ್ವತಃಭೂಮಿಗೆ ಬಂದು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ದೇವತೆಗಳು ಅರ್ಪಿಸುವ ವಿವಿಧ ಬಗೆಯ ತಿಂಡಿತಿನಿಸುಗಳನ್ನು ಪ್ರೀತಿಯಿಂದ ಸ್ವೀಕರಿಸುತ್ತಾನೆ. ಇವೆಲ್ಲಾ ರಹಸ್ಯವಾಗಿ ನಡೆಯುವ ಸ್ವಾಮಿಯ ವಿನೋದಗಳು!

ಮಾಯಾವಿಮಾನದಲ್ಲಿದ್ದರೂ ಶಿಲಾರೂಪದಲ್ಲಿ ಆನಂದನಿಲಯನಾಗಿ ಪ್ರಕಟಗೊಳ್ಳುತ್ತಾನೆ. ಸೇವೆಯು ಚಿಕ್ಕದಾಗಿದ್ದರೂ ಅದಕ್ಕೆ ತೃಪ್ತನಾ ಆಯುರಾರೋಗ್ಯಾದಿ ಭಾಗ್ಯಗಳನ್ನು ಅನುಗ್ರಹಿಸುತ್ತಾ. ಬೆಟ್ಟಕ್ಕೆ ಬರಲಾಗದವರು ಬೆಟ್ಟದ ದಿಕ್ಕಿನಲ್ಲಿ ನಮಸ್ಕರಿಸಿದರೆ ಅನುಗ್ರಹಿಸುತ್ತಾನೆ. ತನ್ನ ಬಗ್ಗೆ ಭಕ್ತಿಯಿರುವವರನ್ನು ರಕ್ಷಿಸುತ್ತಾನೆ. ಅಂತಹ ವೈಶಿಷ್ಟ್ಯಗಳು ಮತ್ತು ಮಹಿಮೆಗಳಿಂದಾಗಿ, ದೇವತೆಗಳೂ ಸಹ ಯಾವುದಾದರೂ ರೂಪದಲ್ಲಿ ಭೂಮಿಯಲ್ಲಿ ನೆಲೆಸಲು ಬಯಸುತ್ತಾರೆ. ಕೃತ, ತ್ರೇತಾ ಮತ್ತು ದ್ವಾಪರಯುಗಗಳಲ್ಲಿ ಸ್ವಾಮಿಯ ಸಾಕ್ಷಾತ್ಕಾರವು ದುರ್ಲಭ. ಆದರೆ ಕಲಿಯುಗದಲ್ಲಿ ಮುಹೂರ್ತ ಕಾಲದಲ್ಲಿ ಸ್ಮರಿಸುವವರು ದರ್ಶಿಸುವವರಿಗೆ ಸುಪ್ರಸನ್ನನು. ಈ ರಹಸ್ಯವನ್ನು ತಿಳಿದ ವಿವಿಧ ದ್ವೀಪವಾಸಿಗಳು,ಸಕಲ ದೇಶವಾಸಿಗಳು ಸ್ವಾಮಿ ಭಕ್ತಿಯನ್ನು ವೃದ್ಧಿಸಿಕೊಳ್ಳುತ್ತಾರೆ. ಶ್ರೀವೆಂಕಟೇಶ್ವರನಿಗೆ ಸಮನಾದ

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

ದೈವ ಮತ್ತೊಂದಿಲ್ಲ. ಪುಷ್ಕರಿಣಿಗೆ ಸಮಾನವಾದ ತೀರ್ಥ ಮತ್ತೊಂದಿಲ್ಲ. ಕೃತ, ತ್ರೇತಾ, ದ್ವಾಪರ ಯುಗದಲ್ಲಿ ವೆಂಕಟಾದ್ರಿಯು ಕನಕಮಯ,ಕಲಿಯುಗದಲ್ಲಿ ಶಿಲಾಮಯ. ವೆಂಕಟಾದ್ರಿಯು ಅಂತಹ ಅನೇಕ ಮಹಿಮೆಗಳನ್ನು ಮತ್ತು ಅದ್ಭುತಗಳನ್ನು ಹೊಂದಿದೆ. ಶ್ರೀನಿವಾಸನನ್ನು ಕೇವಲ ಸ್ವಧರ್ಮೀಯರಲ್ಲದೇ, ಅನ್ಯ ಧರ್ಮೀಯರೂ ಸೇವಿಸುತ್ತಾರೆ. ಭಗವಂತನ ಮೇಲಿನ ಭಕ್ತಿಯಿಂದಾಗಿ ಅವರ ಇಷ್ಟಾರ್ಥಗಳು ಈಡೇರುತ್ತವೆ. ಕಲಿಯುಗದಲ್ಲಿ ಮನುಷ್ಯರಿಗೆ ಧಾರ್ಮಿಕ ಚಿಂತನೆ ಬಹಳ ಕಡಿಮೆ. ಹೆಚ್ಚಿನವರಿಗೆ ಧನಾರ್ಜನೆಯಲ್ಲಿಯೇ ಅಧಿಕ ಆಸಕ್ತಿ. ಸಜ್ಜನರ ಸಹವಾಸದ ಬದಲು ದುಷ್ಟರ ಸಹವಾಸವನ್ನೇ ಇಷ್ಟಪಡುತ್ತಾರೆ. ಇದರಿಂದಾಗಿ ಅವರು ಏಕ ಮನಸ್ಸಿನಿಂದ ಹರಿಯನ್ನು ಧ್ಯಾನಿಸಲಾರರು. ನಿಜವಾಗಿ ಅವರೂ ಸಹ ಬೇರೆಲ್ಲ ಚಿಂತೆಗಳನ್ನು ಬಿಟ್ಟು ಶ್ರೀನಿವಾಸನ ಸೇವೆ ಮಾಡಿದರೆ ಅವರಿಗೂ ಮುಕ್ತಿ ಸಿಗುತ್ತದೆ.

ವೈಷ್ಣವ ಧರ್ಮಕ್ಕೆ ಶರಣಾದರೆ ಮಾತ್ರ ಶ್ರೀನಿವಾಸನ ಕೃಪೆ ದೊರೆಯುತ್ತದೆ. ವರಾಹ ದೇವನು ಭೂಮಾತೆಗೆ ಹೇಳಿದ ರಹಸ್ಯವೇ ವೈಷ್ಣವ ಧರ್ಮ. ಹಾಗೆಯೇ ಸಂದರ್ಭಕ್ಕನುಸಾರ ಜೀವಬ್ರಹ್ಮ ಮಹಿಮೆಗಳನ್ನು,ಹಠಯೋಗ ಮತ್ತು ರಾಜ ಯೋಗಗಳನ್ನು ವಿವರಿಸುತ್ತಾ ಅವರು ಸಚ್ಚಿಷ್ಯಲಕ್ಷಣಗಳನ್ನು ವಿವರಿಸಿದರು.

- ಮುಂದುವರೆಯುತ್ತದೆ.



# ತಿರುಪತಿ
# ಶ್ರೀ ಅಪ್ಪಲಾಯಗುಂಟ
# ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ
# ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 06-06-2025 | ಶುಕ್ರವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 07-06-2025 | ಶನಿವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 08-06-2025 | ಭಾನುವಾರ | ಚಿಕ್ಕಶೇಷವಾಹನ | ಹಂಸವಾಹನ |
| 09-06-2025 | ಸೋಮವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 10-06-2025 | ಮಂಗಳವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 11-06-2025 | ಬುಧವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 12-06-2025 | ಗುರುವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 13-06-2025 | ಶುಕ್ರವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 14-06-2025 | ಶನಿವಾರ | ರಥೋತ್ಸವ | ಅಶ್ವವಾಹನ |
| 15-06-2025 | ಭಾನುವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |



# ಶ್ರೀ ರಘುನಾಥ ತೀರ್ಥರ ಆರಾಧನೆ

ಚರಣ ಜೋಶಿ
97310 88779

ಇವರು ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಗುಡಿಬಂಡೆಯಲ್ಲಿ ಜನಿಸಿದರು ಎಂದು ನಂಬಲಾಗಿದೆ. ಅವರು ಕಾಶಿಯಲ್ಲಿ ಅಧ್ಯಯನ ಮಾಡಿ ಚಿಕ್ಕ ವಯಸ್ಸಿನಲ್ಲಿಯೇ ನಿಪುಣ ವಿದ್ವಾಂಸರಾದರು ಮುಂದೆ ಶ್ರೀ ಲಕ್ಷ್ಮಿನಾರಾಯಣತೀರ್ಥರಿಂದ ಆಶ್ರಮ ಪಡೆದರು ಮತ್ತು ಮಧ್ವಾಚಾರ್ಯರಿಂದ ಇಪ್ಪತ್ತೆರಡನೇ ಸಂತರು. ರಘುನಾಥ ತೀರ್ಥರು 55 ವರುಷ ಸುದೀರ್ಘವಾಗಿ ಪೀಠದಲ್ಲಿದ್ದವರು. ಶ್ರೀರಘುನಾಥತೀರ್ಥರು ಶ್ರೀವ್ಯಾಸರಾಜರ ನಂತರ ಸೋಸಲೇ ವ್ಯಾಸರಾಜ ಮಠದಲ್ಲಿ 10ನೇ ಯತಿಯಾಗಿದ್ದಾರೆ. ಈ ಮಹಾನುಭಾವರ, ಜ್ಞಾನಿಗಳ ಜೀವನ ಚರಿತ್ರೆಯ ಯಾವುದೇ ದತ್ತಾಂಶವನ್ನು ಸಂರಕ್ಷಿಸಲಾಗಿಲ್ಲ ಎಂಬುದು ದುರದೃಷ್ಟಕರ.

ಮಹಾನುಭಾವರಾದ ವ್ಯಾಸರಾಜರು ಮೂಲ ರಾಮದೇವರ ಇಚ್ಛೆಯಂತೆ ಬ್ರಹ್ಮಸೂತ್ರಭಾಷ್ಯಕ್ಕೆ **"ತಾತ್ಪರ್ಯ ಚಂದ್ರಿಕಾ"** ಎಂಬ ವ್ಯಾಖ್ಯಾನವನ್ನು ಬರೆದಿದ್ದರು. ಆದರೆ ಅವರು ಕೊನೆಯ ಎರಡು ಅಧ್ಯಾಯಗಳನ್ನು ಬಿಟ್ಟು ಮೊದಲ ಎರಡು ಅಧ್ಯಾಯಗಳಿಗೆ ಮಾತ್ರ ಬರೆದಿದ್ದರು. ಅವರ ಶಿಷ್ಯ ವೃಂದವು ತಾತ್ಪರ್ಯ ಚಂದ್ರಿಕಾವನ್ನು ಏಕೆ ಪೂರ್ಣಗೊಳಿಸಲಿಲ್ಲ ಎಂದು ವ್ಯಾಸರಾಜರನ್ನು ಕೇಳಿದಾಗ, ಅವರು ಅದನ್ನು ಮುಂದೆ ನಮ್ಮ ಪರಂಪರೆಯಲ್ಲಿಯೇ ಇನ್ನೊಬ್ಬ ಯತಿ ಬರೆಯುತ್ತಾರೆ ಎಂದು ಹೇಳಿದ್ದರು. **"ದಶಮೋ ಮತ್ಸಮೋ ಭವೇತ್"** ಎಂದು ಉಲ್ಲೇಖಿಸಿ ಮತ್ತು ಅವರು ಅದನ್ನೇ ಪೂರ್ಣಗೊಳಿಸುತ್ತಾರೆ.ಶ್ರೀ ರಘುನಾಥ ತೀರ್ಥರಿಗೆ, ತಾವು ಮಾಡಿದ ವ್ಯಾಖ್ಯಾನ - ಇದು ವ್ಯಾಸರಾಜ ಶ್ರೀಪಾದಂಗಳವರಿಗೆ ಸಮ್ಮತ ಇದೆಯೋ ಇಲ್ಲವೋ ಅನ್ನೋದರ ನಿರ್ಣಯ ಮಾಡಿಕೋಬೇಕಾಗಿತ್ತಂತೆ ಅಂತೇ ಶೇಷ ಚಂದ್ರಿಕಾ ಗ್ರಂಥವನ್ನು ನವಬೃಂದಾವನದಲ್ಲಿ ಶ್ರೀ ವ್ಯಾಸರಾಜರ ಬೃಂದಾವನದ ಮುಂದೆ ಇಟ್ಟು ಸಮರ್ಪಣೆ ಮಾಡಿದರು ಶೇಷ ತಾತ್ಪರ್ಯ ಚಂದ್ರಿಕಾ ಗ್ರಂಥದ ಮಂಗಳ ಶ್ಲೋಕಗಳಲ್ಲಿಯೇ ಹೇಳಿದ್ದಾರೆ,


**ವ್ಯಾಸರಾಜೇಂದುಮಾಶಾಸೇ ಚಂದ್ರಿಕಾ ಯಸ್ಯ ಸಮ್ಮತಾ**
**ದುರ್ವಾದಿಚೋರಾನ್ ವಿದ್ರಾವ್ಯ ರಕ್ಷಿತಂ ಭುವನತ್ರಯಂ**

ಬೃಂದಾವನದ ಮುಂದೆಯೇ ತಮ್ಮ ಸಂಪೂರ್ಣ ಶೇಷ ಚಂದ್ರಿಕಾವನ್ನು ಅನುವಾದ ಮಾಡಿದರು ಶ್ರೀರಘುನಾಥ ತೀರ್ಥರು.

ಈ ತರಹ ಸಮ್ಮತಿಯನ್ನು ಯಾಚಿಸಿದಾಗ ಶ್ರೀಮದ್ವ್ಯಾಸರಾಜರ ಬೃಂದಾವನ ಅಲ್ಲಾಡಿತು ಅರ್ಥಾತ್ ಶ್ರೀ ಮಚ್ಚಂದ್ರಿಕಾಚಾರ್ಯರು ಶ್ರೀರಘುನಾಥ ತೀರ್ಥರು ರಚಿಸಿದ ಶೇಷಚಂದ್ರಿಕಾ ಗ್ರಂಥಕ್ಕೆ ಈ ಮೂಲಕ ತಮ್ಮ ಸಮ್ಮತಿಯನ್ನು ಸೂಚಿಸಿದರು 2 ಅಧ್ಯಾಯಗಳಿಗೆ ವ್ಯಾಖ್ಯಾನವನ್ನು ಬರೆದರು ಹೀಗೆ ಶೇಷಚಂದ್ರಿಕಾಚಾರ್ಯರು ಎಂದು ಪ್ರಸಿದ್ಧರಾದರು. ಅವರನ್ನು ಶ್ರೀವ್ಯಾಸರಾಜರಿಗೆ ಸಮಾನರೆಂದು ಪರಿಗಣಿಸಲಾಗುತ್ತದೆ. ಈ ಕೃತಿ ಶೇಷ ತಾತ್ಪರ್ಯ ಚಂದ್ರಿಕಾ ಇದು ತತ್ವಪ್ರಕಾಶಿಕದ ವ್ಯಾಖ್ಯಾನ ರೂಪವಾಗಿದೆ ಮತ್ತು ಇದು ಶ್ರೀವ್ಯಾಸರಾಜರು ತಾತ್ಪರ್ಯ ಚಂದ್ರಿಕಾ ಪೂರ್ಣ ಕೃತಿಯಾಗಿದೆ. ಇಂತಹ ಜಟಿಲವಾದ ಪ್ರಮೇಯಗಳನ್ನೆಲ್ಲಾ ಚೆನ್ನಾಗಿ ನಿರೂಪಿಸಿ ಮೂಲ ಟೀಕಾಭಾವವನ್ನು ಆವಿಷ್ಕರಿಸಿದ ಕಾರಣ ಆ ಗ್ರಂಥ ನಾಮದಿಂದಲೇ ಪ್ರಖ್ಯಾತರಾಗಿ-ರಾಜ ಸಭೆಗಳಲ್ಲಿ ಬಂದ ವಾದಿಗಳನ್ನೆಲ್ಲಾ ಜಯಿಸಿ, ಸಿದ್ಧಾಂತ ಸ್ಥಾಪನೆ ಮಾಡಿ ಶ್ರೀಶೇಷಚಂದ್ರಿಕಾಚಾರ್ಯರು ಪಂಡಿತರ ರಾಜ ಮಹಾರಾಜರ ಮನ್ನಣೆಯನ್ನು ಪಡೆದರು. ಶ್ರೀರಘುನಾಥತೀರ್ಥರ ವಾಗ್ಮಯ ಅವರ ತಪಸ್ಸಿಗೆ ಮೆಚ್ಚಿ ಬಹುಷಃ ಶ್ರೀಚಂದ್ರಿಕಾಚಾರ್ಯರೇ ಎಂದು ಪ್ರಸಿದ್ಧರಾದ ಶ್ರೀವ್ಯಾಸರಾಜರೇ ಅವರಲ್ಲಿ ಒಂದು ಅಂಶದಿಂದ ತಾವೇ ನಿಂತು ಇಲ್ಲವೇ ಅವರ ಕೃಪಾ ವಿಶೇಷವೇ ಅವರಲ್ಲಿದ್ದು ಈ ಅನನ್ಯ ಸಾಧ್ಯವಾದ ಚಂದ್ರಿಕಾ ಪೂರ್ಣ ರೂಪವಾದ ಕಾರ್ಯವನ್ನು ಮಾಡಿತು ಎಂದು ಹೇಳಬಹುದು.

ಶ್ರೀರಘುನಾಥತೀರ್ಥರು ತಂತ್ರಸಾರಕ್ಕೆ ತತ್ತ್ವಕಣಿಕಾ ಎಂಬ ವ್ಯಾಖ್ಯಾನವನ್ನೂ ಗಂಗಾಸ್ತುತಿ ಎಂಬ ಗ್ರಂಥವನ್ನೂ ರಚಿಸಿದ್ದಾರೆ. ಬೃಹತೀ ಸಹಸ್ತ ವ್ಯಾಖ್ಯಾನ (ತತ್ತ್ವಸಾರ) ಮತ್ತು ರಘುನಾಥತೀರ್ಥೀಯ ಈಶಾವಾಸ್ಯೋಪನಿಷದ್ಭಾಷ್ಯ ಟೀಕೆ ಮೊದಲಾದ ಉದ್ಗ್ರಂಥಗಳನ್ನು ರಚಿಸಿದ್ದಾರೆ. ಇದರಿಂದ ಶೇಷ ಚಂದ್ರಿಕಾಕಾರರಾದ ಶ್ರೀರಘುನಾಥತೀರ್ಥರ ಪಾಂಡಿತ್ಯ, ಅವರ ಮಹಿಮೆ ಏನು ಅನ್ನೋದು ಗೊತ್ತಾಗುತ್ತದೆ. ಅಂಥಾ ಮಹಿಮಾನ್ವಿತರು ಶ್ರೀರಘುನಾಥತೀರ್ಥರು.

ಅವರು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಕುಂಭಕೋಣಂನಲ್ಲಿ ಮಠಾಧೀಶರಾಗಿ ಹೆಚ್ಚಿನ ಸಮಯವನ್ನು ಕಳೆದರು ಎಂದು ನಂಬಲಾಗಿದೆ. ಶ್ರೀವ್ಯಾಸರಾಜರು ಪ್ರತಿಷ್ಠಾಪಿಸಿದ ರಂಗನಾಥ ಸ್ವಾಮಿ ಮತ್ತು ಮುಖ್ಯಪ್ರಾಣರನ್ನು ನೋಡಲು ಶ್ರೀರಂಗಪಟ್ಟಣ ಮತ್ತು ಬನ್ನೂರಿಗೆ ಬಂದರು. ಅವರು ದೇಹತ್ಯಾಗ ಮಾಡುವ ಎರಡು ದಿನಗಳ ಮೊದಲು,ಮೂರು ನದಿಗಳಾದ ಕಾವೇರಿ, ಕಪಿಲಾ ಮತ್ತು ಸ್ಪಟಿಕಾ ಸಂಗಮವಾಗುವ ಮೈಸೂರಿನ ಬಳಿಯ ತ್ರಿಮಕೂಟ ಕ್ಷೇತ್ರವನ್ನು ತಲುಪಿದರು. ಈ ಸ್ಥಳವು ಈಗಾಗಲೇ ಗುಂಜಾ ನರಸಿಂಹ ಸ್ವಾಮಿ, ಬ್ರಹ್ಮಾಶ್ವತ ವೃಕ್ಷ ಮತ್ತು ಅಗಸ್ತ್ಯೇಶ್ವರ ದೇವಾಲಯವಿತ್ತು ಅವರು ತಮ್ಮ ದೇಹವನ್ನು ತ್ಯಜಿಸಲು ನಿರ್ಧರಿಸಿದರು ಮತ್ತು ಶ್ರೀಜಗನ್ನಾಥತೀರ್ಥರಿಗೆ ತಮ್ಮ ಪೀಠವನ್ನು ಒಪ್ಪಿಸಿದರು ಮತ್ತು ಆಷಾಢ ಶುದ್ಧ ಚತುರ್ಥಿಯಂದು ತಮ್ಮ ದೇಹ ತ್ಯಾಗ ಮಾಡಿದರು.ಶ್ರೀ ಚಂದ್ರಿಕಾಚಾರ್ಯರಿಗೆ ವಿದ್ಯಾಗುರುಗಳು, ಶ್ರೀಲಕ್ಷ್ಮೀನಾರಾಯಣ ತೀರ್ಥರು ಅರ್ಥಾತ್ ಶ್ರೀಪಾದರಾಜರು. ಶ್ರೀಶೇಷ ಚಂದ್ರಿಕಾಚಾರ್ಯರ ಆಶ್ರಮ ಗುರುಗಳು, ಶ್ರೀ ಲಕ್ಷ್ಮೀನಾರಾಯಣ ತೀರ್ಥರು. ಶ್ರೀವಿಜಯೀಂದ್ರ ಗುರುಗಳೇ ಮೊದಲಾದ ಮಹಾನುಭಾವರನ್ನು ಶಿಷ್ಯರನ್ನಾಗಿ ಪಡೆದವರು ಶ್ರೀಚಂದ್ರಿಕಾಚಾರ್ಯರಾದರೆ, ಭಾಷ್ಯದೀಪಿಕಾಚಾರ್ಯರು ಅಂತಲೇ ಪ್ರಸಿದ್ಧರಾದ ಶ್ರೀ ಜಗನ್ನಾಥತೀರ್ಥರೇ ಮೊದಲಾದ ಶಿಷ್ಯರನ್ನು ಪಡೆದವರು ಶ್ರೀಶೇಷಚಂದ್ರಿಕಾ ಚಾರ್ಯರು.



# ಆರೋಗ್ಯಕರ ವೀಳ್ಯದಲೆ ಸೇವನೆ

- ಹನುಮಂತ.ಮ. ದೇಶಕುಲಕರ್ಣಿ
97317 41397



ವೀಳ್ಯದ ಬಳ್ಳಿ ಬೇರು ರಹಿತ ಅನೇಕ ಸಣ್ಣ ಸಣ್ಣ ಬಳ್ಳಿ ಒಳಗೊಂಡ ಸಸ್ಯ. ವೀಳ್ಯದ ಎಲೆಯ ಬಳಕೆ 2000 ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದೆ. ಭಾರತೀಯರು ಅಡಿಕೆ ಮತ್ತು ವೀಳ್ಯದ ಎಲೆಯನ್ನು ಪಾನ್ ಸುಪಾರಿ ಎಂದು ಅತಿಥಿಗಳಿಗೆ ನೀಡುವ ಸೌಜನ್ಯ ಬೆಳೆಸಿಕೊಂಡು ಬಂದಿದೆ. ವೀಳ್ಯದ ಎಲೆಗೆ ಭಾರತೀಯ ಸಂಸ್ಕೃತಿಯಲ್ಲಿ ಹೆಚ್ಚಿನ ಸ್ಥಾನಮಾನ ನೀಡಲಾಗಿದೆ. ಪ್ರತಿಯೊಂದು ಶುಭಕಾರ್ಯಕ್ಕೂ ವೀಳ್ಯದ ಎಲೆ ಇರಲೇಬೇಕು. ಹಬ್ಬ- ಹರಿದಿನಗಳಲ್ಲಿ, ಮನೆಗೆ ಬಂದವರಿಗೆ ಉಡುಗೊರೆ ಕೊಡುವಾಗ ಜೊತೆಗೆ ವೀಳ್ಯದ ಎಲೆ ಶುಭ ಹಾರೈಸುವ ಸಲುವಾಗಿ ಕೊಡಲಾಗುತ್ತದೆ. ಭರ್ಜರಿ ಊಟದ ನಂತರ ವೀಳ್ಯದ ಎಲೆಯೊಂದಿಗೆ ಅಡಿಕೆ ಬೆರೆಸಿ ತಿನ್ನುವುದು ರೂಢಿಗಳಲ್ಲಿ ಬಂದಿದೆ. ಇದನ್ನು ತಿಂದಿರುವುದನ್ನು ಸುಲಭವಾಗಿ ಜೀರ್ಣವಾಗುತ್ತದೆ ಎಂಬುದರ ಜೊತೆಗೆ ಅನೇಕ ಔಷಧೀಯ ಗುಣಗಳು ಎಲೆಯಲ್ಲಿವೆ ಎಂಬುದನ್ನು ತಿಳಿದುಕೊಳ್ಳಲೇಬೇಕು. ಪ್ರಾಚೀನ ಕಾಲದಿಂದಲೂ ವೀಳ್ಯದ ಎಲೆಯನ್ನು ಸುವಾಸನಾ ಉತ್ತೇಜಕ ಮತ್ತು ಜಠರವಾಯು ವಿರೋಧಿಯಾಗಿ ಬಳಸಲಾಗುತ್ತಿದೆ. ಉತ್ಕರ್ಷಣ ನಿರೋಧಕ ವೀಳ್ಯದ ಎಲೆಯ ಮೇಲೆ ಮಾಡಿದ ಸಂಶೋಧನೆ ಮೇಲೆ ಇದರಲ್ಲಿರುವ ಮುಕ್ತ ಮೂಲಭೂತ ಅಂಶಗಳನ್ನು ಶೇಖರಿಸುವ ಗುಣಲಕ್ಷಣಗಳನ್ನು ಹೊಂದಿರುವುದು ಕಂಡು ಬಂದಿದೆಯಂತೆ.

ವೀಳ್ಯದ ಎಲೆಯಲ್ಲಿ ಮಧುಮೇಹ ವಿರೋಧಿ ಗುಣ ಇರುವುದು ಕಂಡು ಬಂದಿದ್ದು ಇದು ಚಿಕಿತ್ಸೆಗೆ ನೆರವಾಗುತ್ತದೆ ಎನ್ನಲಾಗಿದೆ. ನರಗಳ ದೌರ್ಬಲ್ಯ ವೀಳ್ಯದ ಎಲೆಯ ರಸ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ನರದ ಸಮಸ್ಯೆ, ನರಗಳ ಬಳಲಿಕೆ, ನಿಶ್ಯಕ್ತಿ ಇವುಗಳಿಗೆ ಪರಿಹಾರ ದೊರಕುತ್ತದೆ. ಇದು ರಕ್ತಸ್ರಾವ ಅಥವಾ ಇತರ ಸ್ರವಿಸುವಿಕೆ ತಡೆಯುತ್ತದೆ. ಎಲೆ ಅಡಿಕೆ ಜಜ್ಜಿ ಜೇನುತುಪ್ಪದೊಂದಿಗೆ ಮಿಶ್ರ ಮಾಡಿ ತಿನ್ನುವುದರಿಂದ ಒಣ ಕೆಮ್ಮು ಕಡಿಮೆ ಆಗುತ್ತದೆ. ಮೂತ್ರ ವಿಸರ್ಜನೆಗೆ ತೊಂದರೆಯಾದಾಗ ವೀಳ್ಯದ ಎಲೆಯ ರಸವನ್ನು ಹಾಲಿನೊಂದಿಗೆ ಬೆರೆಸಿ ಸೇವಿಸಿದಾಗ ಮೂತ್ರಕ್ಕೆ ಸಂಬಂಧ ಪಟ್ಟ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಉರಿಯೂತ ಮತ್ತು ಸಂಧಿವಾತ ತಡೆಯಲು ವೀಳ್ಯದ ಎಲೆಯ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ವೀಳ್ಯದ ಎಲೆಯನ್ನು ಬಿಸಿ ಮಾಡಿ ಅದಕ್ಕೆ ಒಂದು ಪದರ ಹರಳೆಣ್ಣೆಯಲ್ಲಿ ಅದ್ದಿ ಊತ ಅಥವಾ ಕೀವು ಆದ ಜಾಗದಲ್ಲಿ ಹಚ್ಚಬೇಕು. ಪ್ರತಿ ಗಂಟೆಗೊಮ್ಮೆ ಇದನ್ನು ಬದಲಿಸುತ್ತಿರಬೇಕು.

ಎಲ್ಲರ ಕಾಡುವ ಬೆನ್ನುನೋವನ್ನು ಕಡಿಮೆ ಮಾಡುತ್ತದೆ ಎಲೆ ಅಥವಾ ಅದರ ಬಿಸಿ ರಸವನ್ನು ಯಾವುದೇ ಕೊಬ್ಬರಿ ಎಣ್ಣೆ ಮಿಶ್ರ ಮಾಡಿ ಹಚ್ಚುವುದರಿಂದ ಬೆನ್ನಿನ ಕೆಳಭಾಗದ ನೋವನ್ನು ಕಡಿಮೆ ಮಾಡುತ್ತದೆ. ಉಸಿರಾಟದ ತೊಂದರೆ ಕೆಮ್ಮು ಅಥವಾ ಉಸಿರಾಟದ ತೊಂದರೆ ಆದಾಗ ವೀಳ್ಯದ ಎಲೆಯನ್ನು ಸಾಸಿವೆ ಎಣ್ಣೆಯಲ್ಲಿ ಬಿಸಿ ಮಾಡಿ ಅದ್ದಿ ಎದೆಯ ಮೇಲೆ ಇಡುವುದರಿಂದ ಉಸಿರಾಟದ ತೊಂದರೆ ನಿವಾರಣೆಯಾಗುತ್ತದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಹೇಳಿದಂತೆ ಕೌಸಲ್ಯಾದೇವಿ ದಶರಥ ಮಹಾರಾಜನ ವಿಷಯದಲ್ಲಿ ಬಹು ಪ್ರೇಮಾತಿಶಯದಿಂದ ಅನೇಕ ಧರ್ಮ ಕಾರ್ಯಗಳಲ್ಲಿ ಆಶ್ರಯವಾಗಿದ್ದು ಆನಂದವನ್ನುಂಟು ಮಾಡಿದಂತೆಯೇ ಶ್ರೀದೇವಿಯೂ ಸಹಾ ಸ್ವಾಮಿಯ ವಿಷಯದಲ್ಲಿ ಪ್ರೀತ್ಯಾತಿಶಯದಿಂದ **'ಮಂಗಲಾನ್ಯಭಿದುಧ್ಯುಷಿ'** (ಮಂಗಳಕರವಾದ ಶುಭ ನುಡಿಗಳನ್ನು ಆಡುವವಳಾಗಿ)ಯಾಗಿ **"ಸ್ಮಾರಯೇ ತ್ವಾಂ ನ ಶಿಕ್ಷಯೇ"** (ಜ್ಞಾಪಕ ಮಾಡಿಕೊಂಡಿದ್ದೇನೆ ಹೊರತು ಆಜ್ಞಾಪಿಸಿಲ್ಲ)ಎಂದು, ಹೀಗೆ ಅನೇಕ ಧರ್ಮಗಳನ್ನು ಅನುಷ್ಠಾನಕ್ಕೆ ತಂದು ತೋರಿಸುತ್ತಿರುವಾಗಲೇ ಇತ್ತ ಕಡೆ ಆಳ್ವಾರ್ ಭಗವದ್ವಿಷಯದಲ್ಲಿ ತೋರಿಸುವ ಪ್ರೀತಿ ಉನ್ಮಾದಕರವಾಗಿದ್ದು **"ಪರಿಚಿಕ್ಷೇಪ ರಾಘವಂ"** ಎನ್ನುವಂತೆ ಪ್ರಣಯ ಕೋಪದಿಂದ ಕೂಡಿದ ಗೀತೆಗಳನ್ನು ಅನುಸರಿಸಿ ಭಗವಂತನ ಲೀಲಾರಸವು ಪರಿವರ್ತನೆಗೆ ಕಾರಣವಾಗುವಂತೆ ಆಳ್ವಾರರ ಪ್ರತಿನಿಧಿಯಾಗಿ ಪ್ರಧಾನ ಮಹಿಷಿಯಾಗಿ ಲಕ್ಷ್ಮಿಪ್ರಿಯಸಖಿಂ ದೇವಿಂ ಎಂದು ಮಣ್ಮಕುಲಮ್ ತಿರುವುಮ್ ನಿಳಲ್‌ಪೋಲ್ವನರ್ (ಭೂದೇವಿಯು ಶ್ರೀದೇವಿಯಂಥವರೇ ಮೊದಲಾದ) ಛಾಯಾ ಮಿವಾಭ್ಯುದಯನಿಮವನೀಂ ಚ ತಸ್ಯಾಃ ಎಂದೂ ಮೊದಲಾಗಿ ಹೇಳಿದ ರೀತಿಯಲ್ಲಿ ಆಕೆಯೊಡನೆ ಅವಿಚ್ಛಿನ್ನವಾಗಿ ಭೂದೇವಿಯು ಈ ಮಧ್ಯೆ ಮಿನ್ನಿಡೈ ನುಡವಾರ್ ಪ್ರಣಯ ಕಲಹವನ್ನು ಜರುಗಿಸಲು ಆ ಕಾಲದಿಂದಲೂ ಶ್ರೀಭಾಷ್ಯಕಾರರೇ ನಿಯಮಿಸಿದ್ದಾರೆಂದು ಚಿರೋಪಾಸಿದವೃದ್ಧರು ಸಂಪ್ರದಾಯಸ್ಥರಾದ ವೇಂಕಟಾದ್ರಿಯನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡು ಜೀವಿಸುವ ಹಿರಿಯರು ಆಜ್ಞೆಮಾಡಿದ್ದಾರೆ.

ಇದೇ ರೀತಿಯಲ್ಲೇ ತಿರುಮಲೆಯಲ್ಲಿ ಶ್ರೀ ಗೋವಿಂದರಾಜಸ್ವಾಮಿ ಸರ್ವ ವಿಧದಲ್ಲಿ ಶ್ರೀವೇಂಕಟೇಶ್ವರಸ್ವಾಮಿಯೊಂದಿಗೆ ತುಲ್ಯ ಧರ್ಮನಾಗಿರುವುದರಿಂದಲೇ ತಾವು ದೇವತೆಗಳ ಪ್ರಣಯಕಲಹ ಮಹೋತ್ಸವನ್ನು ಜರುಗಿಸಲಾಗುತ್ತದೆ. ಇಂತಹವುಗಳೆಲ್ಲವನ್ನು ಗೋವಿಂದರಾಜ ಸ್ವಾಮಿಗೆ ಜರುಗಿಸುತ್ತಾ ತಿರುಮಲೆಯ ಮೇಲೆ ಶ್ರೀವೇಂಕ ಟೇಶ್ವರ ಸನ್ನಿಧಿಯಲ್ಲಿ ತಿರುಪ್ಪಣಿಪಿಳ್ಳೈ ಕೈಂಕರ್ಯವನ್ನು ಶ್ರೀಮಹಾ ಮಣಿಮಂಟಪದ ನಡುವೆ ಒಂದು ನಾಲ್ಕು ಕಂಬಗಳ ಮಂಟಪವನ್ನು ಪ್ರತಿಷ್ಠಾಪಿಸಿ, ಒಂದು ಗರ್ಭಗುಡಿಯನ್ನು ನಿರ್ಮಿಸಿ, ಆ ಮಂಟಪದಲ್ಲಿ ದೊಡ್ಡ ತಿರುವಧ್ಯಯನವನ್ನು ಜರುಗಿಸುವಂತೆ ಏರ್ಪಾಟು ಮಾಡಿಸಿ ಸಮಸ್ತೋಪಚಾರಗಳನ್ನು (ಕಟ್ಟಿಯಂ ಯಾದವರಾಜು) ಪ್ರತ್ಯಹವನ್ನು ಆಚರಿಸುವವರಾದರು.



ಶ್ರೀ ಅನಂತಾಚಾರ್ಯರು ತಮ್ಮ ಆಚಾರ್ಯರಿಗೆ ಭಾಷ್ಯಕಾರರ ನಾಮಧೇಯವನ್ನು ಇಟ್ಟು **'ರಾಮಾನುಜಂ'** ಎಂಬ ಒಂದು ನಂದನ ವನ್ನು ಏರ್ಪಡಿಸಿ ಅದರಲ್ಲಿ ತಮ್ಮ ಧರ್ಮಪತ್ನಿ ಹಾಗೂ ಕುಮಾರ ರಿಂದ ಒಂದು ಬಾವಿಯನ್ನು ತೋಡಿಸಿ **'ರಾಮಾನುಜಂ'** ಎಂಬ ನಾಮ ಧೇಯವಿಟ್ಟು ಪುಷ್ಪವೃಕ್ಷಗಳಿಗೆ ನೀರು ಒದಗಿಸಲು ಒಂದು ಕಾಲುವೆ ಯನ್ನು ಕಟ್ಟಿಸಿ ಶ್ರೀಮಾಲ ಮಂಟಪವನ್ನು ನಿರ್ಮಿಸಿ, ಭಗವದ್ರಾಮಾ ನುಜಾಚಾರ್ಯರ ಆಜ್ಞೆಮೇರೆಗೆ ತಮ್ಮ ಪರಮಾಚಾರ್ಯರಿಗೆ ನಾಮ ಬಳುವಳಿಯಾಗಿ ಯಮುನೈತ್ತುವೈವನ್ (ಯಾಮುನಾಚಾರ್ಯ ಮಂಟಪ) ಎಂದು ಹೆಸರನಿಟ್ಟಿರುವಂತೆ ಒಂದು ಶ್ರೀ ಸುಂದರವಾದ ಮಂಟಪವನ್ನು ನಿರ್ಮಿಸಲಾದ ರೀತಿಯಲ್ಲಿ (ಕಟ್ಟಿಯಂ ಯಾದವ ರಾಜು) ಕಟ್ಟಿಸಿದ್ದಾನೆ. ಹೀಗೆ ನಾನಾ ಕೆಲಸಗಳನ್ನು ಸಹಾ ಮಾಡಿಸಿ ದ್ದಾನೆ. ಹೀಗೆ ಸ್ವಲ್ಪ ಕಾಲ ಗತಿಸಿದ ನಂತರ ಕಂದಾಡೈ ರಾಮಾನುಜ ಯ್ಯಂಗಾರ್ ಎಂಬುವನು ಶಾತಾನಿ ಶ್ರೀವೈಷ್ಣವರು ಶ್ರೀ ರಾಮಾನುಜಾ ಚಾರ್ಯರಂದದಿ ಪರಮ ವೈರಾಗ್ಯ ನಿಷ್ಠೆಯುಳ್ಳವರಾಗಿ ಭಾಗವತೋ ತ್ತಮರಾಗಿ ಸ್ಪರ್ಶವೇದಿ ಎಂಬ ವಿದ್ಯೆ ಫಲಿಸಿದ ನಿಮಿತ್ತ ಶ್ರೀರಂಗಾದಿ ಕ್ಷೇತ್ರಗಳಲ್ಲಿ ಅನೇಕ ಗೋಪುರಗಳನ್ನು ಮಂಟಪ ಪ್ರಸಾದಗಳನ್ನು ನಿರ್ಮಾಣ ಮಾಡಿ, ಔಪಚಾರಿಕ-ಸಾಂಸ್ಕೃತಿಕ-ಅಭ್ಯವಹಾರಿಕ ಕೈಂಕರ್ಯಗಳನ್ನು ನಿರ್ವಹಣೆ ಮಾಡುತ್ತಿರುವ ಸಮಯದಲ್ಲಿ, ಹಿಂದಿನ ಕಾಲದಲ್ಲಿ ಒಂದು ವಿಶೇಷ ದಿನದಲ್ಲಿ ತಿರುಮಲೆಯಲ್ಲಿ ಶೆವ್ವನ್ ಎಂಬ ಒಬ್ಬ ಗೊಲ್ಲನು ಆಕಳ ಹಿಂಡ ಹೊಡೆದುಕೊಂಡು ಹೋಗಿ ಮೇಯಿಸುತ್ತಿರಲು ಆತ ನಿಗೆ ಸ್ವಪ್ನದಲ್ಲಿ ಶ್ರೀವೇಂಕಟೇಶ್ವರ ಸ್ವಾಮಿ ಕಾಣಿಸಿ ಕೊಂಡು ಒಂದು ಜಾಗದಲ್ಲಿ ನಿಧಿ ನಿಕ್ಷೇಪವಿದೆ ಯೆಂದು ಹೇಳಿ ದ್ರವ್ಯವನ್ನು ತೆಗೆದುಕೊಂಡು ತಿರು ಮಲೆಯ ದ್ವಾರವಾಗಿ ತಿರುಚ್ಚುಕನೂರು (ತಿರುಚಾ ನೂರು) ಗೆ ಮುಡಿ ಕಳುಹಿಸುವ ಸಂದರ್ಭದಲ್ಲಿ ಸೇವಾ ಪರರು ವಿಶ್ರಾಂತಿ ತಂಗಿ ಹೋಗಲು ಮಾರ್ಗವನ್ನು ಹಾಕಿ, ಮೆಟ್ಟಲುಗಳನ್ನು ಕಟ್ಟಿಸತಕ್ಕದ್ದು ಎಂದು ನೇಮಿಸಿ ದಾಗಲೇ, ಆತನು ಆ ಸ್ವಪ್ನವನ್ನು ಕಂಡು ಸಂತುಷ್ಟ ನಾಗಿ, ಆ ನಿಧಿಯನ್ನು ಅಗೆದು ಸುಗಮ ಮಾರ್ಗವ ನೇರ್ಪಡಿಸಿ, ಮೆಟ್ಟಿಲಗಳನ್ನು ಸಹಾ ಹಾಕಿಸಿದ್ದಾನೆ.

ಸ್ವಲ್ಪ ಕಾಲ ಗತಿಸಿದ ನಂತರ ಮಾರ್ಗವು ಶಿಥಿಲಗೊಂಡು ಆಗ ಕಂದಾಡೈ ರಾಮಾನುಜಯ್ಯಂ ಗಾರರು ಹಳೆಯ ಸೋಪಾನಗಳನ್ನು ತೆಗಿಸಿ, ಸದೃಢ ವಾಗಿಯೂ, ವಿಶಾಲವಾಗಿಯೂ ಆಗಿರುವ ಮೆಟ್ಟಲು ಗಳನ್ನು ಕಟ್ಟಿಸಿ ಮುಂದೆ ನೈಮಿಷಾರಣ್ಯ ಋಷಿಗಳು ಮಾರ್ಕಂಡೇಯಾದಿ ಪರಮರ್ಷಿಗಳು ಶ್ರೀ ವೇಂಕಟಾ ಚಲಯಾತ್ರೆ ಮಾಡುತ್ತಿರಲು ಮಾರ್ಗ ಮಧ್ಯದಲ್ಲಿ ನರ ಸಿಂಹಸ್ವಾಮಿ ಪ್ರತ್ಯಕ್ಷನಾಗಿ ಅವರಿಗೆಲ್ಲಾ ದರ್ಶನ ಭಾಗ್ಯ ವನಿತ್ತದ್ದು ಮಾರ್ಕಂಡೇಯ ಪುರಾಣದಲ್ಲಿ ಶ್ರೀವೇಂಕ ಟಾದ್ರಿ ಮಹಾತ್ಮೆಯ ಅಧ್ಯಾಯದಲ್ಲಿರುವಂತೆ ಆ ನರ ಸಿಂಹಸ್ವಾಮಿ ವಿಜಯನ್ನೇರಿದ ಗುಹೆ ಒಂದು ಹುಲ್ಲಿನ ಪ್ರದೇಶದಲ್ಲಿರುವುದರಿಂದ ಇಳಿದು ಹತ್ತುವುದಕ್ಕೆ ತೊಂದರೆಯಾಗುತ್ತ ಕಾರಣ ಈ ಸ್ಥಳವನ್ನು ಪರಿ ಗಣಿಸಿ, ಗುಹೆಯ ದಕ್ಷಿಣ ಭಾಗದಲ್ಲಿರುವ ಮಾರ್ಗ ಮಧ್ಯದಲ್ಲಿ ಸ್ವಾಮಿದರ್ಶನ ಮಾಡಿಕೊಳ್ಳಲು ಅನು ಕೂಲವಾಗುವಂತೆ ಗುಡಿಯನ್ನು ನಿರ್ಮಿಸಿ ನರಸಿಂಹ ಸ್ವಾಮಿಗೆ ಶ್ರೀಪ್ರತಿಷ್ಠೆಯನ್ನು ನೆರವೇರಿಸಿ ಪ್ರತಿ ದಿನ ಭಗವದಾರಾಧನೆಯನ್ನು ಮಾಡುವಂಥ ಏರ್ಪಾಟು ಮಾಡಿದರು.

(ಮುಂದುವರೆಯುತ್ತದೆ)

## ಏಪ್ರಿಲ್ ತಿಂಗಳ ರಸಪ್ರಶ್ನೆಯ ಉತ್ತರಗಳು

01. ಅಂಜನೇಯ
02. ಕಡಪದಿಂದ ರಾಜಂಪೇಟೆ ಮಾರ್ಗದಲ್ಲಿ
03. 14ವರ್ಷ
04. ಕ ್ಮಂಡುವಿನಿಂದ 130 ಕಿ.ಮೀ. ದೂರದಲ್ಲಿದೆ.
05. ಚಿತ್ರಗುಪ್ತ
06. ಮಳೂರು ಅಗ್ರಹಾರವಾಗಿತ್ತು
07. 7ನೇ ಅಧ್ಯಾಯ 6 ನೇ ಅಂಶದಲ್ಲಿ
08. ಸೂರ್ಯನಾರಾಯಣ
09. ಮೇಲುಕೋಟೆ
10. ಚಕ್ರರಾಜಯೋಧರು
11. ನಳದಮಯಂತಿ
12. ಲವಕುಶ
13. ದನೆಯದು
14. ಚೀನಾದ ಯಾತ್ರಿಕ
15. ಶ್ರೀರಾಮನು

# ಶ್ರೀ ಪ್ರದ್ಯುಮ್ನ ತೀರ್ಥರ ಕೃತಿ ಸಂಪದ

- ಡಾ॥ಸುಮನ ಬದರೀನಾಥ್
94820 94855

ಹರಿದಾಸ ಸಾಹಿತ್ಯ ಪರಂಪರೆಯನ್ನು ಶ್ರೀ ಶ್ರೀ ಪಾದ ರಾಯರು, ಶ್ರೀವ್ಯಾಸರಾಯರು, ಶ್ರೀವಾದಿರಾಜರೇ ಆದಿಯಾಗಿ ಹಲವಾರು ಯತೀಂದ್ರರು ಕನ್ನಡದಲ್ಲಿ ಕೃತಿ ರಚನೆಯ ಮೂಲಕ ಪೋಷಿಸಿ ಬೆಳೆಸಿದ್ದಾರೆ. ಆ ಮಾಲೆಯ ಮತ್ತೊಂದು ರತ್ನ ಸಾಗರಕಟ್ಟೆ ಮಠಾಧೀಶರಾಗಿದ್ದ ಶ್ರೀಪ್ರದ್ಯುಮ್ನತೀರ್ಥರು. ಸಂಸ್ಕೃತಿಭಾಷೆ ಹಾಗೂ ತತ್ವಜ್ಞಾನಗಳಲ್ಲಿ ಶಿಷ್ಟ ಸಾಧನೆ ಮಾಡಿ ಅಪಾರ ಪಾಂಡಿತ್ಯಗಳಿಸಿದ್ದ ಪ್ರದ್ಯುಮ್ನತೀರ್ಥರು. ತಮ್ಮ ಪೂರ್ವ ಯತೀಂದ್ರರಂತೆ ಹರಿದಾಸ ಸಾಹಿತ್ಯದ ಸೊಬಗಿಗೆ ಮನಸೋತು ಮಾತೃಭಾಷೆಯಾಗಿದ್ದ ಕನ್ನಡದಲ್ಲಿ ನರಹರಿ ಎಂಬ ಅಂಕಿತದಲ್ಲಿ ಕೃತಿ ರಚಿಸಿ ದಾಸ ಪರಂಪರೆಯನ್ನು ಬೆಳೆಸಿದರು, ಬೆಳಗಿದರು. ಪ್ರದ್ಯುಮ್ನತೀರ್ಥರ ಪೂರ್ವಾಶ್ರಮದ ಹೆಸರು ವ್ಯಾಸರಾಯಚಾರ್ಯ. ಧಾರವಾಡ ಜಿಲ್ಲೆಯ ಬಂಕಾ ಪುರದಲ್ಲಿ ನೆಲಸಿದ್ದ ಪ್ರಸಿದ್ಧ ವಿದ್ವಾಂಸರೂ ಪುರಾಣಿಕರೂ ಆಗಿದ್ದ ವೆಂಕಟರಮಣಾಚಾರ್ಯರ ಪುತ್ರನಾಗಿ ಕ್ರಿ.ಶ 1890 ರಲ್ಲಿ ಜನಿಸಿದರು. ಬಾಲ್ಯದಿಂದಲೂ ವೇದಾಂತದೆಡೆಗೆ. ವೈರಾಗ್ಯದೆಡೆಗೆ ಮನ ಒಲಿದಿದ್ದ ವ್ಯಾಸರಾಯಚಾರ್ಯರು ಮುಳಬಾಗಿಲು ಮಠದ ಮೇಧಾನಿಧಿ ತೀರ್ಥರ ಬಳಿ ವ್ಯಾಸಂಗ ಮಾಡಿದರು. ಗುರುರಾಘವೇಂದ್ರರ ಅಂತರಂಗ ಭಕ್ತರಾಗಿದ್ದ ಅವರು ಕೆಲಕಾಲ ಮಂತ್ರಾಲಯದಲ್ಲಿ ಸೇವೆ ಸಲ್ಲಿಸಿದರು. ಅನಂತರ ಕುಂದಾಪುರ ವ್ಯಾಸರಾಯ ಮಠಾಧೀಶರಾದ ಲಕ್ಷ್ಮೀಪ್ರಿಯ ತೀರ್ಥರಿಂದ ಸನ್ಯಾಸಾಶ್ರಮ ಸ್ವೀಕರಿಸಿ ಪ್ರದ್ಯುಮ್ನತೀರ್ಥರೆನಿಸಿದರು ಮುಂದೆ ಮೈಸೂರು ಸಮೀಪದ ಸಾಗರ ಕಟ್ಟೆಯಲ್ಲಿ ಬಹುಕಾಲ ನೆಲಸಿ ಅಲ್ಲೊಂದು ಮಠವನ್ನು ಸ್ಥಾಪಿಸಿದರು. 85 ವರ್ಷಗಳ ಸುದೀರ್ಘ ಸಾರ್ಥಕ, ಸಾತ್ವಿಕ ಬಾಳ್ವೆ ನಡೆಸಿ ಕ್ರಿ.ಶ. 1975 ರಲ್ಲಿ ಹರಿ ಪಾದವೈದಿದರು.

ಶ್ರೀ ಪ್ರದ್ಯುಮ್ನ ತೀರ್ಥರು ಕನ್ನಡದಲ್ಲಿ ಸುಮಾರು 44 ಕೀರ್ತನೆಗಳನ್ನು ರಚಿಸಿದ್ದಾರೆ. ಅವನ್ನು ಸಂಗ್ರಹಿಸಿ ಕರ್ಣಾಟಕ ಹರಿದಾಸ ಸೈಂಟಿಫಿಕ್ ರಿಸರ್ಚ್ ಸೆಂಟರ್ ಅವರು ಪ್ರಕಟಿಸಿದ್ದಾರೆ. ಇದೀಗ ಕರ್ಣಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಯೋಜನೆಯಡಿಯಲ್ಲಿ ಸಂಪುಟ 24 ರಲ್ಲಿ ಈ 44 ಕೃತಿಗಳನ್ನು ಪ್ರಕಟಿಸಿದ್ದಾರೆ.

ಪ್ರದ್ಯುಮ್ನ ತೀರ್ಥರ ಎಲ್ಲ ಕೃತಿಗಳನ್ನು ಪರಿಭವಿಸಿದರೆ ದೇವತಾಸ್ತುತಿ, ಗುರುಸ್ತುತಿಗಳದ್ದೇ ಸಿಂಹಪಾಲು. ಅವರಿಗೆ ಹರಿಗುರುಗಳಲ್ಲಿ ಅತೀವ ಶ್ರದ್ಧಾಭಕ್ತಿ ಶ್ರೀಹರಿ ಮತ್ತು ಅವನ ಪರಿವಾರ ದೇವತೆಗಳ ಸ್ತುತಿ 30 ಕೃತಿಗಳಾದರೆ ಗುರುಸ್ತುತಿ 14 ಕೃತಿಗಳಲ್ಲಿದೆ. ನರಹರಿ,ಹಯಗ್ರೀವ,ಶ್ರೀನಿವಾಸ, ಪಾಂಡುರಂಗ, ಶ್ರೀರಾಮ, ಶ್ರೀ ಕೃಷ್ಣ ಮುಂತಾದ ಶ್ರೀ ಹರಿಯ ವಿವಿಧ ವಿಭಿನ್ನ ರೂಪಗಳನ್ನು ಸ್ತುತಿಸಿದ್ದಾರೆ. ಎಲ್ಲವೂ ರಮಣೀಯವೂ, ಮನನೀಯವೂ ಆಗಿವೆ. ತಮ್ಮ ಹೃದಯ ಗೋಚರನಾದ ನರಹರಿಯ ದಿವ್ಯರೂಪವನ್ನು ಕಂಡು ಆನಂದಾಶ್ಚರ್ಯಚಕಿತರಾಗಿ, ಏನಿದುರೂಪ ಮಾರನ ಪಿತನೆಂದು ಕರೆಸಿಕೊಂಡು, ಮೋರೆಯೊಳ ಮೂರು ಕಣ್ಣುಗಳ ಧರಿಸಿದಯೆ, ಶೃತಿಗಳು ಪರಮ ಶಾಂತನೆಂದು ಪೊಗಳುತ್ತಿರಲು ನರರಿಗೆ ಕ್ರೂರರೂಪ ತೋರುತ್ತೀಯೆ. ವೈಜಯಂತಿ ಹಾರ ಧರಿಸುವ ಕೊರಳಲ್ಲಿ ಕರುಳಹಾರ ಹಾಕಿದ್ದೀಯೆ ಎಂದು ಸ್ತುತಿಸಿದ್ದಾರೆ. ವಾದಿರಾಜರ ಉಪಾಸನಾಮೂರ್ತಿಯಾದ ಹಯಗ್ರೀವ ರೂಪಿ ಹರಿಯನ್ನು ಶಶಿಯೊಳಿರುವ ಅಕ್ಷ ಸುಬೋಧ ಪುಸ್ತಕದರ ಎಂದು ವರ್ಣಿಸಿದ್ದಾರೆ. ಮುಖದಲ್ಲಿ ಸಕಲಾಗಮ ವಿದ್ಯಾಸು ಘೋಷ ಮಾಡಿ ಕಮಲಜ ಭವಮುಖರಿಂದ ಅಮೃತದಿಂದ ಅಭಿಷಿಕ್ತನಾಗಿರುವಿ, ನಿನ್ನ ಆರೆರಡು ಅಕ್ಷರದ ಮಂತ್ರವನ್ನು (ಹಾಂ ಹಯಗ್ರೀವಾಯ ನಮಃ) ಪ್ರೇಮದಿಂದ ಭಜಿಸುತ್ತೇನೆ. ವರವಾದಿಜಯ,ವಿಮುಕ್ತಿ,ಕಾಂತಿ, ಸುಬುದ್ಧಿಗಳನ್ನು ಕರುಣಿಸು ಎಂದು ಪ್ರಾರ್ಥಿಸಿದ್ದಾರೆ. ಶ್ರೀಪಾದರಾಯರಿಗೆ ಸ್ವಪ್ನಲಬ್ಧವಾಗಿ, ಶ್ರೀವ್ಯಾಸಮುನಿಗೆ ಪ್ರತ್ಯಕ್ಷನಾದ ವ್ಯಾಸರಾಯಮಠದ ಪಟ್ಟದ ದೇವರಾದ ರುಕ್ಮಿಣಿ ಸತ್ಯಭಾಮಾ ಸಮೇತನಾದ ಶ್ರೀಕೃಷ್ಣನನ್ನು ಹೀಗೆ ವರ್ಣಿಸಿದ್ದಾರೆ.

ಮುದ್ದು ಸುರಿಯುತಾನೆ ನೋಡಿ ಕೃಷ್ಣ ॥ಪ॥
ತ್ರಿವಂಗಿಭವದಿ ಶ್ರೀವೇಣು ಪಿಡಿದು ತಾ
ಸಾವೇರಿ ಮೊದಲಾದ ರಾಗವ ಪಾಡುತ
ಬಲದ ಪಾದದಿ ಚೆಲುವ ಎಡದ ಪಾದವನ್ನಿಟ್ಟು
ನಳಿನ ಮುಖ ರುಕ್ಮಿಣಿ ಬಲ ಸತ್ಯಭಾಮೆರಿಂದ
ಧ್ವಜ ವಜ್ರಾಂಕುಶ ಚಕ್ರ ಕಂಜ ಚಿಹ್ನೆಗಳಿಂದ ತೇಜ
ಮುಕುಟ ಶಿರಶ್ಚಕ್ರ ಶೋಭಿತ ಮುಖ ॥

ಮುದ್ದು ಕೃಷ್ಣನ ಮುದ್ದಾದ ವರ್ಣನೆ ಇದು. ಬಹುಶಃ ತಮ್ಮ ತೀರ್ಥಕ್ಷೇತ್ರಯಾತ್ರಾ ಸಮಯದಲ್ಲಿ ಭೇಟಿಕೊಟ್ಟ ಪಂಡರಾಪುರ, ಬೇಲೂರು, ತಿರುಪತಿ, ಮುಂತಾದಲ್ಲಿನ ಕ್ಷೇತ್ರಾಧಿ ದೇವತೆಗಳನ್ನು ಸ್ತುತಿಸಿದ್ದಾರೆ. ಭಕ್ತ ಕೊಟ್ಟ ಇಟ್ಟಿಗೆ ಮೆಟ್ಟಿ ನಿಂತ, ಕರಗಳನ್ನು ಕಟಿಯಲ್ಲಿಟ್ಟು ಶರಣು ಬಂದ ಭಕ್ತಗೆ ಪರಿ

ಮಿತಿಯ ತೋರುವ ಪುಂಡರೀಕ ವರದ ಪಾಂಡುರಂಗನನ್ನು ಒಂದು ಕೃತಿಯಲ್ಲಿ ಕೊಂಡಾಡಿದ್ದಾರೆ.

ಬೇಲೂರ ಚೆನ್ನಕೇಶವನನ್ನು, ಬಹು ಸುಂದರಕಾಯ, ಪರಮ ಶಂಖ ಅರಿಮುದದಿ ಗಧಾದರನೆ ಪೀತಾಂಬರ ಶ್ರೀವತ್ಸ ಕಸ್ತೂಭದಲತಿ ರೋಚಿಪನೆ ಎಂದು ವರ್ಣಿಸಿ ಪಾಲಿಸೆನ್ನ ವೇಲಾಪುರ ಚೆನ್ನಪ ಎಂದು ಕೇಳಿಕೊಂಡಿದ್ದಾರೆ.

ಶ್ರೀ ಮನ್ನಾರಾಯಣನ ಪ್ರೀತಿಯ ಮಡದಿ ಲಕ್ಷ್ಮೀದೇವಿಯನ್ನು ಅಮ್ಮಾ ಲಕುಮಿದೇವಿ, ನಿಮ್ಮ ರಸನ ತೋರೆ, ನಿಮ್ಮ ಮಾತಿಗೆ ಹರಿ ಸಮ್ಮತನಾಗುವ, ತತ್ವೇಶರೆಲ್ಲರು ನಿತ್ಯಾಧೀನರು ನಿಮಗೆ ಭೃತ್ಯಗೆ ನಿಜ ಹರಿಭಕ್ತಿ ಕೊಡುವಂತೆ ಪೇಳು ಎಂದು ಪ್ರಾರ್ಥಿಸಿದ್ದಾರೆ. ಹಾಗೆಯೇ ಮುಖ್ಯಪ್ರಾಣನ ಅವತಾರ ತ್ರಯಗಳನ್ನು,ಸರಸ್ವತೀ ಭಾರತೀಯರನ್ನು, ರುದ್ರ ಪಾರ್ವತಿಯರನ್ನು ತಮ್ಮ ಕೃತಿಗಳಲ್ಲಿ ಸ್ತುತಿಸಿದ್ದಾರೆ.

ಹರಿದಾಸ ಸಾಹಿತ್ಯದಲ್ಲಿ ವಿಶೇಷವಾಗಿ ಕಂಡು ಬರುವ ದಶಾವತಾರ ಸ್ತುತಿಯಾಗಲೀ, ಕೃಷ್ಣಲೀಲಾವರ್ಣನೆಯಾಗಲೀ ಪ್ರದ್ಯುಮ್ನತೀರ್ಥರ ಕೃತಿಗಳಲ್ಲಿ ವಿರಳವಾಗಿದೆ. ಕೇವಲ ಒಂದು ಕೃತಿಯಲ್ಲಿ ದಶಾವತಾರಸ್ತುತಿಯಿದೆ. ಕೃಷ್ಣನ ಕೊಳಲ ಗಾನ ಒಂದು ಹಾಡಿನಲ್ಲಿ ಮನೋಜ್ಞವಾಗಿ ಬರ್ಣಿತಗೊಂಡಿದೆ.

ಮುರಳಿಯ ಧ್ವನಿಯ ಮಾಡೋ ಮುರಾರೇ॥
ವಾಮಭುಜದಿ ದಿವ್ವಾಮ ಕಪೋಲಿಟ್ಟು
ಅವರ ನಿನ್ನಯೆ ಭ್ರೂ ವಿಲಾಸದಿಂದ
ಆವು ಮೆಚ್ಚುವಂತೆ ಸಾವಧಾನದಿಂದ
ಶ್ಯಾಮಸುಂದರ ಬಲು ಕೋಮಲ ಬೆರಳಲ್ಲಿ
ಪ್ರೇಮದಿಂದೊಪ್ಪುತ ಶ್ರೀಮನೋರಮನೆ ॥
ಕೆಳ ಕೆಂದುಟಿಯಲ್ಲಿ ಕೊಳಲ ನಿಲ್ಲಿಸಿ ಬೇಗ
ನಳಿನ ಮುಟಿಯೆರನ್ನು ಒಲಿಸುತಲೊಮ್ಮೆ॥

ಪ್ರದ್ಯುಮ್ನತೀರ್ಥರಿಗೆ ಶ್ರೀಮದಾನಂದತೀರ್ಥರಿಂದ ಪ್ರಾರಂಭಗೊಂಡು ಸಮಸ್ತ ಗುರುಪರಂಪರೆಯಲ್ಲಿ ಪರಮ ಭಕ್ತಿ, ಅದಕ್ಕೆಂದೆ ಗುರುವೃಂದಕ್ಕೆ ನಮಿಸುತ್ತಾ ಹೀಗೆ ಸ್ತುತಿಸಿದ್ದಾರೆ.

ಪ್ರೇಮದಿಂದೊಂದಿಸುವೆ ಗುರುವೃಂದಕೆ
ಕಾಮಧೇನುವಿನಂತೆ ಕೊಡಲೆಮಗಭೀಷ್ಟವನು
ಮಾನನಿಧೀಶ ನಮ್ಮ ಶ್ರೀನರಹರಿಯ ಚರಣವನು
ಕಾಣಿಸುವ ಜ್ಞಾನವನ್ನು ದಾನ ಮಾಡಲಿ ಎಂದು

ಶ್ರೀ ಮದುತ್ತರಾದಿ ಮ ಾಧೀಶರಾದ ಸತ್ಯಜ್ಞಾನ ತೀರ್ಥರನ್ನು ಮೂರು ಕೃತಿಗಳಲ್ಲಿ ಪರಿಪರಿಯಾಗಿ ಸ್ತುತಿಸಿದ್ದಾರೆ. ಮಧ್ವಮತ ಸ್ಥಾಪಕರು, ಗೋದಾ ತೀರದಿ ಶೋಭಿಪರು ಗುರು ಮಧ್ವರಾಯರ ಪರಮ ಪ್ರೀತಿಯ ಪಡೆದವರು, ಶಾಪಾನುಗ್ರಹ ಶಕ್ತರು ಎಂದೆಲ್ಲಾ ಕೊಂಡಾಡಿದ್ದಾರೆ. ಅವರು ತೋರಿದ ಅನೇಕ ಮಹಿಮೆಗಳನ್ನು ಚಿತ್ರಿಸಿದ್ದಾರೆ. ತಮಗೆ ಸನ್ಯಾಸದೀಕ್ಷೆ ನೀಡಿದ ಕುಂದಾಪುರ ವ್ಯಾಸರಾಯ ಮ ಾಧೀಶರಾದ ಶ್ರೀ ಲಕ್ಷ್ಮೀಪ್ರಿಯತೀರ್ಥರ ಮಹಿಮೆಗಳನ್ನು ಹೊಗಳಿದ್ದಾರೆ.

ಸದ್ವೈಷ್ಣವ ಕುಮುದಕಾಭಿ
ವೃದ್ಧಿ ತರುವಗೋಸುಗ
ಮಧ್ವಮತಾಬ್ಧಿಯಲ್ಲಿ
ಉದ್ಭವಿಸಿದ ಚಂದ್ರರ॥
ವ್ಯಾಸಮುನಿಗೆ ಒಲಿದ ಕೃಷ್ಣನ
ಸೋಸಿನಿಂದ ಪೂಜಿಸಿ
ವ್ಯಾಸಸೂತ್ರ ಭಾಷ್ಯ ಉಪ
ನ್ಯಾಸಮಾಡಿ ಮೆರೆವರ।

ಹಾಗೆಯೇ ತುಂಗಾತೀರದಿ ನಿಂತ ಉಪೇಂದ್ರ ಕರ ಕಮಲಜಾತ ವಾದೀಂದ್ರರನ್ನು ಹಯವದನ ಗತಿ ಪ್ರಿಯ ವಾದಿ ರಾಜರನ್ನು, ಪರಮ ನಿರ್ಮಲಜ್ಞಾನ ನೀಡುವ ಬ್ರಹ್ಮಣ್ಯತೀರ್ಥರನ್ನು, ಸುಧಾಕಾರಿ ಜಯತೀರ್ಥರನ್ನು,ಸತ್ಯಧರ್ಮತೀರ್ಥರನ್ನು, ತಮ್ಮ ಗುರುಸ್ತುತಿ ಮಾಲಿಕೆಯಲ್ಲಿ ಸ್ತುತಿಸಿದ್ದಾರೆ.

ಪ್ರದ್ಯುಮ್ನ ತೀರ್ಥರ ಎಲ್ಲ ಕೃತಿಗಳೂ ಕೀರ್ತನೆಯ ಪ್ರಕಾರಕ್ಕೇ ಸೇರುತ್ತವೆ. ಸುಳಾದಿ, ಉಗಾಭೋಗ, ಮುಂತಾದುವು ಕಂಡು ಬರುವುದಿಲ್ಲ. ಭಾಷೆ ಸರಳವಾದ ಸುಲಲಿತವಾದ ಕೆದಳೀಪಾಕ, ಕೆಲವೆಡೆ ಪ್ರಾಸಾನುಪ್ರಾಸಗಳಿಂದ ಕೂಡಿದ ಶಬ್ದ ಮಾಧುರ್ಯ ಮನ ಸೆಳೆಯುತ್ತದೆ. ಆತ್ಮ ಶೋಧನೆಯಿಂದ ಪರಿಶುದ್ಧಗೊಂಡು ಹರಿ ಸೇವೆಯನ್ನು ಬಯಸುವ ಸಾಧಕ ಜೀವಿಯ ಮನಸ್ಥಿತಿ ಈ ಕೃತಿಗಳಲ್ಲಿ ಪ್ರತಿ ಬಿಂಬಿತಗೊಂಡಿದೆ.

ತಾವು ನಂಬಿದ್ದ ತತ್ವಜ್ಞಾನ ಮತ್ತು ಸಿದ್ಧಾಂತದ ಮಿತಿಯಲ್ಲಿಯೇ ಕೃತಿರಚನೆ ಮಾಡಿದ್ದಾರೆ. ದಾಸ್ಯಭಕ್ತಿ ಮತ್ತು ಅನನ್ಯ ಶರಣಾಗತಗಳೇ ಇವರ ಕೀರ್ತನೆಗಳ ಮುಖ್ಯಭಾವ. ತಾವು ನಂಬಿನೆಟ್ಟ ನಡೆದ ಮಧ್ವಮತವನ್ನು ಮನಸಾರ ಹಾಡಿ ಕೊಂಡಿದ್ದಾರೆ.

ಮತವೆಂದರೆ ಮಧ್ವಮತವೇ ಮತವು
ಶೃತಿ ಸ್ಮೃತಿ ತತಿಗೆ ಸಮ್ಮತವಾದುದರಿಂದ
ಮಧುವೆಂದರಾನಂದ ಒದಗಿ ಬರುವುದು ಸತ್ಯ
ಮಧುವೈರಿ ಒಲಿದು ಪಾದವ ತೋರುವ
ವ ವರ್ಣವೆಂದರೆ ಶ್ರೀ ವರನ ಜ್ಞಾನವು

ಪವನಪಿತ ತಾ ಒಲಿದು ಈವನದನು
ಮತವೆಂದರೆ ನಮ್ಮ ರತಿಪತಿ ಪಿತ ಭವ
ಸತತ ಸಮ್ಮತಿಯಿತ್ತು ಬತಿಯಳಿವದೈ
ಕ್ಷಿತಿಯೊಳಗೆ ಪಿತ ಶ್ರೀ ನರಹಿರಿಯ ಪದಪದುಮ
ಅತಿ ತೀವ್ರದಲ್ಲಿ ತೋರಿ ಖ್ಯಾತಿ ತಂದೀವುದಕೆ

ಮಧ್ವಮತಿನಿಷ್ಠೆಯ ಪರಾಕಾಷ್ಠೇ ಎದ್ದು ಕಾಣುತ್ತದೆ ಈ ಕೃತಿಯಲ್ಲಿ. ಶ್ರೀ ಪ್ರದ್ಯುಮ್ನ ತೀರ್ಥರ ಕೃತಿಗಳು ತಮ್ಮ ಸರಳ ಸಹಜ ಭಾವಾಭಿವ್ಯಕ್ತಿಯಿಂದ ದೃಢವಾದ ಶ್ರೀ ಹರಿಭಕ್ತಿಯಿಂದ ಚೇತೋಹಾರಿಯಾಗಿದ್ದು ಹರಿದಾಸ ಸಾಹಿತ್ಯಕ್ಕೆ ಗಣನೀಯ ವಾದ ಕೊಡುಗೆಯಾಗಿದೆ.

# ತಿರುಮಲೆಯಲ್ಲಿ ಜ್ಯೇಷ್ಠಾಭಿಷೇಕ

ತಿರುಮಲೆಯಲ್ಲಿ ಜ್ಯೇಷ್ಠಾಭಿಷೇಕವನ್ನು ಜೇಷ್ಠ ಶುಕ್ಲ ತ್ರಯೋದಶಿಯಂದು ಆರಂಭಿಸಿ, ಜೇಷ್ಠ ಶುಕ್ಲ ಚತುರ್ದಶಿ ಹಾಗೂ ಜೇಷ್ಠದ ಪೌರ್ಣಮಿಯಂದು ಸಮಾಪ್ತಿಯಾಗುವಂತೆ ಮೂರು ದಿನಗಳ ಕಾಲ ವಿರಾಜಮಾನವಾಗಿ ನೆರವೇರಿಸುತ್ತಾರೆ. ಈ ಉತ್ಸವವನ್ನು ವೈಖಾನಸಾಗಮದ ಪ್ರಕಾರ ನಿರ್ವಹಿಸುವುದರಿಂದ, ವಿಷ್ಣುವಿನ ಅರ್ಚಾವತಾರ ಅತ್ಯಂತ ತೇಜೋಮಯವಾಗುವುದೆಂದು 'ಕ್ರಿಯಾಧಿಕಾರ' ತಿಳಿಸುತ್ತದೆ.

ಉತ್ಸವ ನಡೆಯುವ 15 ದಿನಗಳ ಮುಂಚೆಯೇ ಶ್ರೀನಿವಾಸ ಅರ್ಚಾಮೂರ್ತಿಗಳಾದ ಶ್ರೀ, ಭೂ ಸಮೇತ ನಾದ ಮಲೆಯಪ್ಪಸ್ವಾಮಿಗೆ , ಹಿಂದಿನ ವರ್ಷ ಸಮರ್ಪಿಸಿದ್ದ ಸ್ವರ್ಣ ಕವಚಗಳನ್ನು ಸಡಲಿಸುತ್ತಾರೆ.

ಜ್ಯೇಷ್ಠಾಭಿಷೇಕದ ಮೊದಲನೆಯದಿನ, ಶ್ರೀನಿವಾಸನ ಮಧ್ಯಾಹ್ನಿಕ ಆರಾಧನೆಯ ನಂತರ ಮಲೆಯಪ್ಪ ಸ್ವಾಮಿ ಹಾಗೂ ಉಭಯ ದೇವೇರಿಯರನ್ನು ಆಲಯದ ವಿಮಾನ ಪ್ರಕಾರದಲ್ಲಿ ಪ್ರದಕ್ಷಿಣೆಯಾಗಿ ಕರೆತಂದು, ಸಂಪಂಗಿ ಪ್ರಾಕಾರದ ಕಲ್ಯಾಣ ಮಂಟಪದಲ್ಲಿ ಆಸೀನ ಪಡಿಸುತ್ತಾರೆ. ವೈಖಾನಸ ಭಗವಚಾಸ್ತ್ರದ ವಿಧಿಯಲ್ಲಿ ಆಚಾರ್ಯರು ದೇವತಾಪ್ರಾರ್ಥನೆ. ವಿಷ್ವಕ್ಸೇನ ಆರಾಧನೆ, ಸ್ವಸ್ತಿ ಪುಣ್ಯಾಹವಾಚನೆ, ಅಂಕುರಾರ್ಪಣೆ ರಕ್ಷಾ ಬಂಧನ, ಅಗ್ನಿಪ್ರಣಯನ ಮುಂತಾದ ಕ್ರಿಯೆಗಳನ್ನು ಶಾಸ್ತ್ರೋಕ್ತವಾಗಿ, ವೇದಮಂತ್ರಗಳ ನಡುವೆ ನಿರ್ವಹಿ ಸುತ್ತಾರೆ. ನಂತರ ಅಷ್ಟೋತ್ತರ ಶತಕಲಸ ಸ್ನಪನ ತಿರುಮಂಜನ ಅಂದರೆ 108 ಕಲಶಗಳಲ್ಲಿ ವಿವಿಧ ದ್ರವ್ಯ ಗಳನ್ನು ತುಂಬಿ, ಮಲೆಯಪ್ಪ ಸ್ವಾಮಿಗೆ ಅಭಿಷೇಕಿಸುತ್ತಾರೆ.

ಮೂರನೆಯ ದಿನದಂದು ಕವಚಗಳನ್ನು ಸಮರ್ಪಿಸುವ ಮುಂಚೆ ಶ್ರೀ - ಭೂ ಸಮೇತನಾದ ಮಲೆಯಪ್ಪ ಸ್ವಾಮಿಯ ವಿಗ್ರಹಗಳಿಗೆ ಸುಗಂಧ ತೈಲಗಳನ್ನು ಸಮರ್ಪಿಸಿ ನಿಜ ತಿರುಮೇನಿ ಶ್ರೀಗಂಧ ಲೇಪಿಸಿ, ಮತ್ತದರ ಮೇಲೆ ತೆಳುವಾದ ಹೊಸದಾದ ಶ್ವೇತವಸ್ತ್ರವನ್ನು ಅಲಂಕರಿಸಿ, ಕವಚಧಾರಣೆಯನ್ನು ಆಚಾರ್ಯರು ಅತಿ ಜಾಗರೂಕತೆಯಿಂದ ಮಾಡುತ್ತಾರೆ. ಮಹತ್ವಪೂರ್ಣವಾದ ಈ ಜ್ಯೇಷ್ಠಾಭಿಷೇಕ ಉತ್ಸವವನ್ನು ತಿರುಮಲೆಯಲ್ಲಿ ಅತ್ಯಂತ ವೈಭವೋಪೇತವಾಗಿ, ಮೂರು ದಿನಗಳ ಕಾಲ ನೇತ್ರಾನಂದಕರವಾಗಿ ಆಚರಿಸುತ್ತಾರೆ. ಎರಡನೆಯ ದಿನದ ಹಾಗೂ ಮೂರನೆಯ ದಿನ ಸಾಯಂಕಾಲ ಸಮಯದ ಉತ್ಸವದಲ್ಲಿ ಮಲೆಯಪ್ಪನನ್ನು ಮುತ್ತಂಗಿ ಹಾಗೂ ಸ್ವರ್ಣಕವಚದಲ್ಲಿ ಸುಶೋಭಿತನಾಗಿರುವುದನ್ನು ನೋಡಬಹುದು.



# ಜೂನ್ 2025 ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್



**ಮೇಷ**

ವ್ಯಕ್ತಿಗತ ಗೌರವ ಸ್ಥಾನ್ನೋನ್ನತಿ. ಇತರರೊಂದಿಗಿನ ಸೂಕ್ತ ಒಡನಾಟದಿ ಅನುಬಂಧ ಬೆಳೆದು ಅವರ ಅಭಿಮಾನ ಉಂಟಾಗುವುದು. ಉನ್ನತ ಶಿಕ್ಷಣ ವಿಷಯಗಳಲ್ಲಿ ಮುನ್ನಡೆ. ಓದಿನಲ್ಲಿ ವಿದ್ಯಾರ್ಥಿಗಳು ವಿರಾಜಿಸುವರು. ಸತ್ಪಾತ್ರಕ್ಕೆ ಖರ್ಚು. ಆಕಸ್ಮಿಕ ಧನಲಾಭ ಉಂಟಾಗಲಿದೆ.



**ವೃಷಭ**

ಇತರರೊಂದಿಗೆ ಸ್ನೇಹಪೂರಕವಾದ ಧೋರಣೆ ಅಗತ್ಯವಿದೆ. ತಲೆನೋವು ಮತ್ತು ಕಣ್ಣಿನ ಸಮಸ್ಯೆಗಳಿಂದ ಝುರ್ಝುರಿತರಾಗುವಿರಿ. ವೈದ್ಯರನ್ನು ಸಂಪರ್ಕಿಸುವಿರಿ. ಮಿಶ್ರಫಲಗಳುಂಟಾಗಲಿವೆ. ಮಾಸದ ಪೂರ್ವಾರ್ಧದಲ್ಲಿ ಆಕ್ರೋಶಯುಕ್ತರಾಗುವಿರಿ. ಹಾಗೂ ಉತ್ತರಾರ್ಧದಲ್ಲಿ ಸಂಯಮದಿಂದ ಎಲ್ಲದರಲ್ಲಿಯೂ ಜಯವುಂಟಾಗಲಿದೆ. ದೈವ ದರ್ಶನ ತೃಪ್ತಿ ತರಲಿದೆ.



**ಮಿಥುನ**

ಸ್ನೇಹಿತರು, ಬಂಧುಗಳು ಮತ್ತು ಒಡಹುಟ್ಟಿದವರೊಂದಿಗೆ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಲು ಹೆಚ್ಚು ಪ್ರಾಧಾನ್ಯತೆ ಕೊಡುವಿರಿ. ದೂರ ಪ್ರಯಾಣ ಮಾಡಲಿದ್ದೀರಿ. ನಿಮ್ಮ ಮನಸ್ಸು ಆಹ್ಲಾದಕರವಾದ ಪ್ರದೇಶದಲ್ಲಿ ಹೆಚ್ಚಾಗಿ ಇರುವ ಅವಕಾಶಗಳಿವೆ . ಹಣವನ್ನು ಖರ್ಚು ಮಾಡಲು ಹಿಂಜರಿಯಲಾರಿರಿ.



**ಕರ್ಕಾಟಕ**

ವೃತ್ತಿ ವ್ಯವಹಾರಗಳಲ್ಲಿ ಹೊಸ ಸವಾಲುಗಳನ್ನು ಎದುರುಸುವಿರಿ. ಪ್ರಭುತ್ವ ಪ್ರೋತ್ಸಾಹ - ಪಾರಿತೋಷಕಗಳು ಲಭಿಸಲಿವೆ. ಪ್ರೇಮ ವ್ಯವಹಾರಗಳಲ್ಲಿ ಅಪೇಕ್ಷಿಸಿ ಫಲಗಳುಂಟಾಗಲಿವೆ. ವೃತ್ತಿ ಉದ್ಯೋಗಗಳಲ್ಲಿ ಸಂತೃಪ್ತಿಕರವಾದ ವಾತಾವರಣವಿರುತ್ತದೆ. ಕುಟುಂಬ ವೃದ್ಧಿಯಾಗಲಿದೆ.



**ಸಿಂಹ**

ಆಕಸ್ಮಿಕ ಧನಲಾಭಗಳು ಉತ್ತಮ ಫಲಗಳನ್ನು ತರಲಿದೆ. ವೃತ್ತಿಪರವಾದ ರಂಗಗಳಲ್ಲಿ ಹೆಸರು-ಖ್ಯಾತಿವೃದ್ಧಿಯಾಗಲಿವೆ. ವೃತ್ತಿ-ಉದ್ಯೋಗಗಳಲ್ಲಿ ಅಧಿಕಾರಿಗಳ ಪ್ರಯೋಜನಕಾರಿಯಾಗಲಿವೆ ಎಲ್ಲರಿಗೂ ಬೇಕಾದವರಾಗುವಿರಿ.



**ಕನ್ಯೆ**

ಉದ್ಯೋಗದಲ್ಲಿ ಪ್ರಮೋಷನ್ ಅಥವಾ ವೇತನಾಭಿವೃದ್ಧಿ . ಖಚಿತವಾಗಲಿ ಸ್ಥಾನಪಲ್ಲಟದ ಸೂಚನೆಗಳಿವೆ. ಅಧಿಕಾರಿಗಳಿಂದ ಮಾನ ಸನ್ಮಾನಗಳಿವೆ. ಕುಟುಂಬ ಸುಖ ಸಂತೋಷದಿಂದರಲಿದೆ. ಮಕ್ಕಳು ಉನ್ನತ ಸ್ಥಾನ ಉದ್ಯೋಗಗಳಲ್ಲಿ ನಿಯುಕ್ತರಾಗುತ್ತಾರೆ. ಅವರನ್ನು ಮತ್ತಷ್ಟು ವಿಜಯಗಳು ವರಿಸಲಿವೆ.



**ತುಲಾ**

ಭೂ ಸ್ಥಿರಾಸ್ತಿಗಳನ್ನು ಮಾರ್ಪಾಟು ಮಾಡುವುದರಿಂದ ಲಾಭ ಪಡೆಯಲಿದ್ದೀರಿ. ಆದಾಯ ಸಮತೂಗಲಿದೆ. ಗುರುಬಲವಿದೆ. ಎಲ್ಲದರಲು ಮುನ್ನಡೆಯುವಿರಿ ತಂಪಾದ-ಆಹ್ಲಾದಕರವಾದ ಪರ್ಯಟನಾ ಸ್ಥಳಗಳಿಗೆ ಭೇಟಿ ನೀಡುತ್ತಾರೆ .



**ವೃಶ್ಚಿಕ**

ವೃತ್ತಿ ವ್ಯವಹಾರಗಳಲ್ಲಿ ಮುನ್ನಡೆ. ಸಮಾಜ ಗೌರವ ಹೆಚ್ಚಾಗಲಿದೆ. ಅಧಿಕಾರ ಬರಲಿದೆ. ನಿಮ್ಮ ಸಲಹೆಗಳಿಗೆ ಪ್ರಜೆಗಳು ಕಿವಿಗೊಡುವರು ನೀವು ಸಂಪ್ರದಾಯ ಆರಕ್ಷಕರಾಗಿ ಗುರುತಿಸಲ್ಪಡುವಿರಿ. ಹೊಸ ವಿಷಯಗಳನ್ನು ಕಲಿಯಲು ಉತ್ಸಾಹ ತೋರಿ ವಿಜಯವನ್ನು ಸಾಧಿಸುವಿರಿ.



**ಧನಸ್ಸು**

ಉನ್ನತ ವಿದ್ಯಾವಕಾಶಗಳು ಬರಲಿವೆ. ನಿಮ್ಮ ಪರಿಜ್ಞಾನವನ್ನು ಬಳಸಿ ಸಾಂಕೇತಿಕ ಪರವಾದ ಸಂಸ್ಥೆಗಳನ್ನು ಸ್ಥಾಪಿಸಿ ಹೊಸ ಆದಾಯ ಮಾರ್ಗಗಳನ್ನು ಅನ್ವೇಷಿಸುವಿರಿ. ಸ್ವಲ್ಪ ಮಟ್ಟಿಗೆ ಹೆಸರು ಮತ್ತು ಆದಾಯ ವೃದ್ಧಿಯಾಗುತ್ತದೆ. ಪುತ್ರ ಸಂತಾನದ ವಿಷಯದಲ್ಲಿ ಶುಭವಾರ್ತೆಗಳು ಬರುತ್ತವೆ. ಎಲ್ಲದರಲ್ಲೂ ಜಯವುಂಟಾಗುತ್ತದೆ.



**ಮಕರ**

ಇತರರನ್ನು ಸೋಲಿಸಿ ಸ್ಪರ್ಧಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿಜಯವನ್ನು ಸಾಧಿಸುವಿರಿ. ಈ ರಾಶಿಯಲ್ಲಿನ ಪ್ರತಿಯೊಬ್ಬರು ಈ ಮಾಸದಲ್ಲಿ ಯಾವುದೋ ಒಂದು ವಿಧದಲ್ಲಿ ಗುರುತಿಸಲ್ಪಟ್ಟು ಲಾಭ ಪಡೆದು ಕೊಳ್ಳುವರು. ಸಂಪತ್ತು ಸಹಾವೃದ್ಧಿಯಾಗಲಿದೆ. ಸಂತೋಷದಿಂದ ಮತ್ತು ಆರೋಗ್ಯದಿಂದಿರುವರು. ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವಿರಿ.



**ಕುಂಭ**

ದೂರ ಪ್ರಾಂತ್ಯಗಳಿಗೆ ಪ್ರಯಾಣ ವಿದೇಶಿ ಮಾರಕ ದ್ರವ್ಯಗಳನ್ನಾಶ್ರಯಿಸುವಿರಿ. ಹೆಂಡತಿ - ಪರಿವಾರದಿಂದ ದೂರವಿರುವಿರಿ. ಆದರೂ ಅವರೊಂದಿಗೆ ಸತ್ಸಂಬಂಧಗಳನ್ನು ಬೆಳೆಸಿಕೊಳ್ಳುವಿರಿ. ಸ್ಥಾನ ಪಲ್ಲಟದ ಅವಕಾಶಗಳ ನಿಮ್ಮ ಮಕ್ಕಳು ಉನ್ನತ ಹುದ್ದೆಗಳನ್ನು ಲಹರಿಸುವರು. ಸಂತಾನ ಅಭಿವೃದ್ಧಿ ಉಂಟಾಗಲಿದೆ.



**ಮೀನ**

ವ್ಯಾಪಾರ ಅಭಿವೃದ್ಧಿಯಾಗಲಿದೆ. ಒಡಹುಟ್ಟಿದವರು ಮತ್ತು ಸ್ನೇಹಿತರೊಂದಿಗೆ ಆನಂದಕರವಾದ ಸಮಯವನ್ನು ಕಳೆಯುವಿರಿ. ದಾಂಪತ್ಯ ಜೀವನ ವಿಕಸಿಸಲಿದೆ. ಗೃಹದಲ್ಲಿ ಶುಭ ಕಾರ್ಯಗಳಾಗಲಿವೆ . ಧೈರ್ಯ ಸಾಹಸಗಳನ್ನು ಪ್ರದರ್ಶಿಸಿ ಇತರರಿಗೆ ಮಾದರಿಯಾಗಿರುವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

**– ಡಾ|| ಅನಸೂಯ ಎಸ್. ರಾಜೀವ್**

**1.ವಿಷ್ಣು ಸಾಲಿಗ್ರಾಮದ ರೂಪದಲ್ಲಿರುವ ಕಾರಣವೇನು?**

**ಉತ್ತರ :** ಹಿಂದೆ ಒಬ್ಬ ಜಲಂಧರ ಎಂಬ ಹೆಸರಿನ ರಾಕ್ಷಸ ರಾಜನಿದ್ದ. ಅವನು ಶಿವನ ಮೂರನೇ ಕಣ್ಣಿನಿಂದ ಹೊರಟ ಬೆಂಕಿಯ ಜ್ವಾಲೆಯಿಂದ ರೂಪುಗೊಂಡ. ಆದ್ದರಿಂದಲೇ ಅವನು ಅತ್ಯಂತ ಶಕ್ತಿಶಾಲಿ ಯೋಧನಾಗಿದ್ದ. ಅವನು ವೃಂದ ಎಂಬ ಹೆಸರಿನ ರಾಕ್ಷಸಿ ರಾಜಕುಮಾರಿಯನ್ನು ಮದುವೆಯಾಗಿದ್ದ. ವೃಂದ ಜಲಂಧರನನ್ನು ಬಹಳ ಪ್ರೀತಿ ಮಾಡುತ್ತಿದ್ದಳು ಮತ್ತು ಅವನಿಗೆ ಶ್ರದ್ಧಾಭಕ್ತಿಯ ಪತ್ನಿಯಾಗಿದ್ದಳು. ಜಲಂಧರನು ದೇವತೆಗಳಿಗೆ ವಿರುದ್ಧವಾಗಿದ್ದು ಅವರೆಲ್ಲರನ್ನೂ ಸ್ವರ್ಗದಿಂದ ಹೊರಗೋಡಿಸಿದನು. ಅವನು ಅಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಿದನು. ದೇವತೆಗಳು ಭಗವಾನ್ ವಿಷ್ಣು ಮತ್ತು ಶಿವ ನೆಡೆಗೆ ಹೋಗಿ ಅವರ ಅವರ ಸಹಾಯಕ್ಕಾಗಿ ಪ್ರಾರ್ಥಿಸಿದರು. ಶಿವನಿಗೆ ತನ್ನ ಅಂಶವಿದ್ದ ಜಲಂಧರನನ್ನು ಎಂದೂ ಸೋಲಿಸಲು ಸಾಧ್ಯವಿಲ್ಲವೆಂದು ತಿಳಿದಿದ್ದನು. ಆದರೂ ಭಗವಾನ್ ಶಿವನು ಜಲಂಧರನ ಜೊತೆ ಯುದ್ಧ ಮಾಡಲು ಹೊರಟು ಬಿಟ್ಟನು. ಅವರಿಬ್ಬರ ಅನೇಕ ವರ್ಷಗಳ ಕಾಲ ನಡೆದರೂ ಜಲಂಧರನ ಪತ್ನಿಯ ನೈತಿಕತೆ ಮತ್ತು ಅವನ ಮೇಲಿಟ್ಟಿದ್ದ ಶ್ರದ್ಧಾ ಭಕ್ತಿಯು ಅವನಿಗೆ ರಕ್ಷಣೆ ಕೊಟ್ಟಿದ್ದರಿಂದ ಅವನನ್ನು ಸೋಲಿಸಲು ಸಾಧ್ಯವಾಗಲಿಲ್ಲ.

ಭಗವಾನ್ ವಿಷ್ಣುವಿನ ಅತ್ಯಂತ ಶ್ರೇಷ್ಠ ಭಕ್ತ ವೃಂದೆಯು ರಾಕ್ಷಸ ರಾಜಕುಮಾರಿ ಮತ್ತು ರಾಕ್ಷಸ ರಾಜನ ಪತ್ನಿಯಾಗಿದ್ದರೂ ಸಹ ಭಗವಾನ್ ವಿಷ್ಣುವನ್ನು ಆರಾಧಿಸುತ್ತಿದ್ದಳು. ಅವಳು ಭಗವಾನ್ ವಿಷ್ಣುವಿಗೆ ತನ್ನನ್ನು ಅರ್ಪಿಸಿಕೊಂಡು ಶ್ರದ್ಧಾ ಭಕ್ತಿಗಳಿಂದ ಅವನ ಮೇಲೆ ಸಂಪೂರ್ಣ ನಂಬಿಕೆಯಿಟ್ಟು ಆರಾಧಿಸುತ್ತಿದ್ದಳು. ಶಿವನು ಜಲಂಧರನನ್ನು ಸೋಲಿಸಲು ಸಾಧ್ಯವಾಗದಿದ್ದುದನ್ನು ಕಂಡು ದೇವತೆಗಳು ಭಗವಾನ್ ವಿಷ್ಣುವಿನ ಕಡೆಗೆ ತಿರುಗಿದರು. ಭಗವಾನ್ ವಿಷ್ಣು ಇತರ ಯಾವ ರೀತಿಯಲ್ಲೂ ಜಲಂಧರನನ್ನು ಸೋಲಿಸಲು ಸಾಧ್ಯವಿಲ್ಲವೆಂದು ಒಂದು ಕಪಟ ರೀತಿಯಲ್ಲಿ ವೃಂದೆಯ ಪಾವಿತ್ರ್ಯತೆಯ ಮೇಲೆ ಅಪವಾದ ಹೊರಿಸುವ ಕಾರ್ಯವನ್ನು ಮಾಡಿದನು. ಅವನು ಜಲಂಧರನ ವೇಷ ಧರಿಸಿ ವೃಂದೆಯ ಮುಂದೆ ಹೋಗಿ ನಿಂತನು. ವೃಂದೆಯು ಅವನನ್ನು ಜಲಂಧರನಲ್ಲವೆಂದು ಗುರುತಿಸಲಾಗದೆ ತನ್ನ ಪತಿ ಜಲಂಧರನೇ ಮರಳಿ ಬಂದಿದ್ದಾನೆಂದು ತಿಳಿದು ಅವನನ್ನು ಅಪ್ಪಿಕೊಂಡು ಬಿಟ್ಟಳು. ಹಾಗೆ ಮಾಡಿದ ತಕ್ಷಣವೇ ಪರಪುರುಷನನ್ನು ಅಪ್ಪಿಕೊಂಡಿದ್ದರಿಂದ ಅವಳ ಪಾತಿವ್ರತ್ಯೆಯನ್ನು ಕಳೆದುಕೊಂಡು ಬಿಟ್ಟಳು. ಇದರ ಫಲವಾಗಿ ಜಲಂಧರನಿಗೆ ತನ್ನ ಪತ್ನಿಯ ಪಾತಿವ್ರತೆಯ ರಕ್ಷಣೆ ಕಳೆದುಕೊಂಡಿದ್ದರಿಂದ ಶಿವನು ಅವನನ್ನು ಸ್ವಲ್ಪವೂ ಸಮಯವನ್ನು ಕಳೆಯದೆ ಕೊಂದು ಬಿಟ್ಟನು.

ವೃಂದೆಯು ತನ್ನ ತಪ್ಪನ್ನು ಅರಿತುಕೊಂಡು, ಭಗವಾನ್ ವಿಷ್ಣುವನ್ನು ತನ್ನ ನಿಜರೂಪವನ್ನು ತೋರಿಸೆಂದು ಕೇಳಿದಳು. ಅವಳಿಗೆ ತಾನು ನಂಬಿಕೆಯಿಟ್ಟು ಕೊಂಡಿದ್ದ ಆರಾಧ್ಯದೈವ ಭಗವಾನ್ ವಿಷ್ಣುವೇ ತನಗೆ ಮೋಸಗೊಳಿಸಿದನೆಂದು ಅವನಲ್ಲಿಟ್ಟಿದ್ದ ಶ್ರದ್ಧಾಭಕ್ತಿಯ ಛಿದ್ರವಾಗಿ ಹೋಯಿತು. ಭಗವಾನ್ ವಿಷ್ಣುವು ತನ್ನ ಪತಿಯ ವೇಷದಲ್ಲಿ ಬಂದು ತನ್ನನ್ನು ಮೋಸ ಮಾಡಿದನೆಂದು ಅವನಿಗೆ ಶಾಪವನ್ನು ಕೊಟ್ಟಳು. ಅವಳು ಭಗವಾನ್ ವಿಷ್ಣುವು ಒಂದು ಕಲ್ಲಾಗಿ ಹೋಗಲಿ ಎಂದು ಶಾಪವನ್ನು ಕೊಟ್ಟಳು. ವಿಷ್ಣು ಅವಳ ಶಾಪವನ್ನೊಪ್ಪಿಕೊಂಡು ಸಾಲಿಗ್ರಾಮ ಕಲ್ಲಾಗಿ ಪರಿವರ್ತಿತನಾದನು.

ವೃಂದೆಗೆ ತನ್ನ ಹೃದಯ ಒಡೆದು ಹೋದದ್ದರಿಂದ ತನ್ನ ಜೀವನವನ್ನು ಕೊನೆಗೊಳಿಸಲು ನಿರ್ಧರಿಸಿದಳು. ವಿಷ್ಣುವು ತನ್ನ ಅತ್ಯಂತ ಶ್ರೇಷ್ಠ ಭಕ್ತೆಯನ್ನು ಮೋಸ ಮಾಡಿದುದಕ್ಕಾಗಿ ತಪ್ಪಿತಸ್ಥ ಭಾವನೆ ಹೊಂದಿದನು. ಆ ಕಾರಣದಿಂದಾಗಿ ವೃಂದೆಗೆ ಅವಳ ಚಿತಾಭಸ್ಮದಿಂದ ತುಳಸಿ ಜನ್ಮತಾಳುತ್ತಾಳೆಂದು ಮತ್ತು ಅವಳನ್ನು ಸಾಲಿಗ್ರಾಮ ಕಲ್ಲಿಗೆ ಕೊಟ್ಟು ಮದುವೆಯಾಗುವಳೆಂದು ವರವನ್ನು ನೀಡಿದನು. ಹೀಗೆ ಆಗುವುದರಿಂದ ವೃಂದೆಯ ಪಾತಿವ್ರತೆಯು ಕಳಂಕಗೊಳ್ಳದೆ ಅವಳು ಶಾಶ್ವತವಾಗಿ ಭಗವಾನ್ ವಿಷ್ಣುವಿನ ಜೊತೆಯಲ್ಲಿರುವಳು. ಹಾಗೆ ಮುಂದುವರೆದು ವಿಷ್ಣು ತಾನು ತುಳಸಿ ಇಲ್ಲದೆ ಆಹಾರವನ್ನು ಸ್ವೀಕರಿಸುವುದಿಲ್ಲವೆಂದು ಹೇಳಿದನು. ಆದ್ದರಿಂದ ವಿಷ್ಣು ಪ್ರಸಾದದಲ್ಲಿ ಯಾವಾಗಲೂ ಒಂದು ತುಳಸಿ ಎಲೆ ಇಟ್ಟೇ ನೀಡಲಾಗುತ್ತದೆ. ಸಾಲಿಗ್ರಾಮದ ಜೊತೆ ತುಳಸಿ ವಿವಾಹ ದೇವ ಪ್ರಭೋಧಿನಿ ಏಕಾದಶಿಯ ಮಾರನೇ ದಿವಸ ಬರುವ ಉತ್ಥಾನ ದ್ವಾದಶಿಯಂದು ಸಾಲಿಗ್ರಾಮದ ಕಲ್ಲಿನ ಜೊತೆ ತುಳಸಿ ಗಿಡವನ್ನಿಟ್ಟು ಮದುವೆ ಮಾಡಿದರೆ ದಂಪತಿಗಳಿಗೆ ಅತ್ಯಂತ ಶ್ರೇಯಸ್ಕರವೆಂದು ಹೇಳುತ್ತಾರೆ. ಹಾಗೆ ಮಾಡುವುದರಿಂದ ತಮ್ಮ ವೈವಾಹಿಕ ಜೀವನಕ್ಕೆ ಸಂತೋಷ ಮತ್ತು ಏಳಿಗೆಯನ್ನೂ ತರುತ್ತದೆಯೆಂದು ಹೇಳುತ್ತಾರೆ.

# ಪುತ್ರ ವ್ಯಾಮೋಹಕ್ಕಿಂತ ರಾಜ್ಯದ ಹಿತ ಮುಖ್ಯ



- ಎ.ಆರ್. ರಘುರಾಮ
99161 38436

**ರಾಮಾಯಣದ ಸಂದರ್ಭ:**

ದಶರಥ ರಾಜನಿಗೆ ನಾಲ್ವರು ಮಕ್ಕಳು. ಇವರು ಲೋಕಕ್ಕೆ ಮಾದರಿಯಾಗಿ ಬೆಳೆದರು. ವಿಶ್ವಾಮಿತ್ರರು ಯಜ್ಞ ರಕ್ಷಣೆಗೆ ರಾಮ-ಲಕ್ಷ್ಮಣರನ್ನು ಕರೆದು ಕೊಂಡು ಹೋದರು. ಮರಳಿ ಬರುವಾಗ ಮಿಥಿಲಾ ನಗರದಲ್ಲಿ ಶಿವಧನಸ್ಸು ಮುರಿಯುವ ಸ್ಪರ್ಧೆ. ಶ್ರೀರಾಮನೇ ಮುರಿದ. ಸೀತೆಯೊಂದಿಗೆ ಕಲ್ಯಾಣವಾಯಿತು. ಮೂವರು ರಾಜಕುಮಾರಿಯರ ಜತೆ ರಾಮನ ತಮ್ಮಂದಿರ ಕಲ್ಯಾಣವೂ ಆಯಿತು.

ವಿನಯ, ಜ್ಞಾನ, ಮುಂದಾಲೋಚನೆ, ಸಮಯಪಾಲನೆ, ಶೌರ್ಯ, ಆಡಳಿತ ನಿರ್ವಹಣೆ, ಧರ್ಮಪಾಲನೆ, ಪ್ರಾಣಿದಯೆ ಇತ್ಯಾದಿಗಳಲ್ಲಿ ಶ್ರೀರಾಮನ ನಡೆ-ನುಡಿ ಹೇಗಿತ್ತು ಎಂಬುದು ಲೋಕಕ್ಕೇ ಗೊತ್ತಿತ್ತು. ದಶರಥನ ನಂತರ ಮೊದಲ ಪುತ್ರನೇ ರಾಜ ಆಗಬೇಕು. ಆದರೂ ಆಗ ಆತ ರಾಜ ಪುರೋಹಿತರು, ಋಷಿಗಳು, ಮಂತ್ರಿ ಸೇನಾಪತಿ, ಪುರಪ್ರತಿನಿಧಿ, ಸಾಮಂತರಾಜರ ಸಭೆ ಕರೆದ. ಅವರ ಮುಂದೆ ತನ್ನ ವಿಚಾರ ಮಂಡಿಸಿದ. ರಾಮನಿಗೆ ಪಟ್ಟ ಕಟ್ಟುವುದು ನನ್ನ ಆಸೆ. ನೀವು ಸಮಾಲೋಚಿಸಿ ತಿಳಿಸಿ ಎಂದು ವಿನಂತಿಸಿದ .


ಪ್ರಜಾ ಪ್ರಮುಖರು ಜಪ-ತಪ ಮಾಡಿದ ಸಾಧು-ಸಂತರು, ಆಯಾ ವಿಭಾಗದ ಆಡಳಿತದ ಜವಾಬ್ದಾರಿ ನಿರ್ವಹಣೆ ಮಾಡಿದ ಅನುಭವಿಗಳು, ಬದುಕಿನ ಏಳು-ಬೀಳು ಕಂಡ ಹಿರಿಯರು, ವೇದ-ಶಾಸ್ತ್ರ ಅಧ್ಯಯನ ಮಾಡಿದ ಪರಿಣತರು. ಜ್ಞಾನಿಗಳು ಸಭೆಯಲ್ಲಿ ನಿರ್ಣಯ ಮಾಡಿದ ಸಂಗತಿಯೇ ನಾಡಿಗೆ, ರಾಜ್ಯಕ್ಕೆ ಶ್ರೇಯ ಎಂಬುದು ಮಹಾರಾಜನ ಅಭಿಮತ. ಇಡೀ ಸಭೆ **"ಶ್ರೀರಾಮನೇ ಯುವರಾಜನಾಗಬೇಕು."** ಎಂದು ಒಕ್ಕೊರಲಿನಿಂದ ಅನು ಮೋದಿಸಿತು. ಸರ್ವರೂ ಏಕಮತದಿಂದ ರಾಮನನ್ನು ಒಪ್ಪಿದರು, ಅಪ್ಪಿದರು, ಅನುಮೋದಿಸಿದರು.

ನೂರಾರು ವರ್ಷ ದೊರೆತನ, ಸಾಮ್ರಾಟನ ಸ್ಥಾನ, ರಾಜ್ಯಭಾರ ಮಾಡಿ ಸಕಲ ವೈಭವಗಳನ್ನೂ ಕಂಡಿದ್ದ ದಶರಥ ಸ್ವಯಂ ನಿರ್ಧಾರ ಪ್ರಕಟ ಮಾಡಿದ್ದರೂ ಅದಕ್ಕೆ ಸಮ್ಮತಿ ದೊರಕುತ್ತಿತ್ತು. ಆದರೆ ಆತ ಎಂದೂ ಸ್ವೇಚ್ಛೆಯಾಗಿ ವರ್ತಿಸಲಿಲ್ಲ. ಪ್ರಭುತ್ವದ ಗೌರವಕ್ಕೆ ಆತ ಮಾದರಿಯಾಗಿದ್ದ.

ಹಿರಿಯ ಪುತ್ರನೇ ವಾರಸುದಾರನಾಗಿದ್ದರೂ, ಶ್ರೀರಾಮ ಸಕಲಗುಣ ಸಂಪನ್ನ ಎಂದು ದೇಶಕ್ಕೇ ತಿಳಿದಿತ್ತಾದರೂ, ಅವನಿಗೆ ಯಾರ ವಿರೋಧವೂ ಇಲ್ಲ ಎಂದು ವೇದ್ಯವಾಗಿದ್ದರೂ ದಶರಥ ಇದ್ದಕ್ಕಿದ್ದಂತೇ ನಿರ್ಧಾರ ಪ್ರಕಟ ಮಾಡಲಿಲ್ಲ. ಧರ್ಮಕ್ಕೆ, ನೀತಿಗೆ, ವಿವಿಧ ಸ್ಥಾನದಲ್ಲಿದ್ದ ಗಣ್ಯರಿಗೆ ವಿನೀತನಾಗಿ ಅಭಿಪ್ರಾಯ ಕೇಳಿದ. ಪಟ್ಟಾಭಿಷೇಕ ಪ್ರಸಂಗದಲ್ಲಿ ರಾಜನಾದವನು ಕೇವಲ ಪುತ್ರ ವ್ಯಾಮೋಹಕ್ಕೆ ಒಳಗಾದರೆ ದುರ್ಯೋಧನ ನಂಥವರ ಕೈಗೆ ರಾಜ್ಯ ದೊರಕುತ್ತದೆ. ಧರ್ಮ, ನೀತಿಗಳನ್ನು ಮರೆತರೆ ದುಶ್ಯಾಸನ ನಂಥವರಿಗೆ ಅಧಿಕಾರ ಸಿಗುತ್ತದೆ. ಆಯಾ ಸಂದರ್ಭಕ್ಕೆ ಅನುಸಾರವಾಗಿ ಧರ್ಮಮಾರ್ಗದಲ್ಲಿ, ಸತ್ಯದ ಹಾದಿಯಲ್ಲಿ, ಪ್ರಜ್ಞಾವಂತ ಸಮುದಾಯ ಸಮ್ಮತಿಸುವ ದಿಕ್ಕಿನಲ್ಲಿ ನಡೆದರೆ ಮಾತ್ರ ನಮ್ಮದು ರಾಮ ರಾಜ್ಯವಾಗುತ್ತದೆ. ಇದು ಇಂದಿಗೂ ಅನ್ವಯ.




ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.



ಬಣ್ಣವನ್ನು ತುಂಬಿರಿ.



ಮಕ್ಕಳೇ, ಶಿಷ್ಯನು ಯೋಗದಲ್ಲಿ ಸಂದೇಹವನ್ನು ವಾರಿಸಲು ಯಾವ ಹಾ ಯಲ್ಲಿ ಹೋದರೆ ಗುರುವಿನ ಹತ್ತಿರ ಸೇರಬಹುದು ಎಂದು ಕಂಡು ಹಿಡಿ ೨ರಿ ನೋಡೋಣ!

ಮಾರ್ಗ ಅನ್ವೇಷಣೆ





ಇಲ್ಲಿರುವ ಸಂಗೀತ ವಾದ್ಯಗಳಲ್ಲಿ ವಿದೇಶಿ ಸಂಗೀತದ ವಾದ್ಯ ಯಾವುದೆಂದು ಕಂಡು ಹಿಡಿ ೨ರಿ ಮಕ್ಕಳೇ ನೋಡೋಣ.

# ರಸ ಪ್ರಶ್ನೆಗಳು

01. ಚಾಂದ್ರಮಾನ ಪಂಚಾಂಗದ ತೃತೀಯ ಮಾಸ ಯಾವುದು? ....................
02. ಶನಿವಾರ ಪ್ರದೋಷ ಬಂದರೆ ಏನೆಂದು ಕರೆಯುತ್ತಾರೆ? ....................
03. ನದಿಗಳಲ್ಲಿ ಅತ್ಯಂತ ಪವಿತ್ರವಾದ ನದಿ ಯಾವುದು? ....................
04. ಶ್ರೀಮದ್ಭಾಗವತದಲ್ಲಿ ಮಾರ್ಕಂಡೇಯರ ಕಥೆ ಯಾವ ಸ್ಕಂದದಲ್ಲಿ ಇದೆ? ....................
05. ಪಶ್ಚಿಮದಿಕ್ಕಿಗೆ ಹಂಸರೂಪಿ ಪರಮಾತ್ಮ ಬಂದರೆ ಏನಾಗುತ್ತದೆ?....................
06. ಮೋಕ್ಷ ಪಡೆಯಲು ಯಾವ ಸಂಸ್ಕಾರಕ್ಕೆ ಒಳಪಡಬೇಕು?....................
07. ಸುಂಕಾತೊಣ್ಣೂರಿನಲ್ಲಿ ಯಾವ ದೇವಾಲಯವಿದೆ?....................
08. ಸಂಗೀತ ಎಂದರೇನು? ....................
09. ಅರ್ಜುನನು ಯಾರನ್ನು ಕುರಿತು ಧ್ಯಾನಿಸಿದನು?....................
10. ಶ್ರೀ ಪಾದರಾಜರ ಅಂಕಿತನಾಮವೇನು? ....................
11. ಯೋಗವು ಏನನ್ನು ಕಲಿಸುತ್ತದೆ?....................
12. ದೇವತೆಗಳು ಎಲ್ಲಿ ಸ್ನಾನ ಮಾಡಿದರು? ....................
13. ಪ್ರದ್ಯುಮ್ನ ತೀರ್ಥರು ಎಷ್ಟು ಕೀರ್ತನೆಗಳನ್ನು ರಚಿಸಿದ್ದಾರೆ? ....................
14. ಶಿವಧನಸ್ಸನ್ನು ಯಾರು ಮುರಿದರು?....................
15. ಹೆಬ್ಬಾವಿನ ರೂಪದಲ್ಲಿರುವ ರಾಕ್ಷಸ ಯಾರು?....................

## ಸೂಚನೆಗಳು

35 ಕ್ವಿಜ್

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.


**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

**ಪ್ರಧಾನ ಸಂಪಾದಕರು**
**ಸಪ್ತಗಿರಿ ಮಾಸಪ್ರತಿಕೆ**
**ತಿ.ತಿ.ದೇ. ಪ್ರಸ್,**
**2 ನೇ ಅಂತಸ್ತು**
**ಕೆ.ಟಿ. ರಸ್ತೆ,**
**ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ






1) ಪದ್ಮಾವತಿದೇವಿ 2) ವರಾಹಸ್ವಾಮಿ 3) ಗೋವಿಂದ ಗೋವಿಂದ 4) ವೇಂಕಟೇಶ್ವರಸ್ವಾಮಿ 5) ಆಕಾಶಗಂಗೆ 6) ಗರುಡವಾಹನ 7) ತಿರುಮಲೆ ಲಡ್ಡು 8) ಸಪ್ತಗಿರಿಶ

ಮಕ್ಕಳೇ! ಈ ಚಿತ್ರದಲ್ಲಿರುವ ಮಡಿಕೆಯಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ತಟ್ಟೆಯಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ !




1) iii 2) i 3) iv 4) vi 5) ii

ಮಕ್ಕಳೆ ಈ ಚಿತ್ರದಲ್ಲಿ ಕಾಣುವ ವಸ್ತುಗಳಲ್ಲಿ ಶಾಲಾ ಮಕ್ಕಳಿಗೆ ಬೇಕಾಗುವ ವಸ್ತುಗಳನ್ನು ಕಂಡು ಹಿಡಿಯಿರಿ ನೋಡೋಣ




ಚಿತ್ರ ಕಥೆ

# ಬಾಲ ಗೋಪಾಲನ ಲೀಲೆಗಳು


**ಕಥೆ : ತೆಲುಗು ಮೂಲ :** ಜೆ. ಪದ್ಮಿನಿ ಪ್ರಿಯದರ್ಶಿನಿ
**ಅನುವಾದ** : ಆರ್.ಕೆ.ವಿ.
**ಚಿತ್ರಗಳು** : ಕೆ. ದ್ವಾರಕನಾಥ್



ಬಾಲಕೃಷ್ಣ ಆ ಹೆಬ್ಬಾವಿನ ಬಾಯಿ ಒಳಗೆ ಹೋಗಲಿಲ್ಲ. ಅದರ ಗಂಟಲಿನ ಬಳಿಯೇ ನಿಂತು ಕೊಂಡನು
ನಾನು ನನ್ನ ಕೆಲಸವನ್ನು ಮಾಡಬೇಕು?
ಕೃಷ್ಣ ಏಕೆ ನಿಂತನು ಎಂದು ಮಾಯಾಧಾರಿ ಯೋಚಿಸಿದನು.
ಅಷ್ಟರಲ್ಲಿ ಬಾಲಗೋಪಾಲನು ತನ್ನ ದೇಹವನ್ನು ಬೆಳೆಸಿದನು.
ಕೃಷ್ಣನ ಇಡೀ ದೇಹವು ಅಗಾಧವಾಗಿ ಬೆಳೆಯಿತು.
ರಾಕ್ಷಸ ಹೆಬ್ಬಾವಿನ ಗಂಟಲನ್ನು ಹೊಳಲಾಯಿತು, ಉಸಿರಾಡುತ್ತಿಲ್ಲ
ನನಗೆ ಏನಾಗುತ್ತಿದೆ?
ಹೆಬ್ಬಾವು ಒದ್ದಾಡಿತು ತನ್ನ ತಲೆಯನ್ನು ನೆಲಕ್ಕೆ ಹೊಡೆದು ಕೊಳ್ಳಲು ಪ್ರಾರಂಭಿಸಿತು.
ನಾನು ವಿಮುಕ್ತನಾಗುತ್ತೇನೆಯೇ?
ಸ್ವಲ್ಪ ಸಮಯದ ನಂತರ ಅದರ ತಲೆ ಒಡೆದಿತ್ತು. ಗೋಪಾಲ ಮತ್ತು ಮಕ್ಕಳು ಅದರ ಬಾಯಿ ಯಿಂದ ಹೊರಬಂದರು.
ಎಲ್ಲವು ಭಗವಂತನಾದ ಬಾಲಕೃಷ್ಣನ ದಿವ್ಯಸ್ಪರ್ಶ ಮತ್ತು ಮಹಿಮೆ. ಹೆಬ್ಬಾವಿನಿಂದ ಬೆಳಕು ಬಂದು ಅವನಲ್ಲಿ ಲೀನವಾಯಿತು.
ಶಾಪದಿಂದ ಅಘಡು ರಾಕ್ಷಸ ಸರ್ಪನಾದನು. ಶ್ರೀಕೃಷ್ಣನ ಪ್ರವೇಶದಿಂದ ಅವನಿಗೆ ಮೋಕ್ಷ ದೊರೆಯಿತು.
ಧನ್ಯನಾದೆ ಸ್ವಾಮಿ! ನಿನ್ನ ದರ್ಶನವನ್ನು ಪಡೆದೆನು.
ನೀತಿ: ದೈವಮಹಿಮೆಯು ಎಷ್ಟು ಪಾಪಗಳನ್ನಾದರೂ ಕ್ಷಮಿಸುತ್ತದೆ.
ಲೋಕಾ ಸ್ಸಮಸ್ತಾ ಸ್ಸುಖಿನೋ ಭವಂತು!

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ದು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. K. Radha Ramana, M.A., M.Phil., Ph.D., P.G. Dip.in Ephigraphy, Dip.in Yoga on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



30-04-2025 ರಂದು ವಿಶಾಖಪಟ್ಟಣದಲ್ಲಿರುವ ಸಿಂಹಾಚಲ ಶ್ರೀ ವರಾಹಾಲಕ್ಷ್ಮೀನರಸಿಂಹ ಸ್ವಾಮಿಯವರಿಗೆ "ಅಕ್ಷಯ ತೃತೀಯ " ದಂದು ನಡೆದ ಚಂದನೋತ್ಸವದಲ್ಲಿ ತಿ.ತಿ.ದೇ., ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ. ಬಿ. ಆರ್. ನಾಯುಡು ರವರು



06-04-2025 ರಂದು ತೆಲಂಗಾಣ ರಾಜ್ಯದಲ್ಲಿರುವ ಭದ್ರಾಚಲಂನಲ್ಲಿ ಶ್ರೀ ರಾಮನವಮಿ ಸಂದರ್ಭವಾಗಿ ಶ್ರೀ ಸೀತಾರಾಮರ ಕಲ್ಯಾಣೋತ್ಸವ ಸಂದರ್ಭದಲ್ಲಿ ತಿ.ತಿ.ದೇ., ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ. ಬಿ. ಆರ್. ನಾಯುಡು ರವರು



23-04-2025 ರಂದು ಒಂಟಿಮಿಟ್ಟ ಶ್ರೀ ಕೋದಂಡ ರಾಮ ಸ್ವಾಮಿಯವರಿಗೆ ವಜ್ರಗಳೊಂದಿಗಿರುವ ಸ್ವರ್ಣ ಕಿರೀಟಗಳನ್ನು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ತಿ.ತಿ.ದೇ., ಕಾರ್ಯ ನಿರ್ವಹಣಾಧಿಕಾರಿ ಶ್ರೀ . ಜೆ. ಶ್ಯಾಮಲರಾವ್, ಐ.ಎ.ಎಸ್.,ರವರಿಗೆ ನೀಡುತ್ತಿರುವ ಪೆನ್ನಾ ಸಿಮೆಂಟ್ ಮುಖಂಡರಾದ ಶ್ರೀ ಪ್ರತಾಪ್‌ರೆಡ್ಡಿ ಯವರು.



06-04-2025 ರಂದು ತಿರುಮಲೆ ಸ್ವಾಮಿಯವರ ದರ್ಶನಾನಂತರ ಸುಪ್ರಿಂಕೋರ್ಟ್ ಪ್ರಧಾನ ನ್ಯಾಯಮೂರ್ತಿ ಸಂಜೀವ್ ಖನ್ನಾ ರವರಿಗೆ ಸ್ವಾಮಿಯವರ ತೀರ್ಥ ಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ರವರು



19-04-2025 ರಂದು ಸ್ವಚ್ಛಾಂಧ್ರ - ಸ್ವಚ್ಛ ತಿರುಮಲೆ ಸಂದರ್ಭವಾಗಿ ತಿರುಮಲೆ ಮೊದಲ ಘಾಟ್‌ನ ರಸ್ತೆಯ ಕೊನೆಯ ಹಂತದಲ್ಲಿ ಸಿಬ್ಬಂದಿಯರೊಂದಿಗೆ "ಸ್ವಚ್ಛಾಂಧ್ರ ಪ್ರತಿಜ್ಞೆ" ಯನ್ನು ಮಾಡಿಸುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ. ಸಿ.ಹೆಚ್. ವೆಂಕಯ್ಯಚೌದರಿ , ಐ.ಆರ್. ಎಸ್., ರವರು



20-04-2025 ರಂದು ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ಕೇಂದ್ರದಲ್ಲಿ ಭಕ್ತರಿಗೆ ಅನ್ನ ಸಂತರ್ಪಣೆ ಮಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು ರವರು

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-05–2025 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/2024-2026" Posting on 5th of Every Month



# ಅಪ್ಪಲಾಯ ಗುಂಟ,

# ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

# 07-06-2025 ರಿಂದ 15-06-2025 ರ ವರೆಗೆ